ಸಂಪುಟ: 06 ಸಂಚಿಕೆ: 70 ಪುಟಗಳು: 08 ಭಾನುವಾರ 24 ಮೇ 2026 www.udayavahini.in epaper.udayavahini.in Udaya vahini news Udaya vahini news Udayavahini news youGÓ...qbe udayavahininews@gmail.

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

**ಮುಂಜಾನೆ ಮಾತು**

ಜವಾಬ್ದಾರಿ ಇಲ್ಲದವನು ಮುಂಜಾನೆ ಏಳಲು ನೂರು ಬಾರಿ ಯೋಚಿಸುತ್ತಾನೆ. ಜವಾಬ್ದಾರಿ ಇದ್ದವನು ನಿದ್ರೆಯಲ್ಲೂ ಎದ್ದಿರುತ್ತಾನೆ.

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಪುನಾರಚನೆ ಭೀತಿ: ಸಚಿವರಲ್ಲಿ ಹೆಚ್ಚಿದ ಕುರ್ಚಿ ಪ್ರೀತಿ

• ಉದಯವಾಹಿನಿ, ಬೆಂಗಳೂರು

ರಾಜ್ಯ ಕಾಂಗ್ರೆಸ್ ಸರಕಾರದಲ್ಲಿ ನಾಯಕತ್ವ ಬದಲಾವಣೆ ಕುರಿತಾದ ಅಸ್ಪಷ್ಟತೆಗಳಿಂದ ಸಚಿವರಲ್ಲಿ ಆತಂಕ ಶುರುವಾಗಿದೆ. ಒಂದು ಕಡೆ ನಾಯಕತ್ವದ ಬಗ್ಗೆ ಪಕ್ಷದ ವರಿಷ್ಠರು ಸ್ಪಷ್ಟವಾಗಿ ಏನನ್ನು ಹೇಳುತ್ತಿಲ್ಲ. ಇದರಿಂದ ಗೊಂದಲಕ್ಕೀಡಾಗಿರುವ ಅನೇಕ ಸಚಿವರು ವರಿಷ್ಠರ ಭೇಟಿಗಾಗಿ ದಿಢೀರ್ ದೆಹಲಿ ದಂಡಯಾತ್ರೆ ಆರಂಭಿಸಿದ್ದಾರೆ.

ತಮ್ಮ ಸಚಿವ ಸ್ಥಾನದ ಭದ್ರತೆ ಬಗ್ಗೆ ವಿಶ್ವಾಸವಿಲ್ಲದ ಸಚಿವರು ಒಬ್ಬರಾದ ಮೇಲೆ ಒಬ್ಬರಂತೆ ತಮ್ಮ ಪೋಷಕ ವರಿಷ್ಠ ನಾಯಕರನ್ನು ಭೇಟಿಯಾಗುತ್ತಿದ್ದಾರೆ, ಅಷ್ಟೇ ಅಲ್ಲದೆ ಸಂಪುಟ ಪುನಾರಚನೆ ವೇಳೆ ತಮ್ಮನ್ನು ಮುಂದುವರಿಸಿ ಎಂದು ವಿನಂತಿಸುತ್ತಿದ್ದಾರೆ.

ಅದರಲ್ಲೂ ಕೆಲವು ಸಚಿವರು ಪಕ್ಷದ ವರಿಷ್ಠರಾದ ಮಲ್ಲಿಕಾರ್ಜುನ ಖರ್ಗೆ, ರಣದೀಪ್ ಸಿಂಗ್ ಸುರ್ಜೆವಾಲಾ ಹಾಗೂ ಕೆ.ಸಿ.ವೇಣುಗೋಪಾಲ್ ಸೇರಿದಂತೆ ಅನೇಕ ಹಿರಿಯ ನಾಯಕರನ್ನು ಭೇಟಿಯಾಗಿ ಮಂತ್ರಿ ಸ್ಥಾನ ಉಳಿಸಿಕೊಳ್ಳಲು ನಾನಾ ರೀತಿಯ ಮನವರಿಕೆ ಕಸರತ್ತು ನಡೆಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

## ಎಸ್.ಎಂ.ಕೃಷ್ಣ ಚಾರಿಟಬಲ್ ಟ್ರಸ್ಟ್‌ಗೆ ರಘುವೀರ್‌ಗೌಡ ಅವರಿಂದ 3 ಲಕ್ಷ ರೂ. ದೇಣಿಗೆ



• ಉದಯವಾಹಿನಿ, ಬೆಂಗಳೂರು

ಸಮಾಜ ಸೇವೆ ಹಾಗೂ ಜನಹಿತಕಾರಿ ಕಾರ್ಯಕ್ರಮಗಳಿಗೆ ಬೆಂಬಲವಾಗಿ ನಿಂತಿರುವ ಎಸ್.ಎಂ.ಕೃಷ್ಣ ಚಾರಿಟಬಲ್ ಟ್ರಸ್ಟ್‌ಗೆ ರಾಜಾಜಿನಗರ ರಘುವೀರ್ ಎಸ್.ಗೌಡ ಚಾರಿಟಬಲ್ ಟ್ರಸ್ಟ್ ವತಿಯಿಂದ 3 ಲಕ್ಷ ರೂ. ದೇಣಿಗೆ ನೀಡಲಾಗಿದೆ. ಬೆಂಗಳೂರು ನಗರವನ್ನು ಜಾಗತಿಕ ಮಟ್ಟದಲ್ಲಿ ಗುರುತಿಸುವಂತೆ ಮಾಡಿದ, ಆಧುನಿಕ ಬೆಂಗಳೂರಾಗಿ ರೂಪಿಸಿದ ದೂರದೃಷ್ಟಿ ನಾಯಕತ್ವದ ಧುರೀಣ ಎಸ್.ಎಂ.ಕೃಷ್ಣ ಅವರ ಮಹತ್ಕಾರ್ಯಗಳನ್ನು ಸರಿಸಿ ಭವಿಷ್ಯದ ಪೀಳಿಗೆಗೆ ಅವರ ಕಾರ್ಯಗಳು ಪ್ರೇರಣೆಯಾಗಲಿ ಎಂಬ ನಿಟ್ಟಿನಲ್ಲಿ ರಘುವೀರ್ ಗೌಡ ಅವರು ಎಸ್.ಎಂ.ಕೃಷ್ಣ ಚಾರಿಟಬಲ್ ಟ್ರಸ್ಟ್‌ಗೆ 3 ಲಕ್ಷ ರೂ. ದೇಣಿಗೆ ನೀಡಿದ್ದಾರೆ.

ಎಸ್.ಎಂ.ಕೃಷ್ಣ ನಾಯಕತ್ವದಲ್ಲಿ ಬೆಂಗಳೂರು ಮೂಲಸೌಕರ್ಯ, ತಂತ್ರಜ್ಞಾನ, ಬಂಡವಾಳ ಹೂಡಿಕೆ, ಶಿಕ್ಷಣ ಹಾಗೂ ಜಾಗತಿಕ ಮಾನ್ಯತೆಯಲ್ಲಿ ಅಪಾರ ಬೆಳವಣಿಗೆ ಕಂಡಿತು. ಅವರ ದೂರದೃಷ್ಟಿಯ ಫಲವಾಗಿ ಬೆಂಗಳೂರು ಭಾರತದ ಸಿಲಿಕಾನ್ ವ್ಯಾಲಿ ಎಂದು ಪ್ರಸಿದ್ಧಿಗೊಂಡಿತು.

## ಆರತಿ ಎತ್ತಿದ ಮಹಿಳೆಯರಿಗೆ ಗರಿಗರಿ ನೋಟ ನೀಡಿದ ಸಿಎಂ

• ಉದಯವಾಹಿನಿ, ಬೆಂಗಳೂರು

ಆನೇಕಲ್‌ನಲ್ಲಿ ದೇಶದ 2ನೇ ಅತೀ ದೊಡ್ಡ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣಕ್ಕೆ ಶಂಕುಸ್ಥಾಪನೆ ಸಮಾರಂಭ ವಿಜೃಂಭಣೆಯಿಂದ ನಡೆಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಐತಿಹಾಸಿಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಆಗಮಿಸಿದಾಗ ಅವರಿಗೆ ಭವ್ಯ ಸ್ವಾಗತ ದೊರೆಯಿತು. ಸಿದ್ದರಾಮಯ್ಯ ಅವರನ್ನು ಸ್ವಾಗತಿಸಲು ಅಪಾರ ಸಂಖ್ಯೆಯ ಜನರು ನೆರೆದಿದ್ದರು.

ಈ ಹೊಸ ಕ್ರಿಕೆಟ್ ಸ್ಟೇಡಿಯಂ ಬೆಂಗಳೂರಿನ ಕ್ರೀಡಾ ಲೋಕಕ್ಕೆ ಒಂದು ದೊಡ್ಡ ಮೈಲಿಗಲ್ಲು ಆಗಲಿದೆ. ಇದು ಚಿನ್ನಸ್ವಾಮಿ ಸ್ಟೇಡಿಯಂ ನಂತರ ಮತ್ತೊಂದು ಪ್ರಮುಖ ಕ್ರಿಕೆಟ್ ಅಖಾಡವಾಗಿ ಹೊರಹೊಮ್ಮಲಿದೆ. ಕಾರ್ಯಕ್ರಮದ ನಿಮಿತ್ತ ನೆರೆದಿದ್ದ ಜನಸಮೂಹದಲ್ಲಿ ಸಂಭ್ರಮ ಮನೆ ಮಾಡಿತ್ತು. ಜನರು ಪರಸ್ಪರ ಶುಭ ಕೋರಿ ಸಂಭ್ರಮ ವ್ಯಕ್ತಪಡಿಸುತ್ತಿದ್ದರು. ಚೆಲ್ಲಾ ಚೆಲ್ಲಾನೆ ಉದುರವ್ವ ಎಂಬಂತಹ ಹಾಡುಗಳ ಮೂಲಕ ಸಂಭ್ರಮ ಹೆಚ್ಚಾಗಿತ್ತು.

## ಸರ್ಕಾರದ ಕ್ರಿಮಿನಲ್ ಪ್ರಕರಣ ವಾಪಸ್ ವಿರುದ್ಧ ಹೋರಾಟ : ಛಲವಾದಿ ನಾರಾಯಣಸ್ವಾಮಿ

• ಉದಯವಾಹಿನಿ, ಬೆಂಗಳೂರು

ಕ್ರಿಮಿನಲ್ ಹಿನ್ನೆಲೆಯಲ್ಲಿ ವ್ಯಕ್ತಿಗಳ ಮೇಲೆ ದಾಖಲಾಗಿದ್ದ ಪ್ರಕರಣಗಳನ್ನು ವಾಪಸ್ ಪಡೆದಿರುವ ರಾಜ್ಯ ಸರ್ಕಾರ ತನ್ನ ನಿರ್ಧಾರ ಪುನರ್ ಪರಿಶೀಲನೆ ಮಾಡದಿದ್ದರೆ ರಾಜ್ಯಾದ್ಯಂತ ಹೋರಾಟ ನಡೆಸುವುದು ಅನಿವಾರ್ಯ ಎಂದು ವಿಧಾನಪರಿಷತ್‌ನ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಸರ್ಕಾರಕ್ಕೆ ಎಚ್ಚರಿಕೆ ಕೊಟ್ಟಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕ್ರಿಮಿನಲ್ ಪ್ರಕರಣಗಳನ್ನು ವಾಪಸ್ ಪಡೆಯಲು ಸರ್ಕಾರಕ್ಕೆ ಅಧಿಕಾರ ಇಲ್ಲ. ಇಂತಹ ಪ್ರಕರಣಗಳನ್ನು ಹಿಂಪಡೆಯುತ್ತಾರೆ ಎಂದರೆ ಸರ್ಕಾರವೇನು ನ್ಯಾಯಾಲಯವೇ? ಎಂದು ಪ್ರಶ್ನೆ ಮಾಡಿದರು. ಸರ್ಕಾರ ಇಂಥ ದುಂಡಾವರ್ತಿ ತೋರಬಾರದು. ಸರ್ಕಾರ ತನ್ನ ನಿರ್ಧಾರ ಹಿಂಪಡೆಯದಿದ್ದಲ್ಲಿ ಬಿಜೆಪಿ ಹೋರಾಟ ಮಾಡಬೇಕಾಗುತ್ತದೆ. ಜತೆಗೆ ಬಿಜೆಪಿ ಅಧಿಕಾರಕ್ಕೆ ಬಂದಾಗ ಈ ನಿರ್ಧಾರ ವಾಪಸ್ ಪಡೆಯುತ್ತೇವೆ ಎಂದು ಹೇಳಿದರು. ಗುಲ್ಬರ್ಗಾದ ಲಾಡ್ಲೆ ಮಶಾಯಿಕ್ ದರ್ಗಾ ಗಲಾಟೆ ಪ್ರಕರಣಗಳನ್ನು ವಾಪಸ್ ಪಡೆದಿರುವುದು ವೋಟ್ ಬ್ಯಾಂಕ್ ರಾಜಕಾರಣಕ್ಕಾಗಿ. ಓಲೈಕೆಗೆ ಸರ್ಕಾರ ಮುಂದಾಗಿದೆ.

# ಬೆಂಗಳೂರಿನಲ್ಲಿ ದೇಶದ 2ನೇ ಅತಿದೊಡ್ಡ ಕ್ರಿಕೆಟ್ ಸ್ಟೇಡಿಯಂಗೆ ಶಂಕುಸ್ಥಾಪನೆ



### ಅತ್ಯಾಧುನಿಕ ಸೌಲಭ್ಯಗಳಿವೆ

ಈ ಅತ್ಯಾಧುನಿಕ ಕ್ರೀಡಾಂಗಣದ ಒಳಾಂಗಣವು ಬ್ಯಾಡ್ಮಿಂಟನ್, ಬಾಸ್ಕೆಟ್ ಬಾಲ್, ವಾಲಿಬಾಲ್ ಮತ್ತು ಹ್ಯಾಂಡ್‌ಬಾಲ್, ಟೇಬಲ್ ಟೆನ್ನಿಸ್, ಸ್ಕ್ವ್ಯಾಷ್, ಕಬಡ್ಡಿ, ಖೋ-ಖೋ, ಜುಡೋ, ಟೈಕ್ವಾಂಡೋ, ಕುಸ್ತಿ, ಫೆನ್ಸಿಂಗ್ ಕೋರ್ಟ್ ಸೌಲಭ್ಯ ಹೊಂದಿರಲಿದೆ. ಹೊರಾಂಗಣವು ಸಿಂಥೆಟಿಕ್ ಅಥ್ಲೆಟಿಕ್ ಟ್ರ್ಯಾಕ್, ಪಾಡೆಲ್ ಮತ್ತು ಪಿಕಲ್‌ಬಾಲ್ ಆಟಗಳಿಗೆ ಅಂಕಣ ಹೊಂದಿರಲಿದೆ. ಅಲ್ಲದೇ, ಅಂತಾರಾಷ್ಟ್ರೀಯ ಗುಣಮಟ್ಟದ ಈಜುಕೊಳ, ಹೈ-ಡೈವಿಂಗ್ ಪೂಲ್ ಸಹ ನಿರ್ಮಾಣವಾಗಲಿದೆ. ಜನಸಮೂಹ ನಿರ್ವಹಣೆಗಾಗಿ ಸುತ್ತಲೂ ಸಾಕಷ್ಟು ಸ್ಥಳಾವಕಾಶ ಹೊಂದಿರಲಿದ್ದು, ಏಕಕಾಲದಲ್ಲಿ 500ಕ್ಕೂ ಅಧಿಕ ವಾಹನಗಳ ನಿಲುಗಡೆ ಮಾಡಬಹುದಾದ ಸುಸಜ್ಜಿತ ಬಹುಮಹಡಿ ಪಾರ್ಕಿಂಗ್ ವ್ಯವಸ್ಥೆಯನ್ನು ಇದು ಹೊಂದಿರಲಿದೆ. ಅಲ್ಲದೇ, ಮಳಿಗೆಗಳು, ಕ್ರೀಡಾ ಪರಿಕರಗಳ ಅಂಗಡಿ ಮತ್ತು ವಿಶಾಲವಾದ ಉಪಹಾರ ಗೃಹಗಳು, ಆಟಗಾರರು ಹಾಗೂ ಕ್ರೀಡಾ ಸಿಬ್ಬಂದಿ ವಾಸ್ತವ್ಯ ಹೂಡಲು ಹೈಟೆಕ್ ವಸತಿ ಗೃಹಗಳು, ಗಣ್ಯರ ತುರ್ತು ಆಗಮನಕ್ಕಾಗಿ ಹೆಲಿಪ್ಯಾಡ್, ಸುತ್ತಲೂ ಆಕರ್ಷಕ ಹಸಿರು ವಲಯವನ್ನು ಹೊಂದಿರಲಿದೆ ಎನ್ನಲಾಗಿದೆ.

### ಇನ್ನೆರಡು ವರ್ಷಗಳಲ್ಲಿ ನಿರ್ಮಾಣ ಕಾರ್ಯ ಪೂರ್ಣ

ಕರ್ನಾಟಕ ಗೃಹ ಮಂಡಳಿ ವತಿಯಿಂದ ಬರೋಬ್ಬರಿ 100 ಎಕರೆ ಜಾಗದಲ್ಲಿ, ಸುಮಾರು 900 ಕೋಟಿ ರೂಪಾಯಿ ಭಾರಿ ವೆಚ್ಚದಲ್ಲಿ ಈ ಅತ್ಯಾಧುನಿಕ ಸ್ಟೇಡಿಯಂ ನಿರ್ಮಾಣವಾಗುತ್ತಿದೆ. 80,000 ಆಸನಗಳ ಬೃಹತ್ ಸಾಮರ್ಥ್ಯ ಹೊಂದಲಿರುವ ಈ ಕ್ರೀಡಾಂಗಣವು ಕೇವಲ 2 ರಿಂದ 3 ವರ್ಷಗಳಲ್ಲಿ ಪೂರ್ಣಗೊಳ್ಳಲಿದೆ. ಕಾರ್ಯಕ್ರಮಕ್ಕೆ ಆಗಮಿಸಿದ ಗಣ್ಯರನ್ನು ಬೃಹತ್ ಗಾತ್ರದ ಆಪಲ್ ಹಾರ ಹಾಗೂ ಮಹಿಳೆಯರ ಪೂರ್ಣಕುಂಭ ಕಲಶ ಮತ್ತು ಸಾಂಪ್ರದಾಯಿಕ ಕಲಾತಂಡಗಳ ವೈಭವದೊಂದಿಗೆ ಅದ್ದೂರಿಯಾಗಿ ಸ್ವಾಗತಿಸಲಾಯಿತು.

### 75 ಎಕರೆ ಜಾಗದಲ್ಲಿ ನಿರ್ಮಾಣ

ನಗರದ ಹೃದಯಭಾಗದಲ್ಲಿರುವ ಚಿನ್ನಸ್ವಾಮಿ ಕ್ರೀಡಾಂಗಣವು ಕೇವಲ 32ಸಾವಿರ ಆಸನ ಸಾಮರ್ಥ್ಯ ಹೊಂದಿದ್ದು, ಅಂತಾರಾಷ್ಟ್ರೀಯ ಪಂದ್ಯಗಳು ಹಾಗೂ ಐಪಿಎಲ್ ಪಂದ್ಯಗಳಿಗೆ ಇದು ಸಾಕಾಗುತ್ತಿಲ್ಲ ಎಂಬ ಅಭಿಪ್ರಾಯ ವ್ಯಕ್ತವಾಗಿತ್ತು. ಹೀಗಾಗಿ ಈ ಕ್ರೀಡಾಂಗಣದ ಮೇಲಿನ ಒತ್ತಡ ತಗ್ಗಿಸಲು ಹೀಗಾಗಿ ನೂತನ ಕ್ರೀಡಾಂಗಣವನ್ನು ಬಹಳ ದೊಡ್ಡದಾಗಿ 75 ಎಕರೆ ಜಾಗದಲ್ಲಿ ಸ್ಟೇಡಿಯಂನಲ್ಲಿ 80 ಸಾವಿರ ಜನರಿಗೆ ಆಸನ ವ್ಯವಸ್ಥೆ ಇದೆ. ಆ ಮೂಲಕ ಇದು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣಕ್ಕಿಂತ ಎರಡು ಪಟ್ಟು ದೊಡ್ಡದಾಗಿದೆ. ಈ ಸ್ಟೇಡಿಯಂ ಅಂತಾರಾಷ್ಟ್ರೀಯ ಪಂದ್ಯಗಳಿಗೆ ಮಾತ್ರವಲ್ಲದೆ ಕರ್ನಾಟಕದಲ್ಲಿ ಕ್ರೀಡೆಗಳ ಉತ್ತೇಜನ ಸಂಬಂಧವೂ ಮಹತ್ವದ ಪಾತ್ರವಹಿಸಲಿದೆ. ಕ್ರಿಕೆಟ್ ತರಬೇತಿ ಕೇಂದ್ರಗಳು, ಯುವಕರ ಕ್ರೀಡಾ ಕಾರ್ಯಕ್ರಮಗಳಿಗೆ ಇದು ವೇದಿಕೆಯಾಗಲಿದೆ. ಶಾಲೆ, ಕಾಲೇಜು ಹಾಗೂ ರಾಜ್ಯ ಮಟ್ಟದ ಕ್ರೀಡಾಕೂಟಗಳಿಗೂ ಅವಕಾಶ ಕಲ್ಪಿಸುವ ಮೂಲಕ ಸ್ಥಳೀಯ ಪ್ರತಿಭೆಗಳನ್ನು ಬೆಳೆಸುವ ಉದ್ದೇಶ ಹೊಂದಲಾಗಿದೆ.

**ಕಾರ್ಯಕ್ರಮಗಳಿಗೆ ಇದು ವೇದಿಕೆ**

**ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣಕ್ಕಿಂತ ಎರಡು ಪಟ್ಟು ದೊಡ್ಡದಾಗಿದೆ.**



• ಉದಯವಾಹಿನಿ, ಬೆಂಗಳೂರು

ಸೂರ್ಯನಗರದಲ್ಲಿ ಅಂತಾರಾಷ್ಟ್ರೀಯ ಗುಣಮಟ್ಟದ ಕ್ರೀಡಾಂಗಣ ನಿರ್ಮಾಣಕ್ಕೆ ಮುಂದಾಗುವ ಮೂಲಕ ಕ್ರೀಡೆ, ಪ್ರವಾಸೋದ್ಯಮ, ಉದ್ಯೋಗ ಸೃಷ್ಟಿ, ಆರ್ಥಿಕ ಬೆಳವಣಿಗೆ ಸೇರಿ ಎಲ್ಲಾ ದೃಷ್ಟಿಯಿಂದ ಈ ಭಾಗದ ಸಮಗ್ರ ಅಭಿವೃದ್ಧಿಗೆ ನಾವು ಮುಂದಡಿ ಇಟ್ಟಿದ್ದೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನುಡಿದರು. ವಸತಿ ಇಲಾಖೆ, ಕರ್ನಾಟಕ ಗೃಹ ಮಂಡಳಿ ಜಂಟಿಯಾಗಿ ಸೂರ್ಯಗ್ರಾಮದಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ಶಂಕುಸ್ಥಾಪನೆ, ಮುಖ್ಯಮಂತ್ರಿಗಳ ನಮ್ಮ ಮನೆ ಯೋಜನೆಗೆ ಚಾಲನೆ, ಸೂರ್ಯಶೈನ್, ಸೂರ್ಯ ಡಿವೈನ್ ವಸತಿ ಸಮುಚ್ಚಯ ಕಾಮಗಾರಿಗಳ ಶಂಕುಸ್ಥಾಪನೆ, ವಸತಿ ಯೋಜನೆಗೆ ಭೂಮಿ ನೀಡಿದ ಭೂ ಮಾಲೀಕರಿಗೆ ಸಾಂಕೇತಿಕ ನಿವೇಶನ ಹಂಚಿಕೆ ಕಾರ್ಯಕ್ರಮಗಳನ್ನು ಉದ್ಘಾಟಿಸಿ ಮಾತನಾಡಿದರು.

ಇಲ್ಲಿಯವರೆಗೂ ಕೇವಲ ವಸತಿ ನಿರ್ಮಾಣ ಮಾಡುತ್ತಿದ್ದ ವಸತಿ ಇಲಾಖೆ ಮತ್ತು ಈಗ 80 ಸಾವಿರ ಆಸನ ವ್ಯವಸ್ಥೆಯ ಕ್ರೀಡಾಂಗಣ ನಿರ್ಮಾಣಕ್ಕೆ ಮುಂದಾಗಿರುವುದು ಪ್ರಗತಿಯ ದೂರದೃಷ್ಟಿಯಾಗಿದೆ .

ಇದಕ್ಕಾಗಿ ಶಿವಲಿಂಗೇಗೌಡರು ಮತ್ತು ಜಮೀರ್ ಅಹಮದ್ ಅವರು ಅಭಿನಂದನಾರ್ಹರು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಗುಜರಾತ್ ನಲ್ಲಿರುವ ಕ್ರೀಡಾಂಗಣ 90 ಸಾವಿರ ಆಸನ ವ್ಯವಸ್ಥೆ ಇರುವಂಥಾದ್ದು. ನಮ್ಮ ರಾಜ್ಯದ್ದು ಎರಡನೇ ದೊಡ್ಡ ಕ್ರೀಡಾಂಗಣವಾಗಿದೆ. ಇದರಿಂದ ಪ್ರವಾಸೋದ್ಯಮದ ಪ್ರಗತಿಯ ಜೊತೆಗೆ ಸುತ್ತ ಮುತ್ತಲ ಊರುಗಳ ಆರ್ಥಿಕತೆಯೂ ಹೆಚ್ಚುತ್ತದೆ. ಉದ್ಯೋಗವೂ ಹೆಚ್ಚುತ್ತದೆ. ಸರ್ಕಾರದ ಆರ್ಥಿಕ ನೆರವಿಲ್ಲದೆ ಹಣದಿಂದಲೇ ಕ್ರೀಡಾಂಗಣ ನಿರ್ಮಾಣ ಆಗಲಿದೆ ಎಂದು ಶಿವಲಿಂಗೇಗೌಡರು ಹೇಳಿದ್ದಾರೆ ಎಂದು ಸಿಎಂ ಉಲ್ಲೇಖಿಸಿದರು. ಖಾಲಿ ಇರುವ ನಿವೇಶನಗಳ ಮಾರಾಟದಿಂದಗೆ 20ಸಾವಿರ ಕೋಟಿ ಆದಾಯ ಬರುವ ಅಂದಾಜಿದೆ. ನೆತ್ತಿ ಮೇಲೆ ಸೂರು ಇರಬೇಕು ಎನ್ನುವುದು ಪ್ರತಿಯೊಬ್ಬರ ಆಸೆ. ಈಗ ಭೂಮಿ ಬೆಲೆ ಹೆಚ್ಚುತ್ತಿರುವುದರಿಂದ ಬಡ, ಮಧ್ಯಮ ವರ್ಗದವರಿಗೆ ಕೈಗೆಟುಕುವ ದರದಲ್ಲಿ ನಿವೇಶನಗಳನ್ನು ನಿರ್ಮಿಸಿ ಒದಗಿಸುತ್ತಿದೆ ಎಂದರು.



ಈ ಭಾಗದ ಅಭಿವೃದ್ಧಿಗೆ ಪೂರಕವಾಗಿ ಜಿಗಣಿ ಹೋಬಳಿಯ ಪ್ರಮುಖ ಸಂಪರ್ಕ ರಸ್ತೆ ನಿರ್ಮಾಣಕ್ಕೂ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಅಧಿಕಾರಿಗಳು ಈ ಕೆಲಸವನ್ನೂ ಆರಂಭಿಸುತ್ತಾರೆ.

ಕ್ರೀಡಾಂಗಣ, ರಸ್ತೆ ಮಾತ್ರವಲ್ಲದೆ ವಸತಿ ಇಲಾಖೆ ಈ ಬಾರಿ ಇಲ್ಲಿಯವರೆಗೂ 3ಲಕ್ಷಕ್ಕೂ ಹೆಚ್ಚು ಮನೆ ಮತ್ತು ನಿವೇಶನಗಳನ್ನೂ ರಾಜ್ಯದಲ್ಲಿ ನೀಡಲಾಗಿದೆ ಎಂದರು.ಹೀಗಾಗಿ ಕ್ರೀಡೆ, ಪ್ರವಾಸೋದ್ಯಮ, ಉದ್ಯೋಗ ಸೃಷ್ಟಿ, ಆರ್ಥಿಕ ಬೆಳವಣಿಗೆ ಸೇರಿ ಎಲ್ಲಾ ದೃಷ್ಟಿಯಿಂದ ಸಮಗ್ರ ಅಭಿವೃದ್ಧಿಗೆ ನಾವು ನಾಂದಿ ಹಾಡಿದ್ದೇವೆ ಎಂದರು.

### ವಿಶೇಷತೆಗಳೇನು

ಕರ್ನಾಟಕ ಗೃಹ ಮಂಡಳಿ ವತಿಯಿಂದ ಸುಮಾರು 70-75 ಎಕರೆ ಜಾಗದಲ್ಲಿ ಬರೋಬ್ಬರಿ 900 ಕೋಟಿಗೂ ಅಧಿಕ ರೂಪಾಯಿ ವೆಚ್ಚದಲ್ಲಿ ಈ ಅತ್ಯಾಧುನಿಕ ಸ್ಟೇಡಿಯಂ ನಿರ್ಮಾಣವಾಗುತ್ತಿದೆ. ಇದು 80 ಸಾವಿರ ಆಸನಗಳ ಸಾಮರ್ಥ್ಯ ಹೊಂದಿರಲಿದ್ದು, ದೇಶದಲ್ಲಿ ಎರಡನೇ ದೊಡ್ಡ ಸ್ಟೇಡಿಯಂ ಎನಿಸಲಿದೆ. ಪ್ರಸ್ತುತ 1.32 ಲಕ್ಷ ಆಸನಗಳ ಸಾಮರ್ಥ್ಯ ಹೊಂದಿರುವ ಅಹಮದಾಬಾದ್‌ನ ನರೇಂದ್ರ ಮೋದಿ ಸ್ಟೇಡಿಯಂ ದೇಶದ ಅತಿದೊಡ್ಡ ಸ್ಟೇಡಿಯಂ ಎನಿಸಿದೆ. ಡಿಸಿಎಂ ಡಿ.ಕೆ.ಶಿವಕುಮಾರ್, ಗೃಹ ಸಚಿವ ಜಿ.ಪರಮೇಶ್ವರ್, ವಸತಿ ಸಚಿವ ಜಮೀರ್ ಅಹಮದ್, ಕೆಹೆಚ್ ಬಿ ಅಧ್ಯಕ್ಷರಾದ ಶಾಸಕ ಶಿವಲಿಂಗೇಗೌಡ, ಶಾಸಕ ಆನೇಕಲ್ ಶಿವಣ್ಣ, ಹಿರಿಯ ಶಾಸಕರುಗಳಾದ ಟಿ.ಬಿ.ಜಯಚಂದ್ರ, ಕೃಷ್ಣಪ್ಪ, ಮಾಜಿ ಸಂಸದ ಡಿ.ಕೆ.ಸುರೇಶ್, ಕೊಳೆಗೇರಿ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾದ ಶಾಸಕ ಅಬ್ಬಯ್ಯ, ರಾಮೋಜಿಗೌಡ ಹೆಚ್.ಎಂ.ರೇವಣ್ಣ ಗಣ್ಯರು ಉಪಸ್ಥಿತರಿದ್ದರು.

## ತುಷ್ಟೀಕರಣದ ಪರಾಕಾಷ್ಠೆ ತಲುಪಿರುವ ಕಾಂಗ್ರೆಸ್ ಸರ್ಕಾರ: ಜೋಶಿ ಕಿಡಿ

• ಉದಯವಾಹಿನಿ, ಬೆಂಗಳೂರು

ರಾಜ್ಯ ಸರ್ಕಾರ 52 ಪ್ರಕರಣಗಳನ್ನು ವಾಪಸ್‌ಪಡೆದಿದೆ. ತೋರಿಕೆಗೆ ಕೆಲವು ಕನ್ನಡ ಹೋರಾಟಗಾರರು, ರೈತ ಹೋರಾಟಗಾರರು ಹಾಗೂ ಹಿಂದೂ ಹೋರಾಟಗಾರರ ಪ್ರಕರಣಗಳನ್ನು ಸೇರಿಸಿದರೂ, ದುರುದ್ದೇಶಪೂರ್ವಕ ಕ್ರಿಮಿನಲ್ ಪ್ರಕರಣಗಳನ್ನು ಕೈಬಿಡಲಾಗಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಹೇಳಿದರು.

ನಗರದಲ್ಲಿ ಮಾಧ್ಯಮಗೋಷ್ಠಿ ನಡೆಸಿ ಮಾತನಾಡಿದ ಅವರು, ದೇವಸ್ಥಾನ ಅಪವಿತ್ರಗೊಳಿಸಿದವರು, ಪೊಲೀಸ್ ಠಾಣೆ ಮೇಲೆ ದಾಳಿ ನಡೆಸಿದವರ ವಿರುದ್ಧದ ಪ್ರಕರಣಗಳನ್ನೂ ವಾಪಸ್ ಪಡೆಯಲಾಗಿದೆ. ಇದು ಇಸ್ಲಾಮಿಕ್ ಶಕ್ತಿಗಳನ್ನು ಬಿಡುವ ಸಲುವಾಗಿ ತೆಗೆದುಕೊಂಡ ನಿರ್ಧಾರ ಎಂದು ಆರೋಪಿಸಿದರು.

ರಾಜ್ಯ ಸರ್ಕಾರದ ತುಷ್ಟೀಕರಣ ನೀತಿ ಪರಾಕಾಷ್ಠೆ ತಲುಪಿದ್ದು, ಅದರ ಸ್ಪಷ್ಟ ಉದಾಹರಣೆಯಾಗಿ ಕೇವಲ ಮುಸ್ಲಿಂ ಕಾಲೋನಿಗಳ ಅಭಿವೃದ್ಧಿಗೆ ಹಣ ಬಿಡುಗಡೆ ಮಾಡಿರುವುದನ್ನು ಉಲ್ಲೇಖಿಸಿದರು. ಅಲ್ಪಸಂಖ್ಯಾತರ ಕಾಲೇಜು, ಶಾಲೆ ಹಾಗೂ ವಸತಿ ನಿಲಯಗಳ ಅಭಿವೃದ್ಧಿಗೆ ಮಾತ್ರ ಆದ್ಯತೆ ನೀಡಲಾಗಿದೆ' ಎಂದು ದೂರಿದರು.

ಕಾಂಗ್ರೆಸ್ ಪಕ್ಷ ತುಷ್ಟೀಕರಣ ರಾಜಕಾರಣದಿಂದ ದೇಶದಲ್ಲಿ ನಿರ್ನಾಮದತ್ತ ಸಾಗುತ್ತಿದೆ. ಗಂಭೀರ ಸ್ವರೂಪದ ಪ್ರಕರಣಗಳನ್ನೂ ಹಿಂಪಡೆಯಲಾಗಿದೆ. ಹುಬ್ಬಳ್ಳಿಯಲ್ಲಿ ನಡೆದ ಗಲಭೆ, ಹಲ್ಲೆ, ಕಲ್ಲು ತೂರಾಟ ಹಾಗೂ ಬೆಂಗಳೂರಿನ ಗಲಭೆಗಳ ಪ್ರಕರಣಗಳನ್ನು ಕೈಬಿಡಲು ಪ್ರಯತ್ನಿಸಲಾಗಿದೆ. ಈ ಕುರಿತು ನ್ಯಾಯಾಲಯವೇ ಪ್ರಶ್ನೆ ಮಾಡಿದೆ ಎಂದರು. 165 ಜನರು ಅತ್ಯಂತ ವ್ಯವಸ್ಥಿತವಾಗಿ ದಾಳಿ ನಡೆಸಿದ್ದರು. ಇಂತಹ ಪ್ರಕರಣಗಳನ್ನು ವಾಪಸ್ ಪಡೆಯುವುದನ್ನು ತೀವ್ರವಾಗಿ ಖಂಡಿಸುತ್ತೇವೆ.

## ದೇವನೂರು ಭೇಟಿಯಾದ ಸಚಿವ ಮಧು ಬಂಗಾರಪ್ಪ: ಕೆಪಿಎಸ್ ಶಿಕ್ಷಣದ ಕುರಿತು ಸಲಹೆ

• ಉದಯವಾಹಿನಿ ,ಬೆಂಗಳೂರು

ಸಚಿವ ಮಧು ಬಂಗಾರಪ್ಪ ಅವರು ಹಿರಿಯ ಸಾಹಿತಿ ದೇವನೂರು ಮಹಾದೇವ ಅವರನ್ನು ಮೈಸೂರಿನಲ್ಲಿಂದು ಭೇಟಿಯಾಗಿ ಕೆಪಿಎಸ್ (ಕರ್ನಾಟಕ ಪಬ್ಲಿಕ್ ಶಾಲೆ) ಶಿಕ್ಷಣದ ಕುರಿತು ಕೆಲವು ಸಲಹೆಗಳನ್ನು ಪಡೆದರು.

ಮಾಧ್ಯಮಗಳೊಂದಿಗೆ ಮಾತನಾಡಿದ ಸಚಿವರು, ಒಬ್ಬ ಶಿಕ್ಷಣ ಸಚಿವನಾಗಿ ಹಿರಿಯ ಸಾಹಿತಿಗಳ ಸಲಹೆ ಬೇಕಿತ್ತು. ಅದಕ್ಕಾಗಿ ಅವರನ್ನು ಇಂದು ಭೇಟಿ ಮಾಡಿ ಚರ್ಚೆ ಮಾಡಿದೆ. ನನ್ನ ಮೇಲೆ ಸಾಕಷ್ಟು ಟೀಕೆ ಟಿಪ್ಪಣಿಗಳು ಬಂದಿದ್ದವು. ಈ ಸಾರಿಯ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಒಳ್ಳೆಯ ಫಲಿತಾಂಶ ಬಂತು. ಇದಕ್ಕೆ ಕಾರಣ ನಾವು ಬದಲಾವಣೆ ತಂದಿದ್ದು. ಶಿಕ್ಷಣ ವ್ಯವಸ್ಥೆ ಬಹಳಷ್ಟು ಹಾಳಾಗಿತ್ತು.

ವೆಬ್ ಕಾಸ್ಟ್ ಮಾಡಿ ವ್ಯವಸ್ಥೆಯನ್ನು ಸರಿಪಡಿಸಿದ್ದೇವೆ. ಅಲ್ಲದೇ, ಶಿಕ್ಷಣ ಇಲಾಖೆಯಲ್ಲಿ ಸಾಕಷ್ಟು ಸುಧಾರಣೆ ತಂದಿದ್ದೇವೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಶಿಕ್ಷಣ ಸುಧಾರಿಸಿದೆ. ಸಮಾನತೆ ಹಾಗೂ ಒಳ್ಳೆಯ ಶಿಕ್ಷಣ ಕೊಡೋದು ನಮ್ಮ ಕರ್ತವ್ಯ. ಅದನ್ನು ನಾವು ಮಾಡುತ್ತೇವೆ. ಕಲೆ, ನಾಟಕ, ಸಾಹಿತ್ಯದ ಬಗ್ಗೆಯೂ ಮಕ್ಕಳಿಗೆ ತಿಳಿಸುವ ಕುರಿತು ದೇವನೂರು ಮಹದೇವ ಅವರು ಸಲಹೆ ನೀಡಿದ್ದಾರೆ. ಕೆಪಿಎಸ್ ಶಿಕ್ಷಣ ನೀಡುವ ಕುರಿತು ಸಹ ಸಲಹೆ ನೀಡಿದರು.

## ಹೆಚ್.ಡಿ.ದೇವೇಗೌಡರ ರಾಜ್ಯಸಭೆ ಮರು ಆಯ್ಕೆಗೆ ನಮ್ಮ ವಿರೋಧ ಇಲ್ಲ: ಆರ್. ಅಶೋಕ್

• ಉದಯವಾಹಿನಿ, ಬೆಂಗಳೂರು

ಬೆಂಗಳೂರು: ಹೆಚ್.ಡಿ. ದೇವೇಗೌಡರ ರಾಜ್ಯಸಭೆ ಮರು ಆಯ್ಕೆಗೆ ನಮ್ಮ ವಿರೋಧ ಇಲ್ಲ. ಯಾರ ಪರವೂ ನಮ್ಮ ತೀರ್ಮಾನ ಇಲ್ಲ. ನಮ್ಮಲ್ಲಿ ಗೊಂದಲ ಏನೂ ಇಲ್ಲ. ಇದರ ಬಗ್ಗೆ ಹೈಕಮಾಂಡ್ ನಿರ್ಧಾರ ಮಾಡುತ್ತದೆ ಎಂದು ವಿಪಕ್ಷ ನಾಯಕ ಆರ್. ಅಶೋಕ್ ಸ್ಪಷ್ಟಪಡಿಸಿದರು.

ಬೆಂಗಳೂರಲ್ಲಿ ಮಧ್ಯಮದವರೊಂದಿಗೆ ಮಾತನಾಡಿದ ಅವರು, ರಾಜ್ಯಸಭೆಗೆ ದೇವೇಗೌಡರ ಮರು ಆಯ್ಕೆ ವಿಚಾರವಾಗಿ ಪ್ರತಿಕ್ರಿಯಿಸುತ್ತಾ, ನಮ್ಮ ವರಿಷ್ಠರು ನಿರ್ಧಾರ ಮಾಡ್ತಾರೆ. ನಮ್ಮ ಬಳಿ ಯಾರೂ ಬಂದು ಕೇಳಿಲ್ಲ. ರಾಜ್ಯ ಬಿಜೆಪಿ ನಾಯಕರ ಜೊತೆ ಜೆಡಿಎಸ್ ನಾಯಕರು ಇದರ ಬಗ್ಗೆ ಚರ್ಚೆ ಮಾಡಿಲ್ಲ ಎಂದರು.

**ಬಿಜೆಪಿ ಹೋರಾಟ ಮಾಡಲಿದೆ:** ಆಳಂದ ಲಾಡ್ಲೆ ಮಶಾಕ್ ದರ್ಗಾ ಪ್ರಕರಣಗಳ ವಾಪಸ್ ಬಗ್ಗೆ ಪ್ರತಿಕ್ರಿಯಿಸುತ್ತಾ, ಕೋಮು ಗಲಭೆ ನಡೆಸಿದವರ ಮೇಲಿನ ಕೇಸ್‌ಗಳನ್ನು ವಾಪಸ್ ಪಡೆದಿದ್ದು ಅಕ್ಷಮ್ಯ. ಡಿಜೆ ಹಳ್ಳಿ, ಕೆಜಿ ಹಳ್ಳಿ ಕೇಸ್ ಗಳನ್ನೂ ವಾಪಸ್ ಪಡೆದರು. ಇದು ಕಾಂಗ್ರೆಸ್‌ನ ವೋಟ್ ಪಾಲಿಟಿಕ್ಸ್, ಓಲೈಕೆ ರಾಜಕಾರಣ. ಸಂವಿಧಾನಬಾಹಿರವಾಗಿ ಕೇಸ್‌ಗಳನ್ನು ವಾಪಸ್ ಪಡೆದಿದ್ದಾರೆ. ಪೊಲೀಸರ ಮೇಲೆ ಹಲ್ಲೆ ನಡೆಸಿದವರ ಮೇಲಿನ ಕೇಸ್ ವಾಪಸ್ ಪಡೆದಿರುವುದು ಸರಿಯಲ್ಲ. ಈ ಪ್ರವೃತ್ತಿ ದೇಶದ ಭದ್ರತೆಗೆ ಆತಂಕ ತರಲಿದೆ. ಸರ್ಕಾರ ಕೂಡಲೇ ತನ್ನ ನಿರ್ಧಾರ ಹಿಂಪಡೆಯಲಿ ಇಲ್ಲದಿದ್ದರೆ ಬಿಜೆಪಿ ಹೋರಾಟ ಮಾಡಲಿದೆ. ದಾವಣಗೆರೆ ಚುನಾವಣೆ ನಂತರ ಸರ್ಕಾರ ಮುಸ್ಲಿಮರಿಗೆ ಬಂಪರ್ ಗಿಫ್ಟ್ ಕೊಡುತ್ತಿದೆ. ಹಿಜಾಬ್ ವಾಪಸ್ ತಂದರು. ಕಲ್ಲು ತೂರಾಟ ನಡೆಸಿದವರಿಗೆ, ಪೊಲೀಸರ ಮೇಲೆ ಹಲ್ಲೆ ನಡೆಸಿದವರ ಕೇಸ್ ವಾಪಸ್ ಪಡೆಯಬಾರದು ಎಂದು ಒತ್ತಾಯಿಸಿದರು.



ಸ್ಟೇಡಿಯಂ ಯಾವ ಪುರುಷಾರ್ಥಕ್ಕೆ ಆನೇಕಲ್‌ನಲ್ಲಿ ಮತ್ತೊಂದು ಸ್ಟೇಡಿಯಂ ಯಾವ ಪುರುಷಾರ್ಥಕ್ಕೆ ಕಮೀಷನ್‌ಗಾಗಿ ಮತ್ತೊಂದು ಸ್ಟೇಡಿಯಂ ಮಾಡಲು ಹೊರಟಿದ್ದೀರಾ? ಆನೇಕಲ್ ಸುತ್ತಮುತ್ತ ಜಮೀನು ಬೆಲೆ ಜಾಸ್ತಿ ಆಗಲು ಅಂತ ಮಾಡುತ್ತಿದ್ದೀರಾ? ಸೂರ್ಯನಗರ ಸ್ಟೇಡಿಯಂ ದುಡ್ಡು ಹೊಡೆಯುವ ಸ್ಕೀಂ. ಯಾವ ಆಟಗಾರ ಸ್ಟೇಡಿಯಂ ಕೇಳಿದ್ರು? ಯಾರು ಕೇಳಿದ್ರು ಅಂತ ಸ್ಟೇಡಿಯಂ ಮಾಡ್ತಿದ್ದೀರಿ? ಕೋಟಿ ಕೋಟಿ ಹಣ ಬರುವ ಸ್ಕೀಂಗಳಿಗೆ ಸರ್ಕಾರ ಮುಂದಾಗಿದೆ. ನಾನು ನಿನ್ನೆ ಅಲ್ಲಿಗೇ ಹೋಗಿ ಭೇಟಿ ಕೊಟ್ಟಿದ್ದೆ. ಸೂರ್ಯನಗರದಲ್ಲಿ ಮನೆಗಳನ್ನೇ ಹೆಚ್ಚಾಗಿ ಕಟ್ಟಿಲ್ಲ, ಮೂವತ್ತು ವರ್ಷವಾದರೂ 95%ರಷ್ಟು ನಿವೇಶನಗಳು ಖಾಲಿ ಇವೆ. ಬಿಡದಿ ಟೌನ್‌ಶಿಪ್ ಸಹ ಇದೇ ರೀತಿ. ಅಲ್ಲಿ ದುಡ್ಡು, ಜಮೀನು ನಿಕ್ಷೇಪ ಇದೆ ಅಂತ ಡಿಕೆಶಿ ಟೌನ್‌ಶಿಪ್‌ಗೆ ಮುಂದಾಗಿದ್ದಾರೆ ಎಂದು ವಾಗ್ದಾಳಿ ನಡೆಸಿದರು. ಓಸಿಯಾಗಿ ರೈತರ ಜಮೀನು ಕಬಳಿಸಲು ಮುಂದಾಗಿದ್ದಾರೆ. ರೈತರ ಸಮಾಧಿ ಮೇಲೆ ಟೌನ್‌ಶಿಪ್ ಮಾಡುತ್ತಿದ್ದಾರೆ. ನಮ್ಮ ಸರ್ಕಾರ ಇದ್ದಾಗ ಬಿಡದಿ ಟೌನ್‌ಶಿಪ್ ಕೈಬಿಟ್ಟಿದ್ದೆವು.

## ಸಿಎಂ ಸೇರಿ ಯಾವುದೇ ಹುದ್ದೆ ಕೊಟ್ಟರೂ ನಿಭಾಯಿಸಬಲ್ಲೆ : ಅಚ್ಚರಿ ಹೇಳಿಕೆ ಕೊಟ್ಟ ಪರಮೇಶ್ವರ್

• ಉದಯವಾಹಿನಿ, ಬೆಂಗಳೂರು:

ಮುಖ್ಯಮಂತ್ರಿ ಸೇರಿದಂತೆ ಯಾವುದೇ ಹುದ್ದೆ ಕೊಟ್ಟರೂ ನಿಭಾಯಿಸುವ ಸಾಮರ್ಥ್ಯ ನನಗಿದೆ ಎಂದು ಗೃಹಸಚಿವ ಡಾ.ಜಿ.ಪರಮೇಶ್ವರ್ ತಿಳಿಸಿದರು.ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗೃಹಸಚಿವನಾಗಿ ಇದುವರೆಗೆ 8 ವರ್ಷಗಳ ಕಾಲ ಸಮರ್ಥವಾಗಿ ಕಾರ್ಯ ನಿರ್ವಹಿಸಿದ್ದೇನೆ. ಗೃಹಸಚಿವನಾಗಿರುವುದಕ್ಕೆ ನನಗೆ ಯಾವುದೇ ಬೇಸರವಿಲ್ಲ ಎಂದು ಸ್ಪಷ್ಟಪಡಿಸಿದರು.

ಗೃಹಖಾತೆಯ ಜೊತೆಗೆ ಯಾವುದೇ ಹೆಚ್ಚುವರಿ ಜವಾಬ್ದಾರಿ ವಹಿಸಿದರೂ ನಿರ್ವಹಿಸುತ್ತೇನೆ. ಮುಖ್ಯಮಂತ್ರಿ ಸ್ಥಾನ ಕೊಟ್ಟರೂ ನಿಭಾಯಿಸುತ್ತೀರಾ ಎಂಬ ಪ್ರಶ್ನೆಗೆ ಅವರು, ಏನೇ ಕೊಟ್ಟರೂ ನಿಭಾಯಿಸುತ್ತೇನೆ. ಆ ಸಾಮರ್ಥ್ಯ ನನಗಿದೆ ಎಂದರು. ಸಂಪುಟ ಪುನರ್‌ರಚನೆ ಸಂದರ್ಭದಲ್ಲಿ ಖಾತೆ ಬದಲಾವಣೆಗೆ ಕೇಳಿದ್ದೀರಾ? ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಗೃಹಖಾತೆ ಬದಲಾಯಿಸುವಂತೆ ನಾನು ಯಾರನ್ನೂ ಕೇಳಿಲ್ಲ ಎಂದು ಸ್ಪಷ್ಟಪಡಿಸಿದರು.

ಶಾಸಕರು ಸಚಿವ ಸ್ಥಾನ ನೀಡುವಂತೆ ಕೋರುವುದರಲ್ಲಿ ಯಾವುದೇ ತಪ್ಪಿಲ್ಲ. ಎರಡು-ಮೂರು ಬಾರಿ ಶಾಸಕರಾಗಿದ್ದಾರೆ. ಅವರಿಗೂ ಸಚಿವರಾಗಬೇಕೆಂಬ ಅಪೇಕ್ಷೆ ಇದೆ.

ಹೀಗಾಗಿ ಹೈಕಮಾಂಡ್ ಮೇಲೆ ಅವರು ಒತ್ತಡ ತರುತ್ತಿರಬಹುದು. ಆದರೆ ಶೇ.15ಕ್ಕಿಂತ ಹೆಚ್ಚು ಸಚಿವ ಸ್ಥಾನ ನೀಡಲಾಗುವುದಿಲ್ಲ. ಕೆಲವು ಹಿರಿಯ ಸಚಿವರನ್ನು ಸಂಪುಟದಿಂದ ಕೈ ಬಿಡುವುದು ಹೈಕಮಾಂಡ್‌ಗೆ ಬಿಟ್ಟ ವಿಚಾರ ಎಂದರು. ಕಾಕ್ರೋಜ್ ಜನತಾ ಪಕ್ಷಕ್ಕೆ ಸಮಾವೇಶ ನಡೆಸಲು ಪೊಲೀಸರು ಅನುಮತಿ ನಿರಾಕರಿಸಿರುವ ಬಗ್ಗೆ ಕೇಳಲಾದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವರು, ಯಾವ ಉದ್ದೇಶಕ್ಕೆ ಸಮಾವೇಶ ಮಾಡುತ್ತಿದ್ದಾರೆ?, ಯಾರ್ಯಾರು ಭಾಗಿಯಾಗುತ್ತಾರೆ ಎಂಬುದನ್ನೆಲ್ಲಾ ಪೊಲೀಸರು ಪರಿಶೀಲಿಸಿ ಅನುಮತಿ ಕೊಡಬೇಕೇ, ಬಿಡಬೇಕೇ ಎನ್ನುವುದನ್ನು ನಿರ್ಧರಿಸುತ್ತಾರೆ. ಈ ವಿಚಾರದಲ್ಲಿ ಅಗತ್ಯ ಕ್ರಮ ಕೈಗೊಳ್ಳುವುದು ಪೊಲೀಸರಿಗೆ ಬಿಟ್ಟ ವಿಚಾರ ಎಂದರು.



ರಾಜಕಾರಣಿಗಳು ರಾಜಕೀಯ ಮಾಡುತ್ತಾರೆ. ಪೊಲೀಸಿನವರು ಅವರ ಕೆಲಸ ಮಾಡುತ್ತಾರೆ. ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವುದು ಅವರ ಜವಾಬ್ದಾರಿ. ನಮ ಪಕ್ಷ ನಮ ನಾಯಕರು ಬೆಂಬಲ ನೀಡುವುದು ಬೇರೆ. ಪೊಲೀಸರು ಅವರ ಕೆಲಸವನ್ನು ಮಾಡುತ್ತಾರೆ. ಪೊಲೀಸರ ನಿರ್ಧಾರವನ್ನು ಓವರ್ ರೂಲ್ ಮಾಡಿ ಸರ್ಕಾರ ಅನುಮತಿ ಕೊಡುವುದಾದರೆ ಅದು ಬೇರೆ ವಿಚಾರವಾಗಲಿದೆ ಎಂದು ಹೇಳಿದರು. ವಿವಿಧ ಹಬ್ಬಗಳ ಸಂದರ್ಭದಲ್ಲಿ ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆಯಾಗದಂತೆ ಎಚ್ಚರಿಕೆ ವಹಿಸಲಾಗುತ್ತದೆ ಎಂದು ವಕ್ಫ್ ಬೋರ್ಡ್‌ನಿಂದ ಬಕ್ರೀದ್ ಆಚರಣೆ ಸಂದರ್ಭದಲ್ಲಿ ರಕ್ಷಣೆ ಕೋರಿ ಪತ್ರ ಬರೆದಿರುವ ವಿಚಾರಕ್ಕೆ ಪ್ರತಿಕ್ರಿಯಿಸಿದರು.


# ರಾಜ್ಯಸಭಾ ಚುನಾವಣೆ: ಎಚ್.ಡಿ ದೇವೇಗೌಡಗೆ ಟಿಕೆಟ್..? ಮತ್ತೊಮ್ಮೆ ದೆಹಲಿ ಮೆಟ್ಟಿಲೇರುತ್ತಾರಾ 'ಮಣ್ಣಿನ ಮಗ'?

• ಉದಯವಾಹಿನಿ, ಬೆಂಗಳೂರು

ಕರ್ನಾಟಕದ ನಾಲ್ಕು ರಾಜ್ಯಸಭಾ ಸ್ಥಾನಗಳಿಗೆ ಚುನಾವಣಾ ದಿನಾಂಕ ಘೋಷಣೆಯಾಗಿದ್ದು, ಇದರ ಬೆನ್ನಲ್ಲೇ, ಮಾಜಿ ಪ್ರಧಾನಮಂತ್ರಿ ಹಚ್.ಡಿ.ದೇವೇಗೌಡ ಅವರು ಎನ್‌ಡಿಎ ಅಭ್ಯರ್ಥಿಯಾಗಿ ಮರುನಾಮನಿರ್ದೇಶನವಾಗುತ್ತಾರೆಯೇ ಎಂಬ ಪ್ರಶ್ನೆ ರಾಜಕೀಯ ವಲಯದಲ್ಲಿ ತೀವ್ರ ಚರ್ಚೆಗೆ ಕಾರಣವಾಗಿದೆ.

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹಾಗೂ ಕರ್ನಾಟಕ ಉಸ್ತುವಾರಿ ರಾಧಾ ಮೋಹನ್ ದಾಸ್ ಅಗರ್ವಾಲ್ ನೇತೃತ್ವದಲ್ಲಿ ನಡೆದ ಪಕ್ಷದ ಪ್ರಮುಖ ಸಭೆಯಲ್ಲಿ, ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದ ಗೌಡ ಮತ್ತು ಪಕ್ಷದ ಹಿರಿಯ ಪದಾಧಿಕಾರಿ ನಿರ್ಮಲ್ ಕುಮಾರ್ ಸುರಾನಾ ಅವರ ಹೆಸರುಗಳನ್ನು ಪ್ರಸ್ತಾಪಿಸಲಾಗಿದೆ ಎಂದು ತಿಳಿದುಬಂದಿದೆ. ಈ ನಡುವೆ ದೇವೇಗೌಡರ ಮರುನಾಮಕರಣದ ಕುರಿತು ಪ್ರತಿಕ್ರಿಯಿಸಿದ ಅಗರ್ವಾಲ್, ಜೆಡಿಎಸ್ ವರಿಷ್ಠರ ಅಭ್ಯರ್ಥಿ ಕುರಿತ ಅಂತಿಮ ತೀರ್ಮಾನವನ್ನು ಪಕ್ಷದ ಕೇಂದ್ರ ಹೈಕಮಾಂಡ್ ತೆಗೆದುಕೊಳ್ಳುವುದರಿಂದ ಬಿಜೆಪಿ ಸದ್ಯಕ್ಕೆ ಅವರ ಹೆಸರನ್ನು ಪ್ರಸ್ತಾಪಿಸಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಹಿಂದಿನ ಚುನಾವಣೆಯಲ್ಲಿ ದೇವೇಗೌಡರು ಕಾಂಗ್ರೆಸ್-ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿ ಮೇಲ್ಮನೆಗೆ ಆಯ್ಕೆಯಾಗಿದ್ದರು. ಆದರೆ, 2024ರ ಲೋಕಸಭಾ



ಚುನಾವಣೆಗೂ ಮುನ್ನ ಜೆಡಿಎಸ್ ಪಕ್ಷವು ಬಿಜೆಪಿಯೊಂದಿಗೆ ಕೈಜೋಡಿಸಿದ್ದರಿಂದ ರಾಜಕೀಯ ಸಮೀಕರಣಗಳು ಸಂಪೂರ್ಣ ಬದಲಾಗಿವೆ. ಮೂಲಗಳ ಪ್ರಕಾರ, ಪ್ರಸ್ತುತ ವಿಧಾನಸಭೆಯ ಸಂಖ್ಯಾಬಲದ ಆಧಾರದ ಮೇಲೆ ಬಿಜೆಪಿ ಸುಲಭವಾಗಿ ಒಂದು ಸ್ಥಾನವನ್ನು ಗೆಲ್ಲಬಹುದಾಗಿದ್ದು, ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಹಾಗೂ ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಡಿ.ವಿ. ಸದಾನಂದ ಗೌಡ ಅವರಿಗೆ ಟಿಕೆಟ್ ನೀಡುವಂತೆ ಪಟ್ಟು ಹಿಡಿದಿದ್ದಾರೆ ಎನ್ನಲಾಗಿದೆ.

ದೇವೇಗೌಡರ ಹೊರತಾಗಿ ಜೂನ್ 25 ಕ್ಕೆ ನಿವೃತ್ತರಾಗುತ್ತಿರುವ ಮತ್ತೊಬ್ಬ ಪ್ರಮುಖ ನಾಯಕರೆಂದರೆ ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ. ಅವರ ಮರುನಾಮಕರಣವೂ ರಾಜಕೀಯ ವಲಯಗಳಲ್ಲಿ ಕುತೂಹಲ ಮೂಡಿಸಿದೆ.

ರಾಜಕೀಯ ವಿಶ್ಲೇಷಕರ ಪ್ರಕಾರ, 93 ವರ್ಷದ ದೇವೇಗೌಡರು ಮತ್ತೊಮ್ಮೆ ಕಣಕ್ಕಿಳಿದರೆ ಅದು ಮುಂಬರುವ ಗ್ರೇಟರ್ ಬೆಂಗಳೂರು ಅಥಾರಿಟಿ ಅಡಿಯ ಐದು ಮಹಾನಗರ ಪಾಲಿಕೆಗಳು, ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತ್ ಹಾಗೂ 2028 ರ ವಿಧಾನಸಭಾ ಚುನಾವಣೆಗಳವರೆಗೆ ಉಭಯ ಪಕ್ಷಗಳ ಮೈತ್ರಿ ಗಟ್ಟಿಯಾಗಿ ಮುಂದುವರಿಯಲು ದಿಕ್ಸೂಚಿಯಾಗಲಿದೆ ಎಂದು ತಿಳಿಸಿದ್ದಾರೆ.

ಈ ಕುರಿತು ಮಾತನಾಡಿರುವ ಜೆಡಿಎಸ್ ಮಾಜಿ ಎಂಎಲ್‌ಸಿ ಹಾಗೂ ಜಿಬಿಎ ಪ್ರದೇಶದ ಜೆಡಿಎಸ್ ಅಧ್ಯಕ್ಷ ಎಚ್.ಎಂ. ರಮೇಶ್ ಗೌಡ, ದೇವೇಗೌಡರನ್ನು ಮತ್ತೊಮ್ಮೆ ರಾಜ್ಯಸಭೆಗೆ ಕಳುಹಿಸುವುದು ಕರ್ನಾಟಕಕ್ಕೆ ಹೆಮ್ಮೆಯ ವಿಷಯ. ಮಾಜಿ ಪ್ರಧಾನಿಯಾಗಿ ಅವರ ಅಪಾರ ಅನುಭವ ಕೇವಲ ರಾಜ್ಯದ ನೀರಾವರಿ ಸಮಸ್ಯೆಗಳಿಗಷ್ಟೇ ಅಲ್ಲ, ಇಡೀ ದೇಶಕ್ಕೆ ಧ್ವನಿಯಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

### ಮರು ಆಯ್ಕೆ ಮೋದಿಗೆ ಬಿಟ್ಟಿದ್ದು ಎಂದ ದೇವೇಗೌಡ್ರು

ನಾನೊಬ್ಬ ಸಾಮಾನ್ಯ ರೈತ ಕುಟುಂಬದಿಂದ ಬಂದವನು, ಪ್ರಧಾನಮಂತ್ರಿ ಹುದ್ದೆಯವರೆಗೆ ಏರಿದ್ದೇನೆ. ನನ್ನ ರಾಜ್ಯಸಭಾ ಸದಸ್ಯತ್ವದ ಅವಧಿ ಜೂನ್ 25ಕ್ಕೆ ಮುಕ್ತಾಯಗೊಳ್ಳಲಿದೆ. ನನ್ನನ್ನು ಮರು ಆಯ್ಕೆ ಮಾಡುವುದು, ಬಿಡುವುದು ಪ್ರಧಾನಿ ನರೇಂದ್ರ ಮೋದಿಯವರ ವಿವೇಚನೆಗೆ ಬಿಟ್ಟದ್ದು ಎಂದು ದೇವೇಗೌಡರು ಹೇಳಿದ್ದಾರೆ. ಬಿಜೆಪಿಯ ಬೆಂಬಲವಿದ್ದರೆ ಮಾತ್ರ, ಜೆಡಿಎಸ್ ಅಭ್ಯರ್ಥಿ ಗೆಲ್ಲಲು ಸಾಧ್ಯ, ಯಾಕೆಂದರೆ ಗೆಲ್ಲಲು ಬೇಕಾದ ಕನಿಷ್ಠ ನಂಬರ್ ಅವರ ಬಳಿಯಿಲ್ಲ.

### ಕುತೂಹಲಕ್ಕೆ ಕಾರಣವಾಗಿರುವ ಹೈಕಮಾಂಡ್ ನಿರ್ಧಾರ

ಪ್ರಧಾನಿ ದೇವೇಗೌಡ್ರು ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಒಪ್ಪಿಗೆ ಸಿಗುವ ವಿಶ್ವಾಸದಲ್ಲಿ ದಳಪತಿಗಳು ಇದ್ದಾರೆ. ನಾವು ಯಾವುದೇ ಷರತ್ತನ್ನು ಹಾಕಿಲ್ಲ, ಪ್ರಧಾನಿಗಳು ತೆಗೆದುಕೊಳ್ಳುವ ನಿರ್ಧಾರಕ್ಕೆ ನಾವು ಬದ್ಧರಾಗಿದ್ದೇವೆ ಎಂದು ನಿಖಿಲ್ ಕುಮಾರಸ್ವಾಮಿ ಹೇಳಿದ್ದಾರೆ. ಬಿಜೆಪಿಯಿಂದ, ಮಾಜಿ ಸಿಎಂ ಡಿವಿ ಸದಾನಂದ ಗೌಡರು ಕೂಡಾ, ರಾಜ್ಯಸಭಾ ಟಿಕೆಟ್ ಆಕಾಂಕ್ಷಿಯಾಗಿದ್ದಾರೆ.

**ಈ ದಿನದ ದರ** ಪೆಟ್ರೋಲ್: 108.09 ₹/L ಡೀಸೆಲ್ : 95.99 ₹/L ಬಂಗಾರ: ₹ 15,906/Gram 24ct ₹14,580/Gram 22ct ಬೆಳ್ಳಿ: ₹285.00/Gram

# ರಾಜ್ಯದಲ್ಲಿ 3 ವರ್ಷಗಳಲ್ಲಿ ನಡೆದಿದೆ 2285 ಬಾಲ್ಯ ವಿವಾಹ: ಪ್ರೀತಿ, ಪ್ರೇಮ ಹಾಗೂ ಸಾಮಾಜಿಕ ಜಾಲತಾಣ ಕಾರಣವಂತೆ!

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಬಾಲ್ಯ ವಿವಾಹಗಳಿಗೆ ಇನ್ನೂ ಕಡಿವಾಣ ಬಿದ್ದಿಲ್ಲ. ಬಾಲ್ಯ ವಿವಾಹಕ್ಕೆ ನಿಯಂತ್ರಣ ಹೇರಲು ಸರ್ಕಾರ ಸಾಕಷ್ಟು ಕ್ರಮಗಳನ್ನು ಕೈಗೊಳ್ಳುತ್ತಿದೆ. ಹಾಗಿದ್ದರೂ ಇದಕ್ಕೆ ಕಡಿವಾಣ ಹಾಕಲು ಸಾಧ್ಯವಾಗಿಲ್ಲ. ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ 2285 ಬಾಲ್ಯ ವಿವಾಹಗಳು ನಡೆದಿವೆ.

ಬಾಲ್ಯ ವಿವಾಹ ಪ್ರಕರಣಗಳನ್ನು ತಡೆಯುವ ನಿಟ್ಟಿನಲ್ಲಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿ ಆಯಾ ತಾಲ್ಲೂಕು ತಹಶೀಲ್ದಾರ್‌ರನ್ನು ಸಮನ್ವಯ ಹಾಗೂ ಪರಿಶೀಲನಾ ಸಮಿತಿ ಅಧ್ಯಕ್ಷರನ್ನಾಗಿ ಸರ್ಕಾರವು ನೇಮಿಸಿದೆ. ಬಾಲಗರ್ಭಿಣಿ ಪ್ರಕರಣಗಳು ಕಂಡುಬಂದಲ್ಲಿ ನಿಯಮಾನುಸಾರ ಎಫ್ ಐ ಆರ್ ದಾಖಲಿಸಿ ಕ್ರಮವಹಿಸಲಾಗುತ್ತಿದೆ. ಮಕ್ಕಳ ರಕ್ಷಣಾ ನೀತಿ -2023 ಕುರಿತು ಎಲ್ಲಾ ಶಾಲಾ-ಕಾಲೇಜುಗಳಲ್ಲಿ ಅರಿವು ಮೂಡಿಸಲಾಗಿದೆ. ಮಕ್ಕಳ ರಕ್ಷಣಾ


ಉದಯವಾಹಿನಿ ಚಿತ್ರ

ಸಮಿತಿಗಳನ್ನು ಪ್ರತಿ ಶಾಲೆಗಳಲ್ಲಿಯೂ ರಚಿಸಲು ಕ್ರಮವಹಿಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮಾಹಿತಿ ನೀಡಿದೆ.

ಹದಿಹರೆಯದ ಮಕ್ಕಳಲ್ಲಿ ಪ್ರೀತಿ, ಪ್ರೇಮದ ಪ್ರಕರಣಗಳು ಹಾಗೂ ಸಾಮಾಜಿಕ ಜಾಲತಾಣಗಳಿಂದ ದಾರಿ ತಪ್ಪುತ್ತಿರುವುದು ಇದಕ್ಕೆ ಕಾರಣ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉತ್ತರ ನೀಡಿದೆ. ಅಲ್ಲದೆ, ಕೆಲವೊಂದು ಸಮುದಾಯಗಳಲ್ಲಿ ಇನ್ನೂ ಜೀವಂತ ಇರುವ ಕೆಟ್ಟ ಸಂಪ್ರದಾಯಗಳು ಇಂತಹ ವಿವಾಹಗಳ ಸಂಖ್ಯೆಯಲ್ಲಿ ಏರಿಕೆ ಆಗಲು ಕಾರಣ ಎಂದು ಉತ್ತರಿಸಿದೆ.

ಬಾಲ್ಯ ವಿವಾಹದ ಪ್ರಯತ್ನ, ನಿಶ್ಚಿತಾರ್ಥದ ಬಗ್ಗೆ ಕ್ರಮ ಕೈಗೊಳ್ಳಲು ಬಾಲ್ಯ ವಿವಾಹ ನಿಷೇಧ ಕಾಯ್ದೆ-2006 ರಲ್ಲಿ ಯಾವುದೇ ಕಲಂಗಳಲ್ಲಿ ಅವಕಾಶ ಇಲ್ಲದೇ ದೂರನ್ನು ದಾಖಲಿಸಲು ಸಾಧ್ಯವಾಗುತ್ತಿಲ್ಲವಾದ್ದರಿಂದ ಇದನ್ನು ಅಪರಾಧವನ್ನಾಗಿಸಲು ಬಾಲ್ಯ ವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ-2025) ಅನ್ನು ಜಾರಿಗೆ ತರಲು ಕ್ರಮವಹಿಸಲಾಗುತ್ತಿದೆ. ರಾಜ್ಯದಲ್ಲಿ ಅಪ್ರಾಪ್ತ ವಯಸ್ಸಿನ ಬಾಲಕಿಯರು ಬಾಲಗರ್ಭಿಣಿಯರು ಆಗುವುದನ್ನು ತಡೆಗಟ್ಟಲು ಎಲ್ಲಾ ಭಾಗೀದಾರ ಇಲಾಖೆಗಳ ಅಧಿಕಾರಿ/ಸಿಬ್ಬಂದಿಗಳಿಗೆ ತಾಲ್ಲೂಕು ಮತ್ತು ಜಿಲ್ಲಾ ತರಬೇತಿ ಹಂತಗಳಲ್ಲಿ ನೀಡಲು ಸಾಮರ್ಥ್ಯಾಭಿವೃದ್ಧಿ ಯೋಜಿಸಲಾಗುತ್ತಿದೆ.

ಮಕ್ಕಳ ಸಹಾಯವಾಣಿ-1098 (24-7) ಕಾರ್ಯ-ನಿರ್ವಹಿಸುತ್ತಿದೆ. ಸಂಕಷ್ಟದಲ್ಲಿರುವ ಮಗುವಿನ ಬಗ್ಗೆ ಯಾವುದೇ ಸಮಯದಲ್ಲಿ ಕರೆ ಸ್ವೀಕೃತವಾದರೂ ತಕ್ಷಣ ಮಗುವನ್ನು ರಕ್ಷಿಸಲು ಸಂಬಂಧಿಸಿದ ಅಧಿಕಾರಿಗಳು ಕಾರ್ಯ ಪ್ರವೃತ್ತರಾಗಿರುತ್ತಾರೆ. ಅಪ್ರಾಪ್ತ ವಯಸ್ಸಿನ ಹೆಣ್ಣು ಮಕ್ಕಳು ಬಾಲಗರ್ಭಿಣಿಯರಾಗುವುದನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ವಿವಿಧ ಇಲಾಖೆಗಳಿಗೆ ಜವಾಬ್ದಾರಿಗಳನ್ನು ನಿಗದಿಪಡಿಸಲಾಗಿದೆ. ಗ್ರಾಮ ಪಂಚಾಯತಿ ಮಟ್ಟದಲ್ಲಿ ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆಗಾಗಿ ಮಹಿಳೆಯರ ಮತ್ತು ಮಕ್ಕಳ ಹಕ್ಕುಗಳ ಕಾವಲು ಸಮಿತಿಯನ್ನು ರಚಿಸಲಾಗಿದೆ.

ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಸಮಿತಿ ರಚಿಸಲಾಗಿದ್ದು, ಈ ಪ್ರಕರಣಗಳ ಕುರಿತು ಪ್ರತಿ ತ್ರೈಮಾಸಿಕದಲ್ಲಿ ಪರಿಶೀಲನೆ ಮಾಡಲಾಗುತ್ತಿದೆ. ಪಾಲನೆ/ ಪೋಷಣೆ ಅವಶ್ಯಕತೆ ಇರುವ ಮಕ್ಕಳ ಸುರಕ್ಷತೆ ಮತ್ತು ಪುನರ್ವಸತಿಗಾಗಿ ಪ್ರತಿ ಜಿಲ್ಲೆಯಲ್ಲೂ ಮಕ್ಕಳ ಕಲ್ಯಾಣ ಸಮಿತಿ, ಮಕ್ಕಳ ವಿಶೇಷ ಪೊಲೀಸ್ ಘಟಕ, ಮಕ್ಕಳ ಪಾಲನಾ ಸಂಸ್ಥೆ ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳು ಕಾರ್ಯನಿರ್ವಹಿಸುತ್ತಿವೆ.

## ವಿದ್ಯಾರ್ಥಿನಿ ಮೇಲೆ ಏಕಾಏಕಿ 15ಕ್ಕೂ ಹೆಚ್ಚು ಬೀದಿನಾಯಿಗಳ ದಾಳಿ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಏಕಾಏಕಿ 15ಕ್ಕೂ ಹೆಚ್ಚು ನಾಯಿಗಳ ಹಿಂಡು ವಿದ್ಯಾರ್ಥಿನಿ ಮೇಲೆ ದಾಳಿ ಮಾಡಿರುವ ಘಟನೆ ರಾಮಮೂರ್ತಿ ನಗರದ ಸಮೀಪವಿರುವ ಹೊಯ್ಸಳ ನಗರದಲ್ಲಿ ನಡೆದಿದೆ. ಮೇಘನಾ ಬೀದಿನಾಯಿಗಳ ದಾಳಿಗೆ ಒಳಗಾದ ವಿದ್ಯಾರ್ಥಿನಿ. ಅದೃಷ್ಟವಶಾತ್ ವಿದ್ಯಾರ್ಥಿನಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

ಬೀದಿನಾಯಿಗಳ ದಾಳಿಗೆ ವಿದ್ಯಾರ್ಥಿನಿ ಭಯಗೊಂಡಿದ್ದಾರೆ. ಕೂಡಲೇ ವಿದ್ಯಾರ್ಥಿನಿಯನ್ನು ಸ್ಥಳೀಯರು ಕೆಆರ್ ಪುರಂ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಪ್ರಾಥಮಿಕ ಚಿಕಿತ್ಸೆ ಕೊಡಿಸಲಾಗಿದೆ.

## ಬೆಂಗಳೂರಲ್ಲಿ ಉಬರ್ ಕ್ಯಾಬ್ ಚಾಲಕನ ಮೇಲೆ ಗ್ಯಾಂಗ್‌ನಿಂದ ಡೆಡ್ಲಿ ಅಟ್ಯಾಕ್


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನ ಕೆ.ಹೆಚ್. ರಸ್ತೆಯಲ್ಲಿ ಉಬರ್ ಕ್ಯಾಬ್ ಚಾಲಕನ ಮೇಲೆ ಮಾರಣಾಂತಿಕ ಹಲ್ಲೆ ನಡೆದಿದೆ. ಕಾರು ಅಡ್ಡಗಟ್ಟಿ, ಚಾಲಕನನ್ನು ಹೊರಗೆಳೆದು ಥಳಿಸಿದ ವಿಡಿಯೋ ವೈರಲ್ ಆಗಿದೆ. ವಿಲ್ಸನ್ ಗಾರ್ಡನ್ ಠಾಣಾ ವ್ಯಾಪ್ತಿಯಲ್ಲಿ ಮೇ 22ರಂದು ನಡೆದ ಈ ಘಟನೆ ಬಗ್ಗೆ ಪೊಲೀಸರು ತನಿಖೆ ಕೈಗೊಂಡಿದ್ದಾರೆ. ಸಿಲಿಕಾನ್ ಸಿಟಿಯಲ್ಲಿ ಪುಂಡರ ಹಾವಳಿ ಮಿತಿಮೀರಿದ್ದು, ಮಧ್ಯರಾತ್ರಿ ರಸ್ತೆಯಲ್ಲೇ ಉಬರ್ ಕ್ಯಾಬ್ ಚಾಲಕನೊಬ್ಬನ ಮೇಲೆ ಮತ್ತೊಬ್ಬ ಚಾಲಕ ಮತ್ತು ಗ್ಯಾಂಗ್‌ನಿಂದ ಕಾರು ಅಡ್ಡ ಹಾಕಿ ಮನ ಬಂದಂತೆ ಥಳಿಸಿದ್ದಾರೆ. ನಗರದ ಡಬಲ್ ರೋಡ್‌ನಲ್ಲಿ ಘಟನೆ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ. ಹಲ್ಲೆಗೆ ಕಾರಣವೇನು ಎಂದು ತಿಳಿದುಬಂದಿಲ್ಲ. ವಿಲ್ಸನ್ ಗಾರ್ಡನ್ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿದ್ದಾರೆ.ಮತ್ತೊಬ್ಬ ಚಾಲಕ ಹಾಗೂ ಆತನ ಗ್ಯಾಂಗ್ ಸೇರಿ ಉಬರ್ ಕ್ಯಾಬ್ ಅನ್ನು ಮಧ್ಯರಸ್ತೆಯಲ್ಲೇ ಅಡ್ಡಗಟ್ಟಿದ್ದಾರೆ. ಬಳಿಕ ಉಬರ್ ಡ್ರೈವರ್‌ನನ್ನು ಬಲವಂತವಾಗಿ ಕಾರಿನಿಂದ ಕೆಳಗೆ ಇಳಿಸಿ, ಮನಬಂದಂತೆ ಹಿಗ್ಗಾಮುಗ್ಗಾ ಥಳಿಸಿದ್ದಾರೆ. ಹಲ್ಲೆ ನಡೆಸುವಾಗ ಪಕ್ಕದಲ್ಲೇ ಯುವತಿಯೊಬ್ಬರು ನಿಂತಿದ್ದರೂ ಲೆಕ್ಕಿಸದ ಪುಂಡರು, ಚಾಲಕನ ಮೇಲೆ ಡೆಡ್ಲಿ ಅಟ್ಯಾಕ್ ಮಾಡಿದ್ದಾರೆ. ಸದ್ಯ ಎದೆ ನಡುಗಿಸುವ ಹಲ್ಲೆಯ ಸಿಸಿಟಿವಿ ದೃಶ್ಯಾವಳಿಗಳು ಸಾಮಾಜಿಕ ಜಾಲತಾಣಗಳಲ್ಲಿ ಭಾರೀ ವೈರಲ್ ಆಗಿವೆ.

## ಮಾದಾವರ-ತುಮಕೂರು ಮೆಟ್ರೋ ರೈಲು ಯೋಜನೆ ಸರ್ಕಾರಕ್ಕೆ ಡಿಪಿಆರ್ ಸಲ್ಲಿಕೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಮಾದಾವರ-ತುಮಕೂರು ಮೆಟ್ರೋ ರೈಲು ಯೋಜನೆಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಡಿಪಿಆರ್ ಸಲ್ಲಿಕೆ ಮಾಡಲಾಗಿದೆ. ಸಂಜೆ ವಿಧಾನಸೌಧದಲ್ಲಿ ಗೃಹ ಸಚಿವ ಡಾ. ಜಿ.ಪರಮೇಶ್ವರ್ ಅವರು ಡಿಪಿಆರ್ ವರದಿ ಸ್ವೀಕರಿಸಿದ್ದಾರೆ. ಮಾದಾವಾರ-ತುಮಕೂರು ಮೆಟ್ರೋ ರೈಲು ಯೋಜನೆ ಬಗ್ಗೆ ಮುಂದಿನ ಸಂಪುಟ ಸಭೆಯಲ್ಲಿ ಚರ್ಚೆ ಸಾಧ್ಯತೆ ಇದೆ. ಡಿಪಿಆರ್ ಅನ್ನು ಬಿಎಮ್‌ಆರ್‌ಸಿಎಲ್ ಸಿದ್ಧಪಡಿಸಿದೆ.

ಈ ಕುರಿತು ಮಾತನಾಡಿದ ಪರಮೇಶ್ವರ್, ತುಮಕೂರಿಗೆ ಮೆಟ್ರೋ ರೈಲು ಬೇಕು ಅನ್ನೋ ನಿಟ್ಟಿನಲ್ಲಿ ಬಹಳ ದಿನಗಳಿಂದ ಪ್ರಯತ್ನ ನಡೀತಿತ್ತು. ಕಳೆದ ಬಜೆಟ್‌ನಲ್ಲಿ ಫೀಸಿಬಿಲಿಟಿ ಅಧ್ಯಯನ ಮಾಡೋದಾಗಿ ಸಿಎಂ ಹೇಳಿದ್ರು. ಹೈದರಾಬಾದ್ ಸಂಸ್ಥೆಯಿಂದ 3.5 ಕೋಟಿ ರೂ. ಖರ್ಚು ಮಾಡಿ ವರದಿ ಪಡೆಯಲಾಗಿದೆ. ಈ ವರದಿಯಲ್ಲಿ ಮಾದಾವರ ಟು ತುಮಕೂರು ಮೆಟ್ರೋ ಯೋಜನೆ ಮಾಡಬಹುದು ಅಂತ ಹೇಳಲಾಗಿದೆ ಎಂದು ತಿಳಿಸಿದರು.

ಅದಾದ ನಂತರ ಡಿಪಿಆರ್ ವರದಿಗೆ ಟೆಂಡರ್ ಕೊಡಲಾಗಿತ್ತು. ಮೆಟ್ರೋದವ್ರೇ ಬೇರೊಂದು ಸಂಸ್ಥೆ ಮೂಲಕ ಡಿಪಿಆರ್ ವರದಿ ಸಿದ್ಧಪಡಿಸಿ ಕೊಟ್ಟಿದೆ. ಮೆಟ್ರೋ ಯೋಜನೆಯನ್ನು ಪಿಪಿಪಿ ಮಾಡೆಲ್‌ನಲ್ಲಿ ಮಾಡಲಾಗುತ್ತೆ. ಡಿಪಿಆರ್ ವರದಿಯಲ್ಲಿ 20 ಸಾವಿರ ಕೋಟಿ ಅಂದಾಜು ವೆಚ್ಚ ಹಾಕಲಾಗಿದೆ. ಸಂಪುಟ ಸಭೆಯಲ್ಲಿ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು. ನಂತರ ಟೆಂಡರ್ ಕರೆಯುತ್ತೇವೆ ಎಂದರು.

## ಸಿಇಟಿ: ಮೇ 26ರಿಂದ ವಿಶೇಷ ಚೇತನರ ವೈದ್ಯಕೀಯ ತಪಾಸಣೆ ಕೆಇಎ

• ಉದಯವಾಹಿನಿ, ಬೆಂಗಳೂರು

ವೈದ್ಯಕೀಯ, ಇಂಜಿನಿಯರಿಂಗ್ ಸೇರಿದಂತೆ ಇತರ ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ವಿಶೇಷ ಚೇತನರ ಕೋಟಾದಡಿ ಕ್ಲೇಮ್ ಮಾಡಿರುವ ಅಭ್ಯರ್ಥಿಗಳ ವೈದ್ಯಕೀಯ ತಪಾಸಣೆ ಮೇ 26ರಿಂದ ಜೂನ್ 2ರವರೆಗೆ ನಡೆಯಲಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್.ಪ್ರಸನ್ನ ತಿಳಿಸಿದ್ದಾರೆ.

ಅರ್ಜಿಯಲ್ಲಿ ಕ್ಲೇಮ್ ಮಾಡಿರುವ ಅಭ್ಯರ್ಥಿಗಳು ಕೆಇಎ ವೆಬ್‌ಸೈಟ್‌ನಲ್ಲಿ ಇರುವ ಲಿಂಕ್ ಮೂಲಕ ಮುಂಗಡವಾಗಿ ದಿನಾಂಕ ನಿಗದಿಪಡಿಸಿಕೊಂಡು ತಪಾಸಣೆಗೆ ಆಸ್ಪತ್ರೆಗಳಿಗೆ ಹೋಗಬೇಕು ಎಂದು ತಿಳಿಸಿದ್ದಾರೆ. ನಿಗದಿತ ದಿನಾಂಕದಂದು ತಪಾಸಣೆಗೆ ಹೋಗಬೇಕು. ಇಲ್ಲಿ ಅರ್ಹರಾದವರನ್ನು ಮಾತ್ರ ಸೀಟು ಹಂಚಿಕೆಗೆ ಪರಿಗಣಿಸಲಾಗುತ್ತದೆ. ವಿವರಗಳಿಗೆ ಕೆಇಎ ವೆಬ್‌ಸೈಟ್ ನೋಡಬಹುದು ಎಂದು ವಿವರಿಸಿದ್ದಾರೆ.



## ಡಿಕೆ ಶಿವಕುಮಾರ್ ಕಾಕ್ರೋಚ್ ಪಾರ್ಟಿ ಅಧ್ಯಕ್ಷರಾಗಿ 50 ಸೀಟು ಗೆದ್ದು ತಾಕತ್ತು ತೋರಿಸಲಿ

### ಭಾರೀ ಸದ್ದು ಮಾಡುತ್ತಿರುವ ಕಾಕ್ರೋಚ್ ಜನತಾ ಪಾರ್ಟಿ

# ನಿಖಿಲ್ ಸವಾಲು!


ಉದಯವಾಹಿನಿ ಚಿತ್ರ

• ಉದಯವಾಹಿನಿ,ಬೆಂಗಳೂರು

ಭಾರತದಲ್ಲಿ ಸದ್ದು ಮಾಡುತ್ತಿರುವ ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ) ಈಗ ಕರ್ನಾಟಕದ ರಾಜಕಾರಣಿಗಳ ಹೇಳಿಕೆಗಳಲ್ಲೂ ಪ್ರತಿಧ್ವನಿಸುತ್ತಿದೆ. ಎಲ್ಲಾ ರಾಜಕೀಯ ಪಕ್ಷಗಳ ಧುರೀಣರು ಒಂದಲ್ಲ ಒಂದು ಕಾರಣಕ್ಕೆ ಸಿಜೆಪಿ ಪಕ್ಷದ ಹೆಸರನ್ನು ಉಲ್ಲೇಖಿಸುತ್ತಿದ್ದಾರೆ.

ಅದರಂತೆ ಉಪಮುಖ್ಯಮಂತ್ರಿ ಮತ್ತು ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿರುವ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಡಿಕೆ ಶಿವಕುಮಾರ್ ಅವರು ಸಿಜೆಪಿ ಅಧ್ಯಕ್ಷರಾಗಿ ಕರ್ನಾಟಕದಲ್ಲಿ 50 ಸೀಟುಗಳನ್ನು ಗೆದ್ದು ತೋರಿಸಲಿ ಎಂದು ಸವಾಲು ಹಾಕಿದ್ದಾರೆ. ಪತ್ರಕರ್ತರೊಂದಿಗೆ ಮಾತನಾಡಿದ ನಿಖಿಲ್ ಕುಮಾರಸ್ವಾಮಿ, ನಾನು ಡಿಕೆ ಶಿವಕುಮಾರ್ ಅವರನ್ನು ರಾಜ್ಯದಲ್ಲಿ ಪ್ರಾದೇಶಿಕ ಪಕ್ಷ ಕಟ್ಟಿ ಎಂದು ಒತ್ತಡ ಹೇರುವುದಿಲ್ಲ. ಆದರೆ ದೇಶದಲ್ಲಿ ಕಾಕ್ರೋಚ್ ಪಾರ್ಟಿ ಎಂಬ ಹೊಸ ಪಕ್ಷ ಹುಟ್ಟಿದೆ. ಡಿಕೆಶಿ ಆ ಪಕ್ಷದ ರಾಜ್ಯಾಧ್ಯಕ್ಷರಾಗಿ, 2028ರ ವಿಧಾನಸಭೆ ಚುನಾವಣೆಯಲ್ಲಿ 50 ಸೀಟ ಗೆದ್ದು ತೋರಿಸಲಿ ಎಂದು ಸವಾಲೆಸೆದರು. ಡಿಕೆಶಿ ಮಾತೆತ್ತಿದರೆ ಜೆಡಿಎಸ್ ಪಕ್ಷವನ್ನು 17 ಸೀಟು, 1 ಸೀಟು ಎಂದು ಹೀಯಾಳಿಸುತ್ತಾರೆ. ಪ್ರಾದೇಶಿಕ ಪಕ್ಷಗಳ ಕಷ್ಟಗಳು ಅವರಿಗೆ ಅರ್ಥವಾಗುವುದಿಲ್ಲ. ಹೀಗಾಗಿ ಅವರು ಸಿಜೆಪಿ ಸೇರಿ 50 ಸೀಟು ಗೆಲ್ಲಲಿ ಎಂದು ನಿಖಿಲ್ ಕುಮಾರಸ್ವಾಮಿ ಗುಡುಗಿದರು. ಇತ್ತೀಚೆಗೆ ತುಮಕೂರಿನಲ್ಲಿ ನಡೆದ ಕಾಂಗ್ರೆಸ್ ಸಾಧನಾ ಸಮಾವೇಶದಲ್ಲಿ, 17 ಸೀಟು ಇಟ್ಕೊಂಡು ಹೆಚ್‌ಡಿ ಕುಮಾರಸ್ವಾಮಿ ಸಿಎಂ ಕನಸು ಕಾಣುತ್ತಿದಾರೆ ಎಂದು ಡಿಕೆಶಿ ವ್ಯಂಗ್ಯವಾಡಿದ್ದರು.

ಫ್ರೀಡಂ ಪಾರ್ಕ್‌ನಲ್ಲಿ ನಿಂತುಕೊಂಡು ಮುಖ್ಯಮಂತ್ರಿ ಸಿದ್ದರಾಮಯ್ಯ ನಾನು ಕಾಕ್ರೋಚ್ ಎಂಬ ಟಿ-ಶರ್ಟ್ ಬಿಡುಗಡೆ ಮಾಡುತ್ತಾರೆ.

ರಾಜ್ಯದಲ್ಲಿ ಕಾಂಗ್ರೆಸ್ ದುಸ್ಥಿತಿ ಕಂಡು ನನಗೇ ಆತಂಕವಾಗುತ್ತಿದೆ ಎಂದು ನಿಖಿಲ್ ಕುಮಾರಸ್ವಾಮಿ ಇದೇ ವೇಳೆ ವ್ಯಂಗ್ಯವಾಡಿದರು.

ಇನ್ನು ತಮ್ಮನ್ನು ಪ್ರಶ್ನಿಸಲು ನಿಖಿಲ್ ಕುಮಾರಸ್ವಾಮಿ ಯಾರು ಎಂಬ ಡಿಕೆ ಶಿವಕುಮಾರ್ ಪ್ರಶ್ನೆಗೆ ತಿರುಗೇಟು ನೀಡಿರು ಜೆಡಿಸ್ ಯುವ ಘಟಕದ ಅಧ್ಯಕ್ಷರು, ನಾನು ಕರ್ನಾಟಕದ ಮಣ್ಣಿನಲ್ಲಿ ಹುಟ್ಟಿದ ಹುಡುಗ. ಕನ್ನಡದ ನೆಲ, ಜಲ, ಭಾಷೆ ಬಗ್ಗೆ ಅಭಿಮಾನ ಇಟ್ಟುಕೊಂಡಿರುವ ವ್ಯಕ್ತಿ. ಸರ್ಕಾರಕ್ಕೆ ತೆರುಗೆ ಕಟ್ಟುತ್ತೇನಾದ್ದರಿಂದ, ಈ ಸರ್ಕಾರವನ್ನು ಪ್ರಶ್ನಿಸುವ ಹಕ್ಕು ನನಗಿದೆ ಎಂದು ನೇರವಾಗಿ ಹೇಳಿದರು.

ಕುರ್ಚಿ ಕದನದಲ್ಲಿ ಗೆಲ್ಲೋದು ಯಾರು?, ನೆಗೆಟಿವ್, ಪಾಸಿಟಿವ್ ಏನು? ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿಯಾಗಿ, ಡಿಕೆ ಶಿವಕುಮಾರ್ ಅವರನ್ನು ಉಪಮುಖ್ಯಮಂತ್ರಿಯಾಗಿ ಮತ್ತು ಕಾಂಗ್ರೆಸ್ ಪಕ್ಷಕ್ಕೆ 136 ಸೀಟು ಕೊಟ್ಟು ಸರ್ಕಾರ ರಚಿಸಲು ಅವಕಾಶ ಮಾಡಿಕೊಟ್ಟಿದ್ದು, ಕನ್ನಡ ನಾಡಿನ ಇದೇ 7 ಕೋಟಿ ಜನಸಾಮಾನ್ಯರು. ನಾನು ರಾಜ್ಯದ ಸಾಮಾನ್ಯ ಪ್ರಜೆಗಳ ಪರ ಧ್ವನಿ ಎತ್ತುವುದನ್ನು ಮುಂದುವರೆಸುತ್ತೇನೆ. ನನ್ನನು ಯಾರೂ ತಡೆಯಲಾರರು ಎಂದು ನಿಖಿಲ್ ಕುಮಾರಸ್ವಾಮಿ ಗುಡುಗಿದರು.

1 ಡಿಕೆ ಶಿವಕುಮಾರ್ ವಿರುದ್ಧ ವಾಗ್ದಾಳಿ

2 ನಿಖಿಲ್ ಡಿಕೆ ಶಿವಕುಮಾರ್ ಅವರಿಗೆ ಕಾಕ್ರೋಚ್ ಜನತಾ ಪಾರ್ಟಿ ಅಧ್ಯಕ್ಷರಾಗುವಂತೆ ಸವಾಲು

3 ಸಿಜೆಪಿ ಅಧ್ಯಕ್ಷರಾಗಿ ಡಿಕೆಶಿ 50 ಸೀಟು ಗೆದ್ದು ತೋರಿಸಲಿ ಎಂದ ನಿಖಿಲ್ ಕುಮಾರಸ್ವಾಮಿ.

ಡಿಕೆ ನಿಖಿಲ್ ಜಟಾಪಟಿ

## ಬೆಂಗಳೂರಲ್ಲಿ ಹೆಚ್ಚಾಗುತ್ತಿದೆ ಸಿಡಿಲಿನ ಆರ್ಭಟ:ವಿಜ್ಞಾನಿಗಳ ಮುನ್ಸೂಚನೆ

• ಉದಯವಾಹಿನಿ, ಬೆಂಗಳೂರು

ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ಇತ್ತೀಚಿನ ವರ್ಷಗಳಲ್ಲಿ ಹವಾಮಾನ ವೈಪರೀತ್ಯಗಳು ತೀವ್ರಗೊಳ್ಳುತ್ತಿದ್ದು, ನಗರದ ನಾಗರಿಕರಲ್ಲಿ ಹೊಸ ಆತಂಕವನ್ನು ಮೂಡಿಸಿದೆ.

ಕೇವಲ ಮಳೆ-ಬಿಸಿಲಿನ ಏರುಪೇರಷ್ಟೇ ಅಲ್ಲದೆ, ಪ್ರಾಣಕ್ಕೆ ಕಂಟಕವಾಗಬಲ್ಲ ಸಿಡಿಲು ಮತ್ತು ಬಿರುಗಾಳಿಗಳ ಪ್ರಮಾಣ ನಗರದಲ್ಲಿ ವರ್ಷದಿಂದ ವರ್ಷಕ್ಕೆ ಗಣನೀಯವಾಗಿ ಹೆಚ್ಚಾಗುತ್ತಿದೆ. ಭಾರತೀಯ ಹವಾಮಾನ ಇಲಾಖೆ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ವೀಕ್ಷಣಾಲಯ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಭೌತಶಾಸ್ತ್ರ ವಿಭಾಗದ ವಿಜ್ಞಾನಿಗಳು ಜಂಟಿಯಾಗಿ ನಡೆಸಿರುವ ದೀರ್ಘಾವಧಿಯ ಮಹತ್ವದ ಸಂಶೋಧನೆಯೊಂದು ಈ ಆತಂಕಕಾರಿ ಸತ್ಯವನ್ನು ಬಿಚ್ಚಿಟ್ಟಿದೆ. ಅಂತಾರಾಷ್ಟ್ರೀಯ ನಿಯತಕಾಲಿಕೆಯಲ್ಲಿ ಪ್ರಕಟವಾಗಿರುವ ಈ ಮಹತ್ವದ ಅಧ್ಯಯನವನ್ನು ಹವಾಮಾನ ವಿಜ್ಞಾನಿಗಳಾದ ಚನ್ನಬಸನಗೌಡ ಸಂಗನಗೌಡ ಪಾಟೀಲ್, ಡಾ. ಶೇಕ್ ದರ್ಗಾ ಸಾಹೇಬ್, ಗುಂಟಾ ಪಾಪಾರಾವ್ ಮತ್ತು ಡಾ. ಕಂಸಲಿ ನಾಗರಾಜ ಅವರನ್ನೊಳಗೊಂಡ ವಿಜ್ಞಾನಿಗಳ ತಂಡ ಯಶಸ್ವಿಯಾಗಿ ನಡೆಸಿದೆ. ಕಳೆದ 2011 ರಿಂದ 2023ರವರೆಗಿನ ಹನ್ನೆರಡು ವರ್ಷಗಳ ಸುದೀರ್ಘ ದತ್ತಾಂಶಗಳನ್ನು ಆಧರಿಸಿ ನಡೆಸಲಾದ ಈ ಅಧ್ಯಯನವು, ಬೆಂಗಳೂರಿನ ವಾತಾವರಣದ ಸಂಯೋಜನೆ ಹಾಗೂ ಹವಾಮಾನದ ಮೇಲಾಗುತ್ತಿರುವ ಗಂಭೀರ ಪರಿಣಾಮಗಳನ್ನು ಎತ್ತಿ ತೋರಿಸಿದೆ.

## ಸಚಿವ ಸತೀಶ್ ಜಾರಕಿಹೊಳಿ ವಾಗ್ದಾಳಿ

• ಉದಯವಾಹಿನಿ, ಬೆಂಗಳೂರು

ಪ್ರಮುಖ ಜನಪರ ಸಮಸ್ಯೆಗಳಿಂದ ಸಾರ್ವಜನಿಕರ ಗಮನವನ್ನು ಬೇರೆಡೆಗೆ ಸೆಳೆಯಲು ಬಿಜೆಪಿ ನಾಯಕರು ಮುಸ್ಲಿಂ ಮತ್ತು ಪಾಕಿಸ್ತಾನ ಎಂಬ ಪದಗಳನ್ನು ರಾಜಕೀಯ ಅಸ್ತ್ರವಾಗಿ ಪದೇ ಪದೇ ಬಳಸುತ್ತಿದ್ದಾರೆ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ತೀವ್ರ ವಾಗ್ದಾಳಿ ನಡೆಸಿದ್ದಾರೆ. ಬೆಳಗಾವಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿಯ ಈ ಧೋರಣೆಯನ್ನು ಕೇವಲ ರಾಜಕೀಯ ಸ್ಟಂಟ್ ಎಂದು ಕರೆದಿದ್ದಾರೆ.

ರಾಜ್ಯ ಸರ್ಕಾರವು ಪ್ರಸ್ತುತ ಮುಸ್ಲಿಮರು, ರೈತರು, ಕನ್ನಡ ಕಾರ್ಯಕರ್ತರು ಸೇರಿದಂತೆ ಸಮಾಜದ ವಿವಿಧ ವರ್ಗಗಳಿಗೆ ಸಂಬಂಧಿಸಿದ ಸುಮಾರು 50 ರಿಂದ 60 ಪ್ರಮುಖ ಪ್ರಕರಣಗಳನ್ನು ನಿರ್ವಹಿಸುತ್ತಿದೆ ಅವರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಶ್ರಮಿಸುತ್ತಿದೆ. ಆದರೆ, ಬಿಜೆಪಿ ನಾಯಕರಿಗೆ ಕೇವಲ 'ಮುಸ್ಲಿಂ' ಮತ್ತು 'ಪಾಕಿಸ್ತಾನ' ಎಂಬ ಹೆಸರುಗಳನ್ನು ಉಲ್ಲೇಖಿಸಿ ಜನರ ಭಾವನೆಗಳನ್ನು ಕೆರಳಿಸುವುದಷ್ಟೇ ಗೊತ್ತು ಎಂದು ಕಿಡಿಕಾರಿದರು. ಈ ರೀತಿಯ ಪದಗಳನ್ನು ಬಳಸುವುದರಿಂದ ಮಾತ್ರ ಸಾರ್ವಜನಿಕರ ಗಮನವನ್ನು ತಮ್ಮತ್ತ ಸೆಳೆಯಬಹುದು ಎಂಬ ಭ್ರಮೆಯಲ್ಲಿ ಬಿಜೆಪಿ ನಾಯಕರಿದ್ದಾರೆ. ಇದು ಜನರ ದಾರಿ ತಪ್ಪಿಸುವ ಮತ್ತು ರಾಜಕೀಯ ಲಾಭ ಪಡೆಯುವ ಬಿಜೆಪಿಯ ತಂತ್ರಗಾರಿಕೆಯಾಗಿದೆ ಎಂದು ಟೀಕಿಸಿದ್ದಾರೆ.

## ದರ್ಶನ್ ಆತ್ಮಹತ್ಯೆ ಯತ್ನ ವದಂತಿ ವಿಚಾರ, ಗೃಹ ಸಚಿವ ಪರಮೇಶ್ವರ್ ಪ್ರತಿಕ್ರಿಯೆ

• ಉದಯವಾಹಿನಿ, ಬೆಂಗಳೂರು

ರೇಣುಕಾಸ್ವಾಮಿ ಕೊಲೆ ಆರೋಪದ ಮೇಲೆ ಪರಪ್ಪನ ಅಗ್ರಹಾರದಲ್ಲಿರುವ ನಟ ದರ್ಶನ್ ಅವರ ಜಾಮೀನು ಅರ್ಜಿ ಸುಪ್ರೀಂ ಕೋರ್ಟ್‌ನಲ್ಲಿ ರಿಜೆಕ್ಟ್ ಆಗಿತ್ತು. ಅಷ್ಟೇ ಅಲ್ಲದೆ ಅವರು ಇನ್ನೂ ಒಂದು ವರ್ಷದ ತನಕ ಜಾಮೀನಿಗೆ ಅರ್ಜಿ ಕೂಡಾ ಸಲ್ಲಿಸುವ ಹಾಗಿಲ್ಲ. ಹೀಗಿರುವಾಗಲೇ ದರ್ಶನ್ ಅವರು ಜೈಲಿನಲ್ಲಿ ಆತ್ಮಹತ್ಯೆಗೆ ಪ್ರಯತ್ನಿಸಿದ್ದಾರೆ ಎನ್ನುವ ಸುದ್ದಿ ಕೇಳಿ ಬಂದಿತ್ತು.

ದರ್ಶನ್ ಆತ್ಮಹತ್ಯೆ ಯತ್ನ ವದಂತಿ ವಿಚಾರವಾಗಿ ಈಗ ಗೃಹ ಸಚಿವ ಜಿ ಪರಮೇಶ್ವರ್ ಸ್ಪಷ್ಟನೆ ಕೊಟ್ಟಿದ್ದಾರೆ. ಈಗಾಗಲೇ ಈ ಸಂಬಂಧ ಕೇಳಿ ಬಂದ ಎಲ್ಲಾ ವದಂತಿಗಳಿಗೆ, ಸುದ್ದಿಗಳಿಗೆ ಅವರು ಕ್ಲಾರಿಟಿ ಕೊಟ್ಟರು. ಈ ಸಂಬಂಧವಾಗಿ ಇತ್ತೀಚೆಗೆ ಮಾಧ್ಯಮಗಳ ಜೊತೆ ಮಾತನಾಡಿದ ಅವರು ಆ ವಿಚಾರ ನಾನು ಕೇಳ್ಪಟ್ಟಾಗ, ಅಧಿಕಾರಿಗಳಿಂದ ಮೌಖಿಕವಾಗಿ ಕೇಳಿದ್ದೆ. ಆ ರೀತಿ ಘಟನೆ ನಡೆದಿಲ್ಲ ಅಂತ ಅಧಿಕಾರಿಗಳು ತಿಳಿಸಿದ್ದಾರೆ. ಇದರ ಹೊರತು ಇನ್ನೇನೂ ವಿಚಾರ ಇಲ್ಲ ಎಂದಿದ್ದಾರೆ.

# ಪುನಾರಚನೆ ಭೀತಿ: ಸಚಿವರಲ್ಲಿ ಹೆಚ್ಚಿದ ಕುರ್ಚಿ ಪ್ರೀತಿ

• ಉದಯವಾಹಿನಿ, ಬೆಂಗಳೂರು

ರಾಜ್ಯ ಕಾಂಗ್ರೆಸ್ ಸರಕಾರದಲ್ಲಿ ನಾಯಕತ್ವ ಬದಲಾವಣೆ ಕುರಿತಾದ ಅಸ್ಪಷ್ಟತೆಗಳಿಂದ ಸಚಿವರಲ್ಲಿ ಆತಂಕ ಶುರುವಾಗಿದೆ. ಒಂದು ಕಡೆ ನಾಯಕತ್ವದ ಬಗ್ಗೆ ಪಕ್ಷದ ವರಿಷ್ಠರು ಸ್ಪಷ್ಟವಾಗಿ ಏನನ್ನು ಹೇಳುತ್ತಿಲ್ಲ. ಇದರಿಂದ ಗೊಂದಲಕ್ಕೀಡಾಗಿರುವ ಅನೇಕ ಸಚಿವರು ವರಿಷ್ಠರ ಭೇಟಿಗಾಗಿ ದಿಢೀರ್ ದೆಹಲಿ ದಂಡಯಾತ್ರೆ ಆರಂಭಿಸಿದ್ದಾರೆ. ತಮ್ಮ ಸಚಿವ ಸ್ಥಾನದ ಭದ್ರತೆ ಬಗ್ಗೆ ವಿಶ್ವಾಸವಿಲ್ಲದ ಸಚಿವರು ಒಬ್ಬರಾದ ಮೇಲೆ ಒಬ್ಬರಂತೆ ತಮ್ಮ ಪೋಷಕ ವರಿಷ್ಠ ನಾಯಕರನ್ನು ಭೇಟಿಯಾಗುತ್ತಿದ್ದಾರೆ, ಅಷ್ಟೇ ಅಲ್ಲದೆ ಸಂಪುಟ ಪುನಾರಚನೆ ವೇಳೆ ತಮ್ಮನ್ನು ಮುಂದುವರಿಸಿ ಎಂದು ವಿನಂತಿಸುತ್ತಿದ್ದಾರೆ. ಅದರಲ್ಲೂ ಕೆಲವು ಸಚಿವರು ಪಕ್ಷದ ವರಿಷ್ಠರಾದ ಮಲ್ಲಿಕಾರ್ಜುನ ಖರ್ಗೆ, ರಣದೀಪ್ ಸಿಂಗ್ ಸುರ್ಜೆವಾಲಾ ಹಾಗೂ ಕೆ.ಸಿ.ವೇಣುಗೋಪಾಲ್ ಸೇರಿದಂತೆ ಅನೇಕ ಹಿರಿಯ ನಾಯಕರನ್ನು ಭೇಟಿಯಾಗಿ ಮಂತ್ರಿ ಸ್ಥಾನ ಉಳಿಸಿಕೊಳ್ಳಲು ನಾನಾ ರೀತಿಯ ಮನವರಿಕೆ ಕಸರತ್ತು ನಡೆಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಹಾಗೆ ನೋಡಿದರೆ ಸಚಿವ ಸಂಪುಟ ಪುನಾರಚನೆಯಾಗಲಿ, ನಾಯಕತ್ವ ಬದಲಾವಣೆಯಾಗಲಿ ಯಾವುದೇ ವಿಷಯದ ಬಗ್ಗೆಯೂ ಪಕ್ಷದ ವರಿಷ್ಠರು ಅಧಿಕೃತ ಮಾಹಿತಿಯನ್ನೇ ಪ್ರಕಟಿಸಿಲ್ಲ.

ಹಾಗಿದ್ದರೂ ಸಚಿವರಲ್ಲಿ ತಮ್ಮ ಸ್ಥಾನದ ಅಳಿವು ಉಳಿವಿನ ಬಗ್ಗೆ ಆತಂಕ ಶುರುವಾಗಿದ್ದು, ಇದು ಮುಂದೆ ಪಕ್ಷ ಹಾಗೂ ಸರಕಾರದಲ್ಲಿ ನಡೆಯಬಹುದಾದ ಬದಲಾವಣೆಯನ್ನು ಸೂಚಿಸುತ್ತದೆ ಎಂದು ಪಕ್ಷದ ಹಿರಿಯ ನಾಯಕರು ಅಭಿಪ್ರಾಯಪಟ್ಟಿದ್ದಾರೆ.

## ನಮಗೂ ಕಾಲ ಬರುತ್ತೆ, ಹೇಗೆ ಮಂಜೂರು ಮಾಡಬೇಕೋ ಗೊತ್ತಿದೆ; ಸರ್ಕಾರಕ್ಕೆ ಅಶೋಕ್ ಎಚ್ಚರಿಕೆ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದು ಮೂರು ವರ್ಷ ಪೂರೈಸಿದ್ದರೂ, ವಿಧಾನಸಭೆಯ ವಿರೋಧ ಪಕ್ಷದ ನಾಯಕರಾದ ಆರ್. ಅಶೋಕ್ ಅವರಿಗೆ ಇನ್ನುವರೆಗೂ ಅಧಿಕೃತ ಸರ್ಕಾರಿ ನಿವಾಸವನ್ನು ಮಂಜೂರು ಮಾಡಿಲ್ಲ.

ಹುದ್ದೆ ಅಲಂಕರಿಸಿದಾಗಿನಿಂದ ಈವರೆಗೆ ಹಲವು ಬಾರಿ ಪತ್ರ ಬರೆದು ಮನವಿ ಮಾಡಿಕೊಂಡಿದ್ದರೂ, ರಾಜ್ಯ ಸರ್ಕಾರವು ಸ್ಪಂದಿಸಿಲ್ಲ ಎಂದು ಅವರು ಆಡಳಿತ ಪಕ್ಷದ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಆರ್.ಅಶೋಕ್ ಅವರು ಬೆಂಗಳೂರಿನ ರೇಸ್ ಕೋರ್ಸ್ ರಸ್ತೆಯಲ್ಲಿರುವ ರೇಸ್‌ವ್ಯೂ ಕಾಟೇಜ್ ಅಥವಾ ಕುಮಾರ ಪಾರ್ಕ್‌ನಲ್ಲಿರುವ ನಿವಾಸಗಳನ್ನು ಮಂಜೂರು ಮಾಡುವಂತೆ ಮುಖ್ಯಮಂತ್ರಿ ಮತ್ತು ಮುಖ್ಯ ಕಾರ್ಯದರ್ಶಿಗೆ ಇದುವರೆಗೆ 5 ರಿಂದ 6 ಬಾರಿ ಅಧಿಕೃತ ಪತ್ರಗಳನ್ನು ಬರೆದಿದ್ದಾರೆ.

ಹಲವು ಬಾರಿ ಪತ್ರ ಬರೆದು ಹಾಗೂ ಅಧಿಕಾರಿಗಳನ್ನು ಖುದ್ದಾಗಿ ಭೇಟಿಯಾದರೂ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಲಾಗಿದೆ. ಅಧಿಕೃತ ನಿವಾಸ ಇಲ್ಲದಿರುವುದರಿಂದ, ಅವರು ತಮ ಸ್ವಂತ ನಿವಾಸವಾದ ಜಯನಗರದಿಂದಲೇ ಅಧಿಕೃತ ಸಭೆಗಳನ್ನು ನಡೆಸುತ್ತಿದ್ದಾರೆ.

ಈ ಬಗ್ಗೆ ಸ್ವತಃ ಆರ್.ಅಶೋಕ್ ಅವರು ಅಧಿಕೃತವಾಗಿ ಹೇಳಿಕೊಂಡಿದ್ದಾರೆ. ಆದ್ಯತೆಯ ಮೇರೆಗೆ ತಮಗೆ ನಿವಾಸವನ್ನು ಮಂಜೂರು ಮಾಡುವಂತೆ ಕೋರಿ ಈಗಾಗಲೇ ಮುಖ್ಯ ಕಾರ್ಯದರ್ಶಿಯವರಿಗೆ ನಾಲ್ಕು ಬಾರಿ ಪತ್ರಗಳನ್ನು ಬರೆದಿದ್ದೇನೆ. ಹಾಗಿದ್ದರೂ ಸರ್ಕಾರ ಸ್ಪಂದನೆ ಮಾಡಿಲ್ಲ ಎಂದಿದ್ದಾರೆ.

ಬಿಜೆಪಿ ವಿರೋಧಪಕ್ಷದ ನಾಯಕನ ಸ್ಥಾನಕ್ಕೆ ಆಯ್ಕೆ ಮಾಡಿದ್ದು ತಡವಾಗಿ. ವಿರೋಧಪಕ್ಷದ ನಾಯಕ ಸ್ಥಾನಕ್ಕೆ ಅಶೋಕ್ ಆಯ್ಕೆ ಆದ ಬಳಿಕ ಸರ್ಕಾರಿ ನಿವಾಸ ಕೋರಿ ನಾಲ್ಕು ಪತ್ರಗಳನ್ನು ಬರೆದರೂ ಸರ್ಕಾರದಿಂದ ಈವರೆಗೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ.ಅಶೋಕ ಅವರ ವಿಶೇಷ ಅಧಿಕಾರಿ ಈ ಸಂಬಂಧ ಮುಖ್ಯ ಕಾರ್ಯದರ್ಶಿಯವರನ್ನು ಎರಡು- ಮೂರು ಬಾರಿ ಭೇಟಿ ಮಾಡಿದ್ದರು. ಬೇಗನೆ ಕೊಡುತ್ತೇವೆ ಎಂದು ಹೇಳಿದರೂ ಇಲ್ಲಿಯವರಿಗೂ ಕೊಟ್ಟಿಲ್ಲ ಎಂದು ಮೂಲಗಳು ತಿಳಿಸಿವೆ.

## ರಾಜ್ಯ ಸರ್ಕಾರ ರಿಯಲ್ ಎಸ್ಟೇಟ್ ದಂಧೆಯಲ್ಲಿ ತೊಡಗಿದೆ, ಅನ್ನದಾತರ ಹಿತಾಸಕ್ತಿ ಕಡೆಗಣಿಸಲು ಬಿಡಲ್ಲ: ವಿಜಯೇಂದ್ರ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿನ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ತುಷ್ಟೀಕರಣದ ಎಲ್ಲಾ ಮಿತಿಗಳನ್ನು ದಾಟಿ ಅಲ್ಪಸಂಖ್ಯಾತರ ಓಲೈಕೆ ಮಾಡುತ್ತಿದೆ ಎಂದು ಶಾಸಕ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಅವರು ಆರೋಪಿಸಿದರು. ರಾಜ್ಯ ಬಿಜೆಪಿ ಕಾರ್ಯಾಲಯದಲ್ಲಿ ಮಾಧ್ಯಮಗಳೊಂದಿಗೆ ಇಂದು ಮಾತನಾಡಿದ ಅವರು, ರಾಜ್ಯದಲ್ಲಿ ಹಿಂದೂಗಳ ಮೇಲೆ ನಿರಂತರ ದೌರ್ಜನ್ಯ ನಡೆಯುತ್ತಿದೆ.

ಅಲ್ಪಸಂಖ್ಯಾತರನ್ನ ಓಲೈಸಲು ಯಾವ ಮಟ್ಟಕ್ಕಾದರೂ ಈ ಸರ್ಕಾರ ಇಳಿಯಲಿದೆ. ಆಳಂದ ಗಲಭೆ ಪ್ರಕರಣವನ್ನ ಕೈ ಬಿಡಲು ಸಚಿವ ಸಂಪುಟ ತೀರ್ಮಾನ ಕೈಗೊಂಡಿದೆ. ದೇಶದ್ರೋಹಿಗಳ ವಿರುದ್ಧ, ಕಾನೂನು ಹಾಳು ಮಾಡುವವರ ವಿರುದ್ಧ ಕ್ರಮ ಕೈಗೊಳ್ಳಬೇಕಾದ ಸರ್ಕಾರ ಹಾಗೂ ಕಾಂಗ್ರೆಸ್ ತಮ್ಮ ವೋಟ್ ಬ್ಯಾಂಕ್ ಸುಭದ್ರ ಮಾಡಿಕೊಳ್ಳುತ್ತಿದೆ ಎಂದು ದೂರಿದರು. ಹಿಂದೂಗಳಿಗೆ ಪದೇ ಪದೇ ಅಪಮಾನ ಮಾಡುತ್ತಿರುವ ಕಾಂಗ್ರೆಸ್ ನೀತಿಯನ್ನು ರಾಜ್ಯದ ಜನ ಗಮನಿಸಿದ್ದಾರೆ.

ವಿಪಕ್ಷವಾಗಿ ನಾವೂ ಹೋರಾಟ ಮಾಡುತ್ತೇವೆ. ಹಿಂದೂ ವಿರೋಧ ನೀತಿ ಅನುಸರಿಸುತ್ತಿರುವುದರ ವಿರುದ್ಧ ಬೀದಿಗಿಳಿದು ಪ್ರತಿಭಟನೆ ನಡೆಸಲಾಗುವುದು ಎಂದರು. ಆನೇಕಲ್ ಸಮೀಪ ರೈತರ ಫಲವತ್ತಾದ ಜಮೀನನ್ನ ಪಡೆದು ಕ್ರಿಕೆಟ್ ಸ್ಟೇಡಿಯಂ ನಿರ್ಮಿಸುತ್ತಿರುವ ಸಂಬಂಧ


ಉದಯವಾಹಿನಿ ಚಿತ್ರ


ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ವಿಜಯೇಂದ್ರ ಅವರು, ಕಾಂಗ್ರೆಸ್ ಸರ್ಕಾರಕ್ಕೆ ರೈತರ ಬಗ್ಗೆ ಅಸಡ್ಡೆ ಇದೆ. ಅವರ ಸಮಸ್ಯೆ ತಿಳಿದಿಲ್ಲ. ಬದಲಿಗೆ ರಿಯಲ್ ಎಸ್ಟೇಟ್ ದಂಧೆಯಲ್ಲಿ ತೊಡಗಿದೆ ಎಂದರು.

ರಾಜ್ಯದಲ್ಲಿ ನೆರೆ ಬಂದಾಗ ಸರ್ಕಾರ ರೈತರ ಪರವಾಗಿ ನಿಲ್ಲಲಿಲ್ಲ. ಬರಗಾಲ ಇದ್ದಾಗಲೂ ಸಹಾಯ ಮಾಡಲಿಲ್ಲ. ಉಸ್ತುವಾರಿ ಸಚಿವರು ಹಾಗೂ ಕ್ಷೇತ್ರದ ಶಾಸಕರು ತಮ್ಮ ಜನರ ನೋವು ಆಲಿಸಲಿಲ್ಲ ಎಂದು ಟೀಕಿಸಿದರು. ಬೆಂಗಳೂರು ವಿಮಾನನಿಲ್ದಾಣದ ಸಮೀಪ ಸಾವಿರಾರು ಎಕರೆ ಜಾಗ ಇದೆ. ಅಲ್ಲೇ ಸ್ಟೇಡಿಯಂ ನಿರ್ಮಿಸಬಹುದಿತ್ತು. ಅದು ಬಿಟ್ಟು ಆನೇಕಲ್ ನಲ್ಲಿ ಫಲವತ್ತಾದ ಜಮೀನು ಪಡೆದು ರೈತರಿಗೆ ಪದೇ ಪದೇ ತೊಂದರೆ ಕೊಡುತ್ತಿದ್ದಾರೆ. ಅನ್ನದಾತರ ಹಿತಾಸಕ್ತಿ ಕಡೆಗಣಿಸಲು ಅವಕಾಶ ನೀಡುವುದಿಲ್ಲ.

# ಪೆಟ್ರೋಲ್ ಬೆಲೆ ಏರಿಕೆ: ಪ್ರಿಯಾಂಕ್ ಖರ್ಗೆ ಕಿಡಿ

### ಬಿಜೆಪಿ ನಾಯಕರು ಬಾಯಿ ಮುಚ್ಚಿಕೊಂಡಿದ್ದಾರೆ ಏಕೆ ಪ್ರಿಯಾಂಕ್ ಖರ್ಗೆ ತೀವ್ರ ವಾಗ್ದಾಳಿ

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

ದೇಶದಲ್ಲಿ ಮೂರನೇ ಬಾರಿಗೆ ಪೆಟ್ರೋಲ್ ಬೆಲೆ ಏರಿಕೆಯಾಗಿರುವುದನ್ನು ಖಂಡಿಸಿ ಕೇಂದ್ರ ಸರ್ಕಾರದ ವಿರುದ್ಧ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತೀವ್ರ ವಾಗ್ದಾಳಿ ನಡೆಸಿದ್ದಾರೆ. 'ವಾರಕ್ಕೆ ಮೂರು ಮೂರು ಬಾರಿ ಬೆಲೆ ಏರಿಕೆ ಮಾಡುತ್ತಿರುವ ಕೇಂದ್ರ ಸರ್ಕಾರದ ನಡೆಯ ಬಗ್ಗೆ ಬಿಜೆಪಿ ನಾಯಕರು ಈಗ ಏಕೆ ಬಾಯಿ ಮುಚ್ಚಿಕೊಂಡಿದ್ದಾರೆ?' ಎಂದು ಅವರು ಪ್ರಶ್ನಿಸಿದ್ದಾರೆ.

**ಕಲಬುರಗಿಯಲ್ಲಿ ಪ್ರಿಯಾಂಕ್ ಖರ್ಗೆ ಅಟ್ಟಹಾಸ ಜೋರಾಗಿದೆ, ಕೂಡಲೇ ರಾಜೀನಾಮೆ ಕೊಡಬೇಕು:** ಛಲವಾದಿ ನಾರಾಯಣ ಸ್ವಾಮಿ ಇಡೀ ವಿಶ್ವವೇ ಮೋದಿ ಕಡೆ ನೋಡ್ತಿದೆ ಅಂದಿದ್ರಲ್ಲ, ಈಗ ಎಲ್ಲಿ ಹೋದ್ರು?' ಎಂದು ಪ್ರಶ್ನಿಸಿದ ಖರ್ಗೆ, ರಷ್ಯಾದಿಂದ ಕಡಿಮೆ ಬೆಲೆಗೆ ತೈಲ ತಂದಿದ್ದೇವೆ ಎಂದು ಮೊನ್ನೆ ತಾನೇ ಬೀಗಿದ್ದರು. ಪ್ರಧಾನಿ ಮೋದಿಯವರು ಇಡೀ ವಿಶ್ವವನ್ನೇ ಸುತ್ತಿ ಬಂದಿದ್ದಾರೆ. ದೇಶಕ್ಕೆ ಎಲ್ಲವೂ ಒಳ್ಳೆಯದಾಗಿದೆ ಎಂದು ಡಂಗುರ ಸಾರಿದ್ದರಲ್ಲ, ಹಾಗಾದರೆ ವಾರಕ್ಕೆ ಮೂರು ಬಾರಿ ಬೆಲೆ ಏರಿಕೆಯಾಗುತ್ತಿರುವುದಕ್ಕೆ ಯಾರು ಕಾರಣ ಎಂದು ಕಿಡಿಕಾರಿದರು. ಇಡೀ ವಿಶ್ವವೇ ಮೋದಿ ಕಡೆ ನೋಡುತ್ತಿದೆ ಎಂದು ಜಪಿಸುವವರು ಈಗ ಎಲ್ಲಿದ್ದಾರೆ? ಈ ಪ್ರಶ್ನೆಯನ್ನು ಮೊದಲು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರಿಗೆ ಕೇಳಬೇಕು. ಮೋದಿ ಅಥವಾ ಆರ್‌ಎಸ್‌ಎಸ್ ಬಗ್ಗೆ ಟೀಕೆ ಮಾಡಿದರೆ ಸಾಕು, ಬಿಜೆಪಿ ನಾಯಕರು ಮೈಮೇಲೆ ಬಂದವರಂತೆ ಆಡುತ್ತಾರೆ.

ಆದರೆ, ಜನರ ಕಷ್ಟದ ಬಗ್ಗೆ ಉಪದೇಶ ನೀಡುವ ಇವರ ನಾಯಕತ್ವ ಈಗ ಎಲ್ಲಿದೆ ಎಂದು ಖರ್ಗೆ ಪ್ರಶ್ನಿಸಿದರು.

**ಕನ್ನಡಿಗರ ಮೇಲೆ ಇನ್ನೆಷ್ಟು ತೆರಿಗೆ ಹಾಕ್ತೀರಾ?**

ಮೆಟ್ರೋ ದರ ಜಾಸ್ತಿ ಆದಾಗ ಸೂಟ್ ಹಾಕಿಕೊಂಡು ಹೋಗಿ ಫೋಟೋಗೆ ಫೋಸ್ ಕೊಡುವ ಬಿಜೆಪಿ ಸಂಸದರು, ಈಗ ಪೆಟ್ರೋಲ್ ಬೆಲೆ ಏರಿಕೆಯಾದಾಗ ಎಲ್ಲಿ ಅಡಗಿ ಕುಳಿತಿದ್ದಾರೆ? ಎಂದು ವಾಗ್ದಾಳಿ ನಡೆಸಿದರು.

ದೇಶದಲ್ಲೇ ತೆರಿಗೆ ಸಂಗ್ರಹದಲ್ಲಿ ನಾವು ಮುಂಚೂಣಿಯಲ್ಲಿದ್ದೇವೆ. ಅಚ್ಚೇ ದಿನ್' ಬರಲಿದೆ ಎಂದವರು ಮೊದಲು ತೈಲ ಬೆಲೆ ಕಡಿಮೆ ಮಾಡಲಿ ಎಂದು ಸವಾಲು ಹಾಕಿದರು. ಕೆಂಪು ಕೋಟೆಯ ಮೇಲೆ ನಿಂತು ದೊಡ್ಡ ದೊಡ್ಡ ಉಪದೇಶ ನೀಡುವ ಪ್ರಧಾನಿ ಮೋದಿಯವರು, ಬೆಲೆ ಇಳಿಕೆಯ ಇಂತಹ ಪ್ರಯೋಗಗಳನ್ನು ಮೊದಲು ತಮ್ಮದೇ ಗುಜರಾತ್‌ನಿಂದ ಶುರು ಮಾಡಲಿ ಎಂದು ಒತ್ತಾಯಿಸಿದರು.

ದೇಶದಲ್ಲಿ ರೂಪಾಯಿ ಮೌಲ್ಯ ದಿನದಿಂದ ದಿನಕ್ಕೆ ಕುಸಿಯುತ್ತಿದೆ, ಇತ್ತ ರೈತರಿಗೆ ಯೂರಿಯಾ ಕೊರತೆ ಎದುರಾಗಿದೆ. ದೇಶಕ್ಕೆ ಎಲ್ಲವೂ ಒಳ್ಳೆಯದಾಗಿದೆ ಎಂದು ಡಂಗುರ ಸಾರಿದ್ದರಲ್ಲ, ವ್ಯವಸ್ಥೆಯ ವಿರುದ್ಧ ಯುವಜನತೆ ಎಷ್ಟು ಆಕ್ರೋಶಗೊಂಡಿದ್ದಾರೆ ಎಂದರೆ, ಸುಪ್ರೀಂ ಕೋರ್ಟ್ ನ್ಯಾಯಾಧೀಶರ ಒಂದೇ ಒಂದು ಕಾಮೆಂಟ್‌ನಿಂದಾಗಿ ಸಾಮಾಜಿಕ ಜಾಲತಾಣದಲ್ಲಿ 'ಕಾಕ್ರೋಚ್ ಜನತಾ ಪಾರ್ಟಿಯಂತಹ ಡಿಜಿಟಲ್ ಚಳವಳಿ ಹುಟ್ಟಿಕೊಂಡಿದೆ ಎಂದು ಲೇವಡಿ ಮಾಡಿದರು.

## ನಿತ್ಯೋಪಯೋಗಿ ವಸ್ತುಗಳ ಬೆಲೆ ಗಗನಕ್ಕೇರಿದೆ

ಕೇಂದ್ರ ಸರ್ಕಾರದ ಆರ್ಥಿಕ ನೀತಿಗಳು ಸಂಪೂರ್ಣ ವಿಫಲವಾಗಿವೆ ಎಂಬುದು ಇದರಿಂದ ಸಾಬೀತಾಗಿದೆ. ತೈಲ ಬೆಲೆ ಏರಿಕೆಯಿಂದಾಗಿ ತರಕಾರಿ ಸೇರಿದಂತೆ ನಿತ್ಯೋಪಯೋಗಿ ವಸ್ತುಗಳ ಬೆಲೆ ಗಗನಕ್ಕೇರಿದೆ, ದೇಶದ ಆರ್ಥಿಕತೆ ಸಂಪೂರ್ಣ ಕುಸಿದಿದೆ ಎಂದು ಅವರು ಇದೇ ವೇಳೆ ಆಕ್ರೋಶ ಹೊರಹಾಕಿದರು.

ಪೆಟ್ರೋಲ್ ಡೀಸೆಲ್ ದರ ಏರಿಕೆಗೆ ಅಮೆರಿಕಾ-ಇರಾನ್ ಯುದ್ಧ ಕಾರಣ ಎಂಬ ವಾದಕ್ಕೆ ತಿರುಗೇಟು ನೀಡಿದ ಅವರು, 'ಕಾಂಗ್ರೆಸ್ ಸರ್ಕಾರ ಇದ್ದಾಗ ದೇಶದಲ್ಲಿ ಯುದ್ಧಗಳು ನಡೆದಿರಲಿಲ್ಲವೇ? ಅಂತರರಾಷ್ಟ್ರೀಯ ಮಟ್ಟದಲ್ಲಿ ಏನೇ ಆದರೂ ಭಾರತದ ಮೇಲೆ ಪ್ರಭಾವ ಬೀರದಂತೆ ನಮ್ಮ ನಾಯಕರು ದೇಶವನ್ನು ಮುನ್ನಡೆಸಿದ್ದರು ಎಂದರು.



# ಅಕ್ರಮವಾಗಿ ಸಾಗಿಸುತ್ತಿದ್ದ ಬೀಟೆ ದಿಮ್ಮಿ ವಶ, ಆರೋಪಿ ಬಂಧನ

• **ಉದಯವಾಹಿನಿ, ಹುಣಸೂರು**

ಲಾರಿಯಲ್ಲಿ ಅಕ್ರಮವಾಗಿ ಲಕ್ಷಾಂತರ ರೂ. ಬೆಲೆಬಾಳುವ ಬೀಟೆ ಮರದ ದಿಮ್ಮಿಗಳನ್ನು ಸಾಗಿಸುತ್ತಿದ್ದ ಆರೋಪಿಯನ್ನು ಹುಣಸೂರು ಪ್ರಾದೇಶಿಕ ಅರಣ್ಯ ವಿಭಾಗದವರು ದಿಢೀರ್ ದಾಳಿ ನಡೆಸಿ ಲಾರಿ ಸಹಿತ ಮರದ ದಿಮ್ಮಿಗಳನ್ನು ವಶಕ್ಕೆ ಪಡೆದು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೊಪ್ಪಿಸಿದ ಘಟನೆ ನಡೆದಿದೆ. ಮೂಲತಃ ಕೇರಳ ರಾಜ್ಯದ ಮಲಪ್ಪುರಂನ ಲಾರಿ ಮಾಲೀಕ ಕಂ ಚಾಲಕ ಅಬ್ದುಲ್ ಶುಕೂರ್ ಬಂಧಿತ ಆರೋಪಿ.

ಲಾರಿಯಲ್ಲಿದ್ದ ಸುಮಾರು 30 ಲಕ್ಷ ರೂ. ಬೆಲೆ ಬಾಳುವ 45 ಬೀಟೆ ಮರದ ದಿಮ್ಮಿಗಳನ್ನು ವಶಪಡಿಸಿಕೊಳ್ಳಲಾಗಿದೆ. ಲಾರಿಯಲ್ಲಿ ಕೊಡಗಿನಿಂದ ಕಾಫಿ ಹಾಗೂ ಮರದ ಹೊಟ್ಟು ತುಂಬಿದ ಮೂಟೆಗಳ ನಡುವೆ ಬೀಟೆ ಮರದ ದಿಮ್ಮಿಗಳನ್ನಿಟ್ಟು ಸಾಗಿಸುತ್ತಿರುವ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ಪ್ರಾದೇಶಿಕ ಅರಣ್ಯ ವಿಭಾಗದ ಡಿಸಿಎಫ್ ಕಿರಣಕುಮಾರ್, ಎಸಿಎಫ್ ಮಹದೇವಯ್ಯರ ಮಾರ್ಗದರ್ಶನದಲ್ಲಿ ಹುಣಸೂರು ಆರ್‌ಎಫ್‌ಒ ಸಂತೋಷ್ ಎಂ.ಹೂಗಾರ್ ನೇತೃತ್ವದ ತಂಡ ಹುಣಸೂರು-ಎಚ್.ಡಿ.ಕೋಟೆ ಮುಖ್ಯರಸ್ತೆಯ ಅಜಾದ್ ನಗರದ ಪೆಟ್ರೋಲ್ ಬಂಕ್ ಬಳಿ ಹೊಂಚು ಹಾಕಿ ಲಾರಿಯನ್ನು ಅಡ್ಡಗಟ್ಟಿ ಪರಿಶೀಲಿಸಿದ ವೇಳೆ ಮರದ ದಿಮ್ಮಿಗಳಿರುವುದು ಪತ್ತೆಯಾಗಿದೆ. ಲಾರಿಯನ್ನು ಜಪ್ತಿ ಮಾಡಿ, ಮರದ ತುಂಡುಗಳು ಹಾಗೂ ಕೃತ್ಯಕ್ಕೆ ಬಳಸಿದ್ದ ಮೊಬೈಲ್ ಸಹಿತ ಆರೋಪಿ ಅಬ್ದುಲ್ ಶುಕೂರ್‌ನನ್ನು ವಶಕ್ಕೆ ಪಡೆದಿದ್ದಾರೆ.




ಆರೋಪಿ ಅಬ್ದುಲ್ ಶುಕೂರ್ ಕೇರಳ ನೋಂದಣಿಯ ಲಾರಿಯನ್ನು ಎಲ್ಲಡೆ ತಪಾಸಣೆ ನಡೆಸುವ ಭೀತಿಯಿಂದ ಈ ಕೃತ್ಯಕ್ಕಾಗಿಯೇ ಕರ್ನಾಟಕ ನೋಂದಣಿಯ ಸೆಕೆಂಡ್ ಹ್ಯಾಂಡ್ ಲಾರಿಯನ್ನು 2 ತಿಂಗಳ ಹಿಂದೆ ಖರೀದಿಸಿದ್ದ.

ಆದರೆ ಈ ಪ್ಲಾನ್ ತಲೆ ಕೆಳಗಾಗಿ ಸಿಕ್ಕಿಬಿದ್ದಿದ್ದಾನೆ. ಈ ದಂಧೆಯಲ್ಲಿ ದೊಡ್ಡ ಜಾಲವೇ ಇದ್ದು, ಕೊಡಗಿನಲ್ಲಿ ಮರದ ದಿಮ್ಮಿಗಳು ಲೋಡ್ ಆದ ನಂತರ ತೆರಳುವ ಲಾರಿ ಕೋಟೆ ಬಳಿಯ ಹೋಟೆಲ್‌ಗಳಲ್ಲಿ ನಿಲ್ಲುತ್ತದೆ.

ಅಲ್ಲಿಂದ ಬೇರೆ ಚಾಲಕ ಕೇರಳ, ಬೆಂಗಳೂರು ಮತ್ತಿತರ ಕಡೆಗೆ ಲಾರಿ ಕೊಂಡೊಯ್ಯುವ ಬಗ್ಗೆ ಮಾಹಿತಿ ಕಲೆ ಹಾಕಿದ್ದು, ಆರೋಪಿಗಳನ್ನು ಶೀಘ್ರವೇ ಭೇದಿಸುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ಕೊಡಗಿನ ವಿವಿಧ ಭಾಗಗಳಿಂದ ಮರದ ದಿಮ್ಮಿಗಳನ್ನು ಖರೀದಿಸಿ ಸಾಗಿಸಲಾಗಿದೆ. ಕಾರ್ಯಾಚರಣೆಯಲ್ಲಿ ಡಿಆರ್‌ಎಫ್‌ಒ ಮಂಜುನಾಥ ಟಿ.ಎನ್, ಗಸ್ತು ಅರಣ್ಯ ಪಾಲಕರಾದ ಶಿವಪ್ಪಗಡ್ಡದವರ್, ಮಂಜುನಾಥ, ದಿವಾಕರ, ಸಿದ್ದಪ್ಪಹೊಸಮನಿ, ವಾಹನ ಚಾಲಕ ಮನೋಹರ ಹಾಗೂ ಸಿಬ್ಬಂದಿ ಭಾಗವಹಿಸಿದ್ದರು.

### ಕಿಂಗ್ ಪಿನ್ ಪತ್ತೆಗೆ ಕ್ರಮ:

**ಆರೋಪಿಯನ್ನು ವಿಚಾರಣೆಗೊಳಪಡಿಸಲಾಗಿದ್ದು, ಕೊಡಗಿನ ವಿವಿಧ ಭಾಗಗಳಿಂದ ಮರದ ದಿಮ್ಮಿಗಳನ್ನು ಖರೀದಿಸಿ ಸಾಗಿಸಲಾಗಿದೆ ಎಂದು ಆತ ತಿಳಿಸಿದ್ದಾನೆ. ಈ ಪ್ರಕರಣದಲ್ಲಿ ಹಲವಾರು ಮಂದಿ ಭಾಗಿಯಾಗಿರುವ ಬಗ್ಗೆ ಶಂಕೆ ಇದ್ದು, ಪ್ರಕರಣದ ಕಿಂಗ್‌ಪಿನ್ ಹಾಗೂ ಇತರ ಆರೋಪಿಗಳ ಪತ್ತೆಗಾಗಿ ಕ್ರಮ ವಹಿಸಲಾಗಿದೆ.**

## ಜನ್ಮ ನೀಡಿದ ಪೋಷಕರನ್ನು ಸಾಕುವುದು ಪ್ರತಿಯೊಬ್ಬರ ಕರ್ತವ್ಯ




• **ಉದಯವಾಹಿನಿ, ಹುಳಿಯಾರು**

ತಾಯಿಯು ಪ್ರೀತಿ, ತ್ಯಾಗ ಮತ್ತು ಮಮತೆಯ ಪ್ರತೀಕವಾಗಿದ್ದು, ಕುಟುಂಬದ ನಿರ್ವಹಣೆಯ ಜೊತೆಗೆ ಮಕ್ಕಳನ್ನು ಸುಶಿಕ್ಷಿತರನ್ನಾಗಿ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾಳೆ. ಆದರೆ, ಇಂದಿನ ವಿದ್ಯಾವಂತ ಸಮಾಜದಲ್ಲಿ ಜನ್ಮ ನೀಡಿದ ತಂದೆ-ತಾಯಿಯರನ್ನು ಸರಿಯಾಗಿ ಕಾಳಜಿ ವಹಿಸದೇ ಇರುವುದು ನಾಗರಿಕ ಸಮಾಜ ತಲೆತಗ್ಗಿಸುವಂತಹ ಸಂಗತಿಯಾಗಿದೆ ಎಂದು ಹುಳಿಯಾರು ಬಿಎಂಎಸ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ವೀರಣ್ಣ ಎಸ್.ಸಿ. ತಿಳಿಸಿದರು.

ಬಿಎಂಎಸ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ 'ಪೋಷಕ ಶಿಕ್ಷಕ ಸಭೆ' ಹಾಗೂ 'ವಿಶ್ವ ತಾಯಂದಿರ ದಿನಾಚರಣೆ' ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ ಜೀವನದ ಕೊನೆಯ ಘಟ್ಟದಲ್ಲಿ ಪೋಷಕರನ್ನು ಗೌರವದಿಂದ ಪೋಷಿಸುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಿದೆ ಎಂದರು.

ಇದೇ ಸಂದರ್ಭದಲ್ಲಿ ನಡೆದ ಪೋಷಕರ ಸಭೆಯಲ್ಲಿ ಕಾಲೇಜಿನ ಶೈಕ್ಷಣಿಕ ಚಟುವಟಿಕೆಗಳ ಕುರಿತು ಮಾಹಿತಿ ನೀಡಿದ ಪ್ರಾಂಶುಪಾಲರು, ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳು, ಕಾಲೇಜಿನಲ್ಲಿ ಲಭ್ಯವಿರುವ ಹಾಗೂ ಹೊಸದಾಗಿ ಆರಂಭಿಸಲಾಗಿರುವ ಕೋರ್ಸ್‌ಗಳು, ಉಚಿತ ಕಂಪ್ಯೂಟರ್ ತರಬೇತಿ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಹಾಗೂ ಕಾಲೇಜಿಗೆ ಲಭಿಸಿರುವ ರ್‍ಯಾಂಕುಗಳ ಬಗ್ಗೆ ವಿವರಿಸಿದರು. ಉತ್ತಮ ನಾಗರಿಕರನ್ನು ರೂಪಿಸುವಲ್ಲಿ ಪೋಷಕರ ಮತ್ತು ಶಿಕ್ಷಕರ ಪಾತ್ರ ದೊಡ್ಡದಾಗಿದ್ದು, ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಮುನ್ನಡೆಯಲು ಪೋಷಕರ ಸಹಕಾರ ಅತ್ಯಗತ್ಯ ಎಂದರು.

## ಹುಳಿಯಾರು ಕೆಪಿಎಸ್ ಶಾಲೆಯಲ್ಲಿ ಉಚಿತ ದಾಖಲಾತಿ ಆರಂಭ: ಅರ್ಜಿ ಆಹ್ವಾನ

• **ಉದಯವಾಹಿನಿ, ಹುಳಿಯಾರು**

ಇಲ್ಲಿನ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ 2026-27 ನೇ ಶೈಕ್ಷಣಿಕ ಸಾಲಿನ ಉಚಿತ ದಾಖಲಾತಿ ಪ್ರಕ್ರಿಯೆ ಆರಂಭವಾಗಿದ್ದು, ಅರ್ಹ ಪೋಷಕರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಶಾಲೆಯ ಪ್ರಾಂಶುಪಾಲರಾದ ಎನ್.ಜಿ.ಕೃಷ್ಣಮೂರ್ತಿ ತಿಳಿಸಿದ್ದಾರೆ.

ಎಲ್‌ಕೆಜಿ ತರಗತಿಗೆ ಒಟ್ಟು 30 ಸೀಟುಗಳು ಮಾತ್ರ ಲಭ್ಯವಿದ್ದು, ಮೇ 25 ರಿಂದ ಮೇ 30 ರ ಬೆಳಿಗ್ಗೆ 11:30 ರವರೆಗೆ ಹುಳಿಯಾರಿನ ಸರ್ಕಾರಿ ಮಾಧ್ಯಮಿಕ ಪಾಠಶಾಲೆಯಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಜೂನ್ 2 ರ ಮಂಗಳವಾರ ಬೆಳಿಗ್ಗೆ 10:30 ಕ್ಕೆ ಲಾಟರಿ ಮೂಲಕ ವಿದ್ಯಾರ್ಥಿಗಳ ಆಯ್ಕೆ ಪ್ರಕ್ರಿಯೆ ನಡೆಯಲಿದೆ.

ಇದೇ ವೇಳೆ ಯುಕೆಜಿಯಿಂದ 7 ನೇ ತರಗತಿವರೆಗೆ ಖಾಲಿ ಇರುವ ಸೀಟುಗಳ ಭರ್ತಿಗೂ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸಲು ಮೇ 30 ಕೊನೆಯ ದಿನವಾಗಿದೆ.

ಜೂನ್ 3 ರ ಬುಧವಾರ ಬೆಳಿಗ್ಗೆ 10:30 ಕ್ಕೆ ಲಾಟರಿ ಮೂಲಕ ಅರ್ಹ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುವುದು. ದಾಖಲಾತಿ ಬಯಸುವ ಪೋಷಕರು ನಿಗದಿತ ಅವಧಿಯೊಳಗೆ ಮಗುವಿನ ಆಧಾರ್ ಕಾರ್ಡ್, ಜನನ ಪ್ರಮಾಣ ಪತ್ರ ಹಾಗೂ ಫೋಟೋ ಸೇರಿದಂತೆ ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬೇಕಾಗಿ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬತ್ತುತ್ತಿವೆ ಬೋರ್‌ವೆಲ್; ಹೆಚ್ಚುತ್ತಿದೆ ಆತಂಕ

### ಹವಾಮಾನ ದಲಾವಣೆ

**ಪ್ರತಿ ವರ್ಷ ಹವಾಮಾನದಲ್ಲಿ ವ್ಯತ್ಯಾಸ ಕಂಡು ಬರುತ್ತಿರುವುದರಿಂದ ರೈತರು ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ.**

**ಒಂದೆಡೆ ಅತಿವೃಷ್ಟಿ, ಮತ್ತೊಂದೆಡೆ ಅನಾವೃಷ್ಟಿ ರೈತರ ಬದುಕನ್ನೇ ಅಸ್ಥಿರಗೊಳಿಸಿದೆ. ಈ ಬಾರಿ ಮುಂಗಾರು ವಿಳಂಬವಾಗಿರುವುದು ಹವಾಮಾನ ಬದಲಾವಣೆಯ ಪರಿಣಾಮವೇ ಎಂಬ ಚರ್ಚೆಯೂ ಗ್ರಾಮೀಣ ಭಾಗದಲ್ಲಿ ಕೇಳಿಬರುತ್ತಿದೆ.**

### ನೀರಿನ ಸಮಸ್ಯೆಯೂ ತೀವ್ರ

**ಬೇಸಿಗೆಯ ತಾಪಮಾನ ಹೆಚ್ಚುತ್ತಿರುವ ಕಾರಣ ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆಯೂ ತೀವ್ರವಾಗುತ್ತಿದೆ. ಕೆರೆ, ಕಟ್ಟೆಗಳಲ್ಲಿ ನೀರಿಲ್ಲದೆ ಸಾಕುಪ್ರಾಣಿಗಳು ನೀರಿಗಾಗಿ ಅಲೆದಾಡುತ್ತಿರುವ ದೃಶ್ಯಗಳು ಸಾಮಾನ್ಯವಾಗಿವೆ. ಕಾಡಂಚಿನ ಪ್ರದೇಶಗಳಲ್ಲಿ (ಸಿದ್ದರಬೆಟ್ಟ, ಸಾಗ್ಗೆರೆ) ಪ್ರಾಣಿ-ಪಕ್ಷಿಗಳಿಗೂ ನೀರಿನ ಅಭಾವ ಎದುರಾಗುವ ಸಾಧ್ಯತೆ ಇದೆ.**

**ಕೊಳವೆ ಬಾವಿಗಳಲ್ಲಿ ನೀರಿನ ಮಟ್ಟ ಕುಸಿತ**

• **ಉದಯವಾಹಿನಿ, ಕೊರಟಗೆರೆ**

ಪೂರ್ವ ಮುಂಗಾರು ಮಳೆ ಕೊರತೆಯಿಂದಾಗಿ ತಾಲ್ಲೂಕಿನ ಜನರು ಹೈರಾಣಾಗಿದ್ದಾರೆ. ಮೇ ತಿಂಗಳು ಮುಗಿಯುತ್ತಾ ಬಂದರೂ ನಿರೀಕ್ಷಿತ ಪ್ರಮಾಣದ ಮಳೆಯಾಗದೆ ಭೂಮಿ ಇನ್ನೂ ಬಿಸಿಗಾಳಿಯಲ್ಲೇ ತತ್ತರಿಸುತ್ತಿದೆ. ಕೃಷಿ ಚಟುವಟಿಕೆಗಳ ಮೇಲೂ ಪರಿಣಾಮ ಬೀರಿದೆ.

ತಾಲ್ಲೂಕಿನ ಕೆಲವೆಡೆ ಗಾಳಿ ಸಹಿತ ಮಳೆಯಾಗಿದೆ. ಗಾಳಿಯೇ ಹೆಚ್ಚಿದ್ದು, ಮಳೆ ಪ್ರಮಾಣ ಕಡಿಮೆ ಇತ್ತು. ತಿಂಗಳಗಟ್ಟಲೇ ಬಿಸಿಲಿಗೆ ಒಣಗಿದ್ದ ನೆಲ ಆ ನೀರನ್ನು ಕ್ಷಣಾರ್ಧದಲ್ಲೇ ಹೀರಿಕೊಂಡಿದೆ. ಕೆರೆ-ಕಟ್ಟೆ, ಹಳ್ಳ-ಕೊಳ್ಳಗಳು ಇನ್ನೂ ನೀರಿನಿಂದ ತುಂಬದಿರುವುದು ಗ್ರಾಮೀಣ ಜನರ ಆತಂಕ ಹೆಚ್ಚಿಸಿದೆ. ಭೂಮಿಯಲ್ಲಿನ ತೇವಾಂಶ ಸಂಪೂರ್ಣ ಕುಸಿದಿರುವ ಕಾರಣ ಬಿತ್ತನೆಗೆ ಬೇಕಾದ ತೇವಾಂಶ ಇನ್ನೂ ನಿರ್ಮಾಣವಾಗಿಲ್ಲ.

ತಾಲ್ಲೂಕಿನ ಬಹುತೇಕ ರೈತರು ಮಳೆಯನ್ನೇ ಅವಲಂಬಿಸಿ ಕೃಷಿ ಮಾಡುತ್ತಾರೆ. ಜೂನ್ ಆರಂಭಕ್ಕೆ ಬಿತ್ತನೆ ಆರಂಭಿಸುವ ನಿರೀಕ್ಷೆಯಲ್ಲಿದ್ದ ರೈತರು ಇದೀಗ ಆಕಾಶದತ್ತ ಕಾದು ನೋಡುವ ಸ್ಥಿತಿ ಇದೆ. ಜೋಳ, ರಾಗಿ, ಕಡಲೆ, ತೊಗರಿ ಸೇರಿದಂತೆ ವಿವಿಧ ಬೆಳೆಗಳ ಬಿತ್ತನೆಗೆ ರೈತರು ಸಿದ್ಧತೆ ಮಾಡಿಕೊಳ್ಳಬೇಕಾಗಿತ್ತು. ಆದರೆ ಮಳೆ ಕೊರತೆಯಿಂದ ಹೊಲಕ್ಕೆ ಇಳಿಯಲಾಗದೆ ತಲ್ಲಣಗೊಳ್ಳುತ್ತಿದ್ದಾರೆ.

ಕೆಲ ರೈತರು ಈಗಾಗಲೇ ಜಮೀನು ಹದ ಮಾಡಿಕೊಳ್ಳಲು, ಬೀಜ ಮತ್ತು ರಸಗೊಬ್ಬರ ಖರೀದಿ ಮಾಡಿಕೊಳ್ಳಲು ಮಳೆಯ ನಿರೀಕ್ಷೆಯಲ್ಲಿದ್ದಾರೆ. ಆದರೆ ಮುಂಗಾರು ತಡವಾಗುತ್ತಿರುವುದರಿಂದ ಬಿತ್ತನೆ ಸಮಯ ಕೈತಪ್ಪುವ ಆತಂಕ ರೈತರನ್ನು ಕಾಡುತ್ತಿದೆ.

ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ಈಗಾಗಲೇ ಕೊಳವೆ ಬಾವಿಗಳ ನೀರಿನ ಮಟ್ಟ ಕುಸಿದಿದೆ. ಕೆಲವೆಡೆ ದಿನಕ್ಕೆ ಕೆಲವೇ ಗಂಟೆಗಳು ಮಾತ್ರ ನೀರು ಬರುತ್ತಿದ್ದು, ಇನ್ನೂ ಕೆಲವು ಬೋರ್‌ವೆಲ್‌ಗಳು ಸಂಪೂರ್ಣ ಬತ್ತಿವೆ. ಪರಿಸ್ಥಿತಿ ಹೀಗೆ ಮುಂದುವರೆದರೆ ಗ್ರಾಮೀಣ ಭಾಗಗಳಲ್ಲಿ ಕುಡಿಯುವ ನೀರಿಗಾಗಿ ಜನರು ಟ್ಯಾಂಕರ್ ಹಾಗೂ ದೂರದ ಬಾವಿಗಳನ್ನು ಅವಲಂಬಿಸುವ ಪರಿಸ್ಥಿತಿ ಎದುರಾಗಲಿದೆ.



### ಜಂಪೇನಹಳ್ಳಿ ಕೆರೆ ನೀರು ಖಾಲಿ

**ತಾಲ್ಲೂಕಿನ ಅನೇಕ ಕೆರೆಗಳು ಈಗಾಗಲೇ ಬರಿದಾಗಿದ್ದು, ಕೆಲವು ಕೆರೆಗಳಲ್ಲಿ ಮಾತ್ರ ಅಲ್ಪ ಪ್ರಮಾಣದ ನೀರು ಉಳಿದಿದೆ. ಕೊರಟಗೆರೆ ಪಟ್ಟಣಕ್ಕೆ ನೀರುಣಿಸುವ ಜಂಪೇನಹಳ್ಳಿ ಕೆರೆ ನೀರು ಖಾಲಿಯಾಗುತ್ತಿದೆ. ವಾರದಲ್ಲಿ ಕೆರೆ ಸಂಪೂರ್ಣ ಖಾಲಿಯಾಗಲಿದೆ.**

**ಹಲವು ಗ್ರಾಮಗಳಲ್ಲಿ ಕುಡಿಯುವ ನೀರಿನ ಕೊಳವೆಗಳು ವಾರಕ್ಕೆ ಕೆಲವೇ ದಿನ ಕಾರ್ಯನಿರ್ವಹಿಸುತ್ತಿವೆ. ಕೆಲವೆಡೆ ಮಹಿಳೆಯರು ಬೆಳಗ್ಗೆಯೇ ನೀರಿಗಾಗಿ ಸಾಲಿನಲ್ಲಿ ನಿಲ್ಲುವ ಪರಿಸ್ಥಿತಿ ಎದುರಾಗಿದೆ.**




## ಸ್ವಾತಂತ್ರ್ಯದ ಬಳಿಕ ಪ್ರಥಮ ಬಾರಿಗೆ ಸಿಂಗಾಪುರ ಗ್ರಾಮಕ್ಕೆ ಕೆಎಸ್‌ಆರ್‌ಟಿಸಿ ಬಸ್ ಸಂಪರ್ಕ

• **ಉದಯವಾಹಿನಿ, ಹುಳಿಯಾರು**

ಸ್ವಾತಂತ್ರ್ಯ ಬಂದು 7 ದಶಕಗಳೇ ಕಳೆದರೂ ಸಾರಿಗೆ ಸಂಪರ್ಕವಿಲ್ಲದೆ ವಂಚಿತವಾಗಿದ್ದ ತುಮಕೂರು ಜಿಲ್ಲೆಯ ಗಡಿ ಭಾಗದ ಸಿಂಗಾಪುರ ಗ್ರಾಮಕ್ಕೆ ಕೊನೆಗೂ ಕೆಎಸ್‌ಆರ್‌ಟಿಸಿ ಬಸ್ ಭಾಗ್ಯ ದೊರೆತಿದೆ. ತುಮಕೂರು ವಿಭಾಗದ ಸಾರಿಗೆ ಅಧಿಕಾರಿಗಳ ವಿಶೇಷ ಮುತುವರ್ಜಿಯಿಂದಾಗಿ ಮೇ.21 ರಿಂದ ಈ ನೂತನ ಬಸ್ ಕಾರ್ಯಾಚರಣೆ ಆರಂಭಿಸಿದೆ. ದಶಕಗಳ ಕನಸು ನನಸಾದ ಹಿನ್ನೆಲೆಯಲ್ಲಿ ಗ್ರಾಮಕ್ಕೆ ಪ್ರಥಮ ಬಾರಿಗೆ ಆಗಮಿಸಿದ ಸರ್ಕಾರಿ ಬಸ್ಸನ್ನು ಕಂಡು ಗ್ರಾಮಸ್ಥರು ಅಪಾರ ಹರ್ಷ ವ್ಯಕ್ತಪಡಿಸಿದರು.

**ಹೋರಾಟಗಾರರಿಗೆ ಸನ್ಮಾನ ವಿಶೇಷ ಪೂಜೆ**

ಗ್ರಾಮಕ್ಕೆ ಬಸ್ ವ್ಯವಸ್ಥೆ ಕಲ್ಪಿಸುವಂತೆ ಕೋರಿ ತುಮಕೂರಿನ ಸಾರಿಗೆ ಕಚೇರಿಗೆ ತೆರಳಿ ಸತತವಾಗಿ ಅರ್ಜಿ ಸಲ್ಲಿಸಿ, ಒತ್ತಾಯ ತಂದಿದ್ದ ಸಾಮಾಜಿಕ ಹೋರಾಟಗಾರರಾದ ಗಂಗಮ್ಮ, ಪಾರ್ವತಮ್ಮ, ವಿಜಯಮ್ಮ, ಚಂದ್ರಮ್ಮ, ವಿಶಾಲಾಕ್ಷಿ, ದೇವಿಪ್ರಸಾದ್, ಲೋಕೇಶ್ ಹುಳಿಯಾರ್, ಜೈ ಸ್ವಾಮಿ ಬೊಮ್ಮೇನಹಳ್ಳಿ ಹಾಗೂ ಶ್ರೀನಿವಾಸ್ ಸಬ್ಬೇನಹಳ್ಳಿರವರ ಶ್ರಮವನ್ನು ಗ್ರಾಮಸ್ಥರು ಮುಕ್ತಕಂಠದಿಂದ ಶ್ಲಾಘಿಸಿ, ಅಭಿನಂದಿಸಿದರು.




ಗ್ರಾಮದ ಆಂಜನೇಯಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ಹಾಗೂ ಫಲಹಾರ ವ್ಯವಸ್ಥೆಯನ್ನು ಹಮ್ಮಿಕೊಳ್ಳಲಾಗಿತ್ತು.

ಗ್ರಾಮಕ್ಕೆ ಆಗಮಿಸಿದ ಬಸ್ ಚಾಲಕ ಮತ್ತು ನಿರ್ವಾಹಕರನ್ನು ಗ್ರಾಮಸ್ಥರು ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಿದರು. ಸಾಮಾಜಿಕ ಹೋರಾಟಗಾರ ಲೋಕೇಶ್ ಮಾತನಾಡಿ ಗ್ರಾಮಸ್ಥರ ದಶಕಗಳ ಬೇಡಿಕೆಗೆ ಸ್ಪಂದಿಸಿ ಬಸ್ ವ್ಯವಸ್ಥೆ ಮಾಡಿಕೊಟ್ಟ ತುಮಕೂರು ವಿಭಾಗದ ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗಕ್ಕೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಶಾಲಾ ಸಮಯದಲ್ಲಿ ವಿದ್ಯಾರ್ಥಿಗಳಿಗೆ ಮತ್ತಷ್ಟು ಅನುಕೂಲವಾಗುವಂತೆ ಹೆಚ್ಚುವರಿಯಾಗಿ ಮತ್ತೊಂದು ಬಸ್ ವ್ಯವಸ್ಥೆ ಕಲ್ಪಿಸಿಕೊಡಬೇಕೆಂದು ಅಧಿಕಾರಿಗಳಿಗೆ ಮನವಿ ಮಾಡಿದರು.

## ದುಬಾರೆ ಆನೆ ಶಿಬಿರ ದುರಂತ: ಇಬ್ಬರು ಅರಣ್ಯ ಅಧಿಕಾರಿಗಳಿಗೆ ಕರ್ನಾಟಕ ಲೋಕಾಯುಕ್ತದಿಂದ ಸುಮೋಟೋ ನೋಟಿಸ್ ಜಾರಿ

• **ಉದಯವಾಹಿನಿ, ಕೊಡಗು**

ಜಿಲ್ಲೆಯ ಪ್ರಸಿದ್ಧ ಪ್ರವಾಸಿ ತಾಣವಾದ ದುಬಾರೆ ಆನೆ ಬಿಡಾರದಲ್ಲಿ ಇತ್ತೀಚೆಗೆ ನಡೆದ ದುರಂತಕ್ಕೆ ಸಂಬಂಧಿಸಿದಂತೆ ಕರ್ನಾಟಕ ಲೋಕಾಯುಕ್ತವು ಗಂಭೀರ ಕ್ರಮ ಕೈಗೊಂಡಿದೆ. ಈ ಘಟನೆಯನ್ನು ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡಿರುವ ಉಪಲೋಕಾಯುಕ್ತರಾದ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಅವರು ಅರಣ್ಯ ಇಲಾಖೆಯ ಇಬ್ಬರು ಉನ್ನತ ಅಧಿಕಾರಿಗಳಿಗೆ ನೋಟಿಸ್ ಜಾರಿ ಮಾಡಿದ್ದಾರೆ.

ಸೋಮವಾರಪೇಟೆ ಉಪವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಎ.ಎ.ಗೋಪಾಲ್ ಮತ್ತು ಕುಶಾಲನಗರ ವಲಯ ಅರಣ್ಯಾಧಿಕಾರಿ ರಕ್ಷಿತ್ ಅವರಿಗೆ ಲೋಕಾಯುಕ್ತರು ನೋಟಿಸ್ ನೀಡಿದ್ದು, ಜೂನ್ 24 ರಂದು ನಡೆಯಲಿರುವ ವಿಚಾರಣೆಗೆ ವೈಯಕ್ತಿಕವಾಗಿ ಹಾಜರಾಗುವಂತೆ ಸೂಚಿಸಿದ್ದಾರೆ. ಇದರೊಂದಿಗೆ, ಈ ದುರಂತಕ್ಕೆ ಕಾರಣವಾದ ಲೋಪದೋಷಗಳು ಮತ್ತು ಮುಂದೆ ಇಂತಹ ಘಟನೆಗಳು ಮರುಕಳಿಸದಂತೆ ತಡೆಯಲು ಕೈಗೊಂಡಿರುವ ಮುನ್ನೆಚ್ಚರಿಕಾ ಕ್ರಮಗಳ ಕುರಿತು ಮುಂದಿನ ನಾಲ್ಕು ವಾರಗಳ ಒಳಗಾಗಿ ವಿವರವಾದ ವರದಿ ಸಲ್ಲಿಸುವಂತೆ ಆದೇಶಿಸಿದ್ದಾರೆ.ದುಬಾರೆ ಆನೆ ಬಿಡಾರದಲ್ಲಿ ಕಂಜನ್ ಮತ್ತು ಮಾರ್ತಾಂಡ ಎಂಬ ಎರಡು ಸಾಕಾನೆಗಳ ನಡುವೆ ದಿಢೀರ್ ಜಗಳ ನಡೆದಿತ್ತು. ಈ ಕಾದಾಟದ ತೀವ್ರತೆಗೆ ಆನೆ ಮಾರ್ತಾಂಡ ನಿಯಂತ್ರಣ ತಪ್ಪಿ ನದಿಯ ದಂಡೆಯಲ್ಲಿದ್ದ ಪ್ರವಾಸಿಗರ ಮೇಲೆ ಬಿದ್ದಿತ್ತು. ಇದರ ಪರಿಣಾಮವಾಗಿ ತಮಿಳುನಾಡಿನ ಪ್ರವಾಸಿಯಾಗಿದ್ದ 33 ವರ್ಷದ ಮಹಿಳೆ ಆನೆಯ ಅಡಿಯಲ್ಲಿ ಸಿಲುಕಿ ಸ್ಥಳದಲ್ಲೇ ಸಾವನ್ನಪ್ಪಿದ್ದರು. ಆಕೆಯ ಪತಿ ಮತ್ತು ಮಗು ಕೂದಲೆಳೆ ಅಂತರದಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದರು. ಈ ಜಗಳದಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಸಾಕಾನೆ ಮಾರ್ತಾಂಡ ಕೂಡ ನಂತರ ಮೃತಪಟ್ಟಿತ್ತು.




ಮಾಧ್ಯಮಗಳ ವರದಿಗಳನ್ನು ಆಧರಿಸಿ ಪ್ರಕರಣ ದಾಖಲಿಸಿಕೊಂಡ ಉಪಲೋಕಾಯುಕ್ತರು, ಬಿಡಾರದಲ್ಲಿ ಪ್ರವಾಸಿಗರ ಸುರಕ್ಷತೆಗೆ ಯಾವುದೇ ನಿರ್ದಿಷ್ಟ ಕಾರ್ಯವಿಧಾನ ಇಲ್ಲದಿರುವುದು ಮತ್ತು ಪ್ರವಾಸಿಗರು ಆನೆಗಳ ಅತ್ಯಂತ ಹತ್ತಿರಕ್ಕೆ ಹೋಗಲು ಮುಕ್ತ ಅವಕಾಶ ನೀಡಿದ್ದೇ ಈ ದುರಂತಕ್ಕೆ ಕಾರಣ ಎಂದು ಮೇಲ್ನೋಟಕ್ಕೆ ಅಭಿಪ್ರಾಯಪಟ್ಟಿದ್ದಾರೆ. ಅಧಿಕಾರಿಗಳ ಇಂತಹ ಬೇಜವಾಬ್ದಾರಿತನ ಮತ್ತು ಆಡಳಿತಾತ್ಮಕ ಲೋಪವು ಸಂವಿಧಾನದ 21ನೇ ವಿಧಿಯಡಿ ನಾಗರಿಕರಿಗೆ ನೀಡಿರುವ ಜೀವಿಸುವ ಮತ್ತು ಸುರಕ್ಷತೆಯ ಹಕ್ಕಿನ ಉಲ್ಲಂಘನೆಯಾಗಿದೆ ಎಂದು ಅವರು ತೀವ್ರ ಆತಂಕ ವ್ಯಕ್ತಪಡಿಸಿದ್ದಾರೆ. ಸಾರ್ವಜನಿಕರು ಭೇಟಿ ನೀಡುವ ಸ್ಥಳಗಳಲ್ಲಿ ಸುರಕ್ಷತೆಯನ್ನು ಖಾತ್ರಿಪಡಿಸುವುದು ಸರ್ಕಾರಿ ಸಂಸ್ಥೆಗಳ ಕರ್ತವ್ಯ ಎಂಬ ಸುಪ್ರೀಂ ಕೋರ್ಟ್ ಆದೇಶವನ್ನೂ ಲೋಕಾಯುಕ್ತರು ತಮ್ಮ ಆದೇಶದಲ್ಲಿ ಉಲ್ಲೇಖಿಸಿದ್ದಾರೆ.

ಈ ಘಟನೆಯ ನಂತರ ಎಚ್ಚೆತ್ತುಕೊಂಡಿರುವ ರಾಜ್ಯ ಸರ್ಕಾರ ಮತ್ತು ಅರಣ್ಯ ಇಲಾಖೆಯು ರಾಜ್ಯದ ಎಲ್ಲಾ ಆನೆ ಬಿಡಾರಗಳಲ್ಲಿ ಪ್ರವಾಸಿಗರು ಆನೆಗಳಿಗೆ ಅತ್ಯಂತ ಹತ್ತಿರ ಹೋಗಿ ಸ್ನಾನ ಮಾಡಿಸುವುದು, ಆಹಾರ ನೀಡುವುದು ಹಾಗೂ ಸ್ಪರ್ಶಿಸುವುದನ್ನು ಕಡ್ಡಾಯವಾಗಿ ನಿಷೇಧಿಸಿದ್ದು, ಕನಿಷ್ಠ 100 ಅಡಿ ದೂರದಿಂದ ಮಾತ್ರ ವೀಕ್ಷಿಸಲು ಕಟ್ಟುನಿಟ್ಟಿನ ನಿಯಮಗಳನ್ನು ಜಾರಿಗೆ ತಂದಿದೆ.

# ಮುಂಗಾರು ಎದುರಿಸಲು ಅಧಿಕಾರಿಗಳು ಸನ್ನದ್ಧರಾಗಿ

• **ಉದಯವಾಹಿನಿ, ಚಿಕ್ಕಬಳ್ಳಾಪುರ**

ಈ ತಿಂಗಳ ಅಂತ್ಯದಲ್ಲಿ ಮುಂಗಾರು ಮಾನ್ಸೂನ್ ಪ್ರವೇಶವಾಗಲಿದ್ದು, ಈ ಮಳೆಯಿಂದಾಗುವ ಹಾನಿಗಳನ್ನು ತಡೆಗಟ್ಟಲು ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡು ದಿನದ 24 ಗಂಟೆ, ವಾರದ 7 ದಿನಗಳೂ ಕೆಲಸ ನಿರ್ವಹಿಸುವಂತೆ ಜಿಲ್ಲಾಧಿಕಾರಿ ಜಿ.ಪ್ರಭು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಿದರು.

ನಗರ ಹೊರವಲಯ ಜಿಲ್ಲಾಧಿಕಾರಿಗಳ ಕಚೇರಿಯ ನ್ಯಾಯಾಲಯ ಸಭಾಂಗಣದಲ್ಲಿ ನಡೆದ "ಮಳೆಹಾನಿ ಹಾಗೂ ಬೆಳೆ ಹಾನಿಯ ವಿವರ ಪಡೆದು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ವಿಡಿಯೋ ಸಂವಾದ" ಸಭೆಯ ಮೂಲಕ ಸೂಚನೆಗಳನ್ನು ನೀಡಿ ಮಾತನಾಡಿದರು. ಮೇ 21ರ ರಾತ್ರಿ ಜಿಲ್ಲೆಯಲ್ಲಿ ಪೂರ್ವ ಮುಂಗಾರು ಮಳೆಯಾಗಿದ್ದು, ಜಿಲ್ಲೆಯ ವಿವಿಧೆಡೆ ತೋಟಗಾರಿಕಾ ಬೆಳೆಗಳು ನಾಶವಾಗಿವೆ. ಗೌರಿಬಿದನೂರು ತಾಲ್ಲೂಕಿನಲ್ಲಿ ಹೆಚ್ಚು ಮಳೆಯಾಗಿದೆ. 20 ಹೆಕ್ಟೇರ್ ಬಾಳೆ, 1.60 ಹೆಕ್ಟೇರ್ ಅಡಿಕೆ, 1.20 ಹೆಕ್ಟೇರ್ ಟಮೋಟೋ ಹಾಗೂ 2 ಹೆಕ್ಟೇರ್ ತರಕಾರಿ ಬೆಳೆಗಳು ಜಿಲ್ಲೆಯಲ್ಲಿ ನಾಶವಾಗಿದ್ದು, ಆ ಎಲ್ಲಾ ರೈತರ ತಾಲ್ಲೂಕುಗಳಿಗೆ ತಾಲ್ಲೂಕು ತಹಶೀಲ್ದಾರರು ಖುದ್ದು ಭೇಟಿ ನೀಡಿ ಸಂತ್ರಸ್ತರಿಗೆ ಸಾಂತ್ವನ ಹೇಳಬೇಕು ಜೊತೆಗೆ ತೋಟಗಾರಿಕೆ ಇಲಾಖೆಯ ಹಾಗೂ ಇತರೆ ಇಲಾಖೆಗಳ ಅಧಿಕಾರಿಗಳೊಂದಿಗೆ ಜಂಟಿ ಸಮೀಕ್ಷೆ ನಡೆಸಿ ಪರಿಹಾರ ಹಣ ನೀಡಲು ತುರ್ತು ಕ್ರಮ ವಹಿಸಬೇಕು ಎಂದರು. ಮುಂದಿನ ದಿನಗಳಲ್ಲಿ ಜಿಲ್ಲೆಯ ಯಾವುದೇ ಭಾಗದಲ್ಲಿ ಮಳೆ ಹಾನಿಯಾದಲ್ಲಿ ತಾಲ್ಲೂಕು ಮಟ್ಟದ ಅಧಿಕಾರಿಗಳು ಕ್ಷೇತ್ರ ವೀಕ್ಷಣೆ ಮಾಡಿ ಸ್ಥಳೀಯ ಮಟ್ಟದ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಕಾಲೋಚಿತ ಕ್ರಮಗಳನ್ನು ತೆಗೆದುಕೊಳ್ಳಬೇಕು.




### ರಸ್ತೆ ಇಕ್ಕೆಲಗಳನ್ನು ಸ್ವಚ್ಛ ಮಾಡಿ ತ್ಯಾಜ್ಯ ನಿರ್ಮೂಲನೆ ಆಗಲಿ

**ನಗರಗಳನ್ನು ಸಂಪರ್ಕಿಸುವ ಪ್ರಮುಖ ರಸ್ತೆಗಳು ಹಾಗೂ ಇತರ ರಸ್ತೆಗಳ ಇಕ್ಕೆಲಗಳಲ್ಲಿ ಶೇಖರಣೆ ಆಗಿರುವ ತ್ಯಾಜ್ಯ ವಸ್ತುಗಳು, ಪ್ಲಾಸ್ಟಿಕ್ ತ್ಯಾಜ್ಯವನ್ನು ಒಂದು ವಾರದ ಒಳಗಾಗಿ ತೆರವು ಮಾಡಬೇಕು. ಖಾಲಿ ನಿವೇಶನಗಳಲ್ಲಿ ಗಿಡಗಳನ್ನು ಹಾಗೂ ಘನ ತ್ಯಾಜ್ಯವನ್ನು ಸ್ಥಳೀಯಾಡಳಿತ ಸಂಸ್ಥೆಗಳ ಮೂಲಕವೇ ತೆರವು ಮಾಡಬೇಕು, ಸದರಿ ವೆಚ್ಚವನ್ನು ನಿವೇಶನ ಮಾಲಿಕರಿಂದ ವಸೂಲಿ ಮಾಡಲು ಸೂಚನೆ ನೀಡಿದರು.**

**ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ವೈ.ನವೀನ್ ಭಟ್ ರವರು ಮಾತನಾಡಿ, ಮಳೆಯ ಸಂದರ್ಭದಲ್ಲಿ ನೀರು ಸರಾಗವಾಗಿ ಹರಿದು ಹೋಗಲು ಜಿಲ್ಲೆಯಲ್ಲಿನ ರಾಜ ಕಾಲುವೆಗಳು, ಚರಂಡಿಗಳನ್ನು ತುರ್ತಾಗಿ ಸ್ವಚ್ಛ ಮಾಡಬೇಕು. ಗಿಡ, ಮರ, ಹುಲ್ಲು ಹಾಗೂ ಯಾವುದೇ ರೀತಿಯ ತ್ಯಾಜ್ಯವಿದ್ದಲ್ಲಿ ತೆರವು ಮಾಡಬೇಕು.**

### ಎಫ್‌ಐಡಿ ಆಧಾರಿತ ರಸಗೊಬ್ಬರ ವಿತರಣೆ

**ಬಿತ್ತನೆ ಬೀಜ, ರಸಗೊಬ್ಬರ ಪೂರೈಕೆ ಸೇರಿದಂತೆ ಈ ವರ್ಷ ಜಿಲ್ಲೆಯಲ್ಲಿ ಕೈಗೊಳ್ಳುವ ಕೃಷಿ ಚಟುವಟಿಕೆಗಳ ಬಗ್ಗೆ ರೂಪುರೇಷೆಗಳನ್ನು ಸಿದ್ದಪಡಿಸಿ ಮುಂಗಾರು ಪೂರ್ವದಲ್ಲೇ ರೈತರಿಗೆ ಮಾಹಿತಿ ನೀಡಲು ಜಂಟಿ ಕೃಷಿ ನಿರ್ದೇಶಕರಿಗೆ ಸೂಚನೆ ನೀಡಿದರು. ಒಟ್ಟಾರೆ ಎಫ್‌ಐಡಿ ಆಧಾರಿತವಾಗಿ ರಸಗೊಬ್ಬರ ವಿತರಣೆ ಆಗಬೇಕು. ರಸಗೊಬ್ಬರವನ್ನು ಆಮದು ಮಾಡಿಕೊಳ್ಳಲು ಸಮರ್ಪಕವಾಗಿ ಹಾಗೂ ಕಾಲೋಚಿತವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳಲು ತಿಳಿಸಿದರು.**



## ಮಿನಿ ನ್ಯೂಸ್

### ಮೇಲೂರು ಗ್ರಾಮದಲ್ಲಿ ಶ್ರೀ ವೀರಭದ್ರಸ್ವಾಮಿ ದೇವಾಲಯದ ವಾರ್ಷಿಕೋತ್ಸವ

• **ಉದಯವಾಹಿನಿ, ಶಿಡ್ಲಘಟ್ಟ**

ತಾಲ್ಲೂಕಿನ ಮೇಲೂರು ಗ್ರಾಮದಲ್ಲಿರುವ ಶ್ರೀ ಉಮಾಮಹೇಶ್ವರಸ್ವಾಮಿ, ಭದ್ರಕಾಳಿ ಸಮೇತ ಶ್ರೀ ವೀರಭದ್ರಸ್ವಾಮಿ ದೇವಾಲಯದ ಮೊದಲನೇ ವರ್ಷದ ವಾರ್ಷಿಕೋತ್ಸವವನ್ನು ಭಕ್ತಿ ಸಂಭ್ರಮದಿಂದ ಆಚರಿಸಲಾಯಿತು.

ಅರ್ಚಕರಾದ ಮೋಹನ್ ಭಗವತ್ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿಶೇಷ ಪೂಜೆ, ಹೋಮ, ನೈವೇದ್ಯ, ಹೂವಿನ ಅಲಂಕಾರ ಹಾಗೂ ದೀಪಾಲಂಕಾರ ಭಕ್ತರ ಗಮನ ಸೆಳೆಯಿತು. ಮೇ 21 ಮತ್ತು 22ರಂದು ನಡೆದ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದರು. ಮಧ್ಯಾಹ್ನ ಮಹಾಮಂಗಳಾರತಿ ಬಳಿಕ ತೀರ್ಥ ಪ್ರಸಾದ ವಿತರಣೆ ಹಾಗೂ ಅನ್ನದಾನ ಕಾರ್ಯಕ್ರಮ ನಡೆಯಿತು ಕಾರ್ಯಕ್ರಮದಲ್ಲಿ ಅರ್ಚಕ ಸಂಗಮೇಶ್, ಗ್ರಾಮ ಪಂಚಾಯಿತಿ ಸದಸ್ಯ ಉಮೇಶ್ ರಾಮಕೃಷ್ಣಪ್ಪ, ಮಂಜುನಾಥ್, ನವೀನ್, ರಮೇಶ್, ಶಿವಕುಮಾರ್,ಪ್ರದೀಪ್ ರೂಪೇಶ್, ಲಕ್ಷ್ಮೀನಾರಾಯಣಪ್ಪ, ಸುಧೀರ್, ಶ್ರೀನಿವಾಸಮೂರ್ತಿ, ನಂದನ್ ನಂಜುಂಡಮೂರ್ತಿ, ಆರ್.ಬಿ. ಜಯದೇವ, ಮುನಿಶಾಮಯ್ಯ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

### ಅಕಾಲ ಮಳೆಗೆ ನೆಲ ಕಚ್ಚಿದ ಎಕರೆಗಳ ಗಟ್ಟಲೆ ಬಾಳೆತೋಟಗಳು




• **ಉದಯವಾಹಿನಿ, ಗೌರಿಬಿದನೂರು**

ತಾಲ್ಲೂಕಿನ ದಾರಿನಾಯಕನಪಾಳ್ಯ ಹೋಬಳಿ ಚೀಲಮ್ಮನಹಳ್ಳಿಯಲ್ಲಿ ಸುರಿದ ಜೋರು ಮಳೆ ಹಾಗು ಗಾಳಿಗೆ ಎಕರಗಳ ಗಟ್ಟಲೆ ಬಾಳೇ ತೋಟಗಳು ನೆಲ ಕಚ್ಚಿವೆ. ಬಾಳೆ ರೈತ ಆನಂದರೆಡ್ಡಿ ಸುದ್ದಿಗಾರರೊಂದಿಗೆ ಮಾತನಾಡಿ ಮೂರೂವರೆ ಎಕರೆಯಲ್ಲಿ ಸುಮಾರು 5 ಲಕ್ಷ ರೂಗಳು ಬಂಡವಳ ಹಾಕಿ ಬಾಳೆ ಬೆಳೆ ಹಾಕಿದ್ದಾರೆ. ಬೆಳೆ ಚನ್ನಾಗಿ ಬರುವ ಆಶಾಬಾವನೆ ಇತ್ತು. ಇದರಿಂದ ಸುಮಾರು 15 ಲಕ್ಷ ರೂಗಳು ಹುಟ್ಟುವಳಿ ಆಗಬಹುದೆಂಬ ನಿರೀಕ್ಷೆಯಲ್ಲಿ ಇವರಿದ್ದರು. ಆದರೆ ನಿನ್ನೆ ಅಕಾಲ ಮಳೆಗೆ ಬಾಳೆ ತೋಟ ಪೂರಾ ನಷ್ಟವಾಗಿದೆ ಸರ್ಕಾರ ನಷ್ಟ ಪರಿಹಾರ ನೀಡಿ ರೈತರ ಕಷ್ಟಕ್ಕೆ ಸ್ಪಂದಿಸಬೇಕೆಂದರು. ಶಿವಾರೆಡ್ಡಿ, ನಾರಾಯಣರೆಡ್ಡಿ, ಬಾಲಪ್ಪ, ಪ್ರಕಾಶ ರಾಜು ಮುಂತಾದ ರೈತರಿಗೂ ಇಂತಹುದೇ ನಷ್ಟವಾಗಿದೆ.

ಶಾಸಕ ಪುಟ್ಟಸ್ವಾಮಿಗೌಡನೆ ತೋಟಗಾರಿಕೆ ಅಧಿಕಾರಿಗಳೊಂದಿಗೆ ಚೀಲಮ್ಮನಹಳ್ಳಿಯಲ್ಲಿ ಗಾಳಿ,ಮಳೆಗೆ ನೆಲಕಚ್ಚಿದ ಬಾಳೆ ತೋಟಗಳನ್ನು ವೀಕ್ಷಿಸಿ ರೈತರಿಗೆ ಸಾಂತ್ವನ ಹೇಳಿ ಸರ್ಕಾರದಿಂದ ನಷ್ಟ ಪರಿಹಾರ ಕೊಡಿಸಲು ಪ್ರಯತ್ನ ಮಾಡುವುದಾಗಿ ತಿಳಿಸಿದರು. ಈ ಹೋಬಳೀಯಲ್ಲಿ ಸುಮಾರು 30 ಎಕರೆ ವಿಸ್ತೀರ್ಣ ದಲ್ಲಿ ಬಾಳೆ ಸುಮಾರು 60 ಎಕರೆ ವಿಸ್ತೀರ್ಣ ದಲ್ಲಿ ತರಕಾರಿ ಮುಂತಾದ ಬೆಳೆಗಳು ನಷ್ಟವಾಗಿದೆ.

ಪ್ರಕೃತಿ ವಿಕೋಪ ಅಡಿಯಲ್ಲಿ ರೈತರಿಗೆ ಸರ್ಕಾರದ ಮಾನದಂಡಗಳಲ್ಲಿ ನಷ್ಟಪರಿಹಾರ ನೀಡಲು ಜಿಲ್ಲಾಧಿಕಾರಿಗಳಿಗೆ ವರದಿ ನೀಡಬೇಕಾಗಿ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಶಾಸಕ ಪುಟ್ಟಸ್ವಾಮಿಗೌಡ ತಿಳಿಸಿದರು

### ಸಾರ್ವಜನಿಕರ ಬೇಡಿಕೆಗೆ ಸ್ಪಂದನೆ : ಎಚ್ ಕ್ರಾಸ್‌ಟಿನ್ ಫ್ಯಾಕ್ಟರಿ ನಡುವೆ "ವೇಗದೂತ" ಬಸ್ ಸೇವೆ ಆರಂಭ




• **ಉದಯವಾಹಿನಿ, ಶಿಡ್ಲಘಟ್ಟ**

ಬೆಂಗಳೂರು ನಗರ ಹಾಗೂ ಹೊರ ವಲಯಗಳಿಗೆ ಪ್ರತಿದಿನ ಸಂಚಾರ ಮಾಡುವ ಸಾರ್ವಜನಿಕರ ಅನುಕೂಲಕ್ಕಾಗಿ ಟಿನ್ ಫ್ಯಾಕ್ಟರಿಯಿಂದ ಹೊಸಕೋಟೆಯ ಎಚ್ ಕ್ರಾಸ್ ಬಸ್ ನಿಲ್ದಾಣದವರೆಗೆ ನೂತನ "ವೇಗದೂತ" ಬಸ್ ಸೇವೆ ಆರಂಭಿಸಲಾಯಿತು.ಕರ್ನಾಟಕ ಸರ್ಕಾರದ ಮುಜರಾಯಿ ಹಾಗೂ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿಅವರು ತಾಲ್ಲೂಕಿನ ಎಚ್ ಕ್ರಾಸ್ ವರವಲಯದ ತರಬಹಳ್ಳಿ ಲಕ್ಷ್ಮಿಪುರ ಸಮೀಪ ನಡೆದ ಕಾರ್ಯಕ್ರಮದಲ್ಲಿ ನೂತನ ಬಸ್ ಮಾರ್ಗಗಳನ್ನು ಲೋಕಾರ್ಪಣೆ ಮಾಡಿ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಸಾರ್ವಜನಿಕರಿಗೆ ವೇಗವಾದ, ಸುರಕ್ಷಿತ ಹಾಗೂ ಉತ್ತಮ ಗುಣಮಟ್ಟದ ಸಾರಿಗೆ ಸೌಲಭ್ಯ ಒದಗಿಸುವ ಉದ್ದೇಶದಿಂದ 'ವೇಗದೂತ' ಸೇವೆಗಳನ್ನು ಹಂತ ಹಂತವಾಗಿ ವಿಸ್ತರಿಸಲಾಗುತ್ತಿದೆ ಎಂದು ತಿಳಿಸಿದರು. ಕಡಿಮೆ ನಿಲ್ದಾಣಗಳ ಮೂಲಕ ಕಾರ್ಯಾಚರಿಸುವ ಈ ಬಸ್ ಸೇವೆಯಿಂದ ಪ್ರಯಾಣ ಸಮಯ ಕಡಿಮೆಯಾಗಲಿದ್ದು, ವಿದ್ಯಾರ್ಥಿಗಳು ಹಾಗೂ ಉದ್ಯೋಗಿಗಳಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದರು.

ಶಿಡ್ಲಘಟ್ಟ ಕ್ಷೇತ್ರದ ಶಾಸಕ ಬಿ.ಎನ್. ರವಿಕುಮಾರ್ ಮಾತನಾಡಿ, ಗ್ರಾಮೀಣ ಭಾಗದ ಜನರಿಗೆ ಬೆಂಗಳೂರಿನೊಂದಿಗೆ ವೇಗವಾದ ಸಂಪರ್ಕ ಕಲ್ಪಿಸುವ ನಿಟ್ಟಿನಲ್ಲಿ ಈ ಸೇವೆ ಸಹಕಾರಿಯಾಗಲಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಹೊಸಕೋಟೆ ಕ್ಷೇತ್ರದ ಶಾಸಕ ಶರತ್ ಬಚ್ಚೇಗೌಡ ಸಾರಿಗೆ ಇಲಾಖೆಯ ಅಧಿಕಾರಿಗಳು, ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

### ಚಿಂತಾಮಣಿಯಲ್ಲಿ ಅದ್ದೂರಿ ಭೀಮೋತ್ಸವ ಆಚರಣೆ

• **ಉದಯವಾಹಿನಿ, ಚಿಂತಾಮಣಿ**

ನ್ಯಾಯಾಲಯಗಳು ಹಾಗೂ ಸರ್ಕಾರಿ ಕಚೇರಿಗಳಲ್ಲಿ ಅಂಬೇಡ್ಕರ್ ಅವರ ಭಾವಚಿತ್ರ ಅಳವಡಿಸಲು ಕೆಲವರು ಹಿಂದೇಟು ಹಾಕುತ್ತಿರುವುದು ನೋವಿನ ಸಂಗತಿ ಎಂದು ನಿವೃತ್ತ ನ್ಯಾಯಾಧೀಶ ವಿ ಗೋಪಾಲಗೌಡರು ಬೇಸರ ವ್ಯಕ್ತಪಡಿಸಿದರು ಚಿಂತಾಮಣಿ ನಗರದಲ್ಲಿ ದಲಿತ,ಹಿಂದುಳಿದ, ಅಲ್ಪಸಂಖ್ಯಾತ ಹಾಗೂ ಪ್ರಗತಿಪರ ಸಂಘಟನೆಗಳ ಸಂಯುಕ್ತ ಆಶ್ರಯದಲ್ಲಿ ಭೀಮೋತ್ಸವವನ್ನು ಅತ್ಯಂತ ಅದ್ದೂರಿಯಾಗಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಸಮಾಜದ ವಿವಿಧ ವರ್ಗಗಳ ಮುಖಂಡರು, ಸಾರ್ವಜನಿಕರು ಹಾಗೂ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಡಾ.ಬಿ.ಆರ್.ಅಂಬೇಡ್ಕರ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದರು.

ಕಾರ್ಯಕ್ರಮಕ್ಕೆ ನಿವೃತ್ತ ನ್ಯಾಯಾಧೀಶರು ವಿ.ಗೋಪಾಲಗೌಡ ಮಾಜಿ ಶಾಸಕ ಜೆ.ಕೆ.ಕೃಷ್ಣಾರೆಡ್ಡಿ ಹಾಗೂ ಬಿಜೆಪಿ ಮುಖಂಡ ದೇವನಹಳ್ಳಿ ಜಿ.ಎನ್. ವೇಣುಗೋಪಾಲ್ ಚಾಲನೆ ನೀಡಿದರು.

ಅಂತರಾಳದಿಂದ..
EDITORIAL

# ಸರಕಾರಿ ವಿವಿಗಳ ಗೌರವ ವೃದ್ಧಿಗೆ ಉನ್ನತ ಶಿಕ್ಷಣ ಇಲಾಖೆ ಮುಂದಡಿ



ರಾಜ್ಯದ ಸರಕಾರಿ ವಿಶ್ವವಿದ್ಯಾನಿಲಯಗಳು ಪ್ರತೀ ವರ್ಷ ಘಟಿಕೋತ್ಸವದ ಸಂದರ್ಭದಲ್ಲಿ ಕೊಡಮಾಡುವ ಗೌರವ ಡಾಕ್ಟರೇಟ್‌ನ ಘನತೆ, ಗೌರವವನ್ನು ಉಳಿಸುವ ನಿಟ್ಟಿನಲ್ಲಿ ರಾಜ್ಯ ಸರಕಾರ ಕೊನೆಗೂ ಮುಂದಡಿ ಇರಿಸಿದೆ. ಇದಕ್ಕಾಗಿ ಮಾನದಂಡ ರೂಪಿಸಲು ಉಪಸಮಿತಿಯೊಂದನ್ನು ರಚಿಸಿರುವ ಉನ್ನತ ಶಿಕ್ಷಣ ಇಲಾಖೆ ಮುಂದಿನ ದಿನಗಳಲ್ಲಿ ಸಮಾಜದಲ್ಲಿನ ಅರ್ಹ ಸಾಧಕರಿಗೆ ವಿಶ್ವವಿದ್ಯಾನಿಲಯದ ಈ ಉನ್ನತ ಗೌರವ ಲಭಿಸುವಂತೆ ಮಾಡುವ ಮೂಲಕ ಈ ಪುರಸ್ಕಾರ ಮತ್ತು ವಿಶ್ವವಿದ್ಯಾನಿಲಯದ ಗೌರವವನ್ನು ಎತ್ತಿ ಹಿಡಿಯಲು ಪಣತೊಟ್ಟಿದೆ.

**ಇನ್ನು ರಾಜ್ಯದ ಮಟ್ಟಿಗೆ ಅತ್ಯಂತ ಮಹತ್ವದ ಹಾಗೂ ಅತ್ಯಂತ ಜರೂರಿಯಾದ ನಿರ್ಧಾರವೊಂದನ್ನು ಕೈಗೊಂಡಿರುವ ಉನ್ನತ ಶಿಕ್ಷಣ ಇಲಾಖೆ ಯುಪಿಎಸ್‌ಸಿ, ಕೆಪಿಎಸ್‌ಸಿ, ಬ್ಯಾಂಕಿಂಗ್, ರೈಲ್ವೇ ಆದಿಯಾಗಿ ಎಲ್ಲಾ ತೆರನಾದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ಪದವಿ ಶಿಕ್ಷಣ ಹಂತದಲ್ಲಿಯೇ ಸಜ್ಜುಗೊಳಿಸಲು ಕೈಗೊಳ್ಳಬೇಕಾದ ಕ್ರಮಗಳ ಕುರಿತಂತೆ ಶಿಫಾರಸು ಮಾಡಲು ಇನ್ನೊಂದು ಉಪಸಮಿತಿಯನ್ನು ರಚಿಸಿದೆ.**

**ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿಯ ವಿಷಯವನ್ನು ಪದವಿ ಪಠ್ಯಕ್ರಮಕ್ಕೆ ಸೇರ್ಪಡೆಗೊಳಿಸುವುದು ಇಲ್ಲವೇ ತರಬೇತಿ ಸಹಿತ ವಿವಿಧ ವಿಷಯಗಳ ಬಗೆಗೆ ಈ ಉಪಸಮಿತಿ ಪರಾಮರ್ಶೆ ನಡೆಸಿ ತನ್ನ ಶಿಫಾರಸನ್ನು ಇಲಾಖೆಗೆ ಸಲ್ಲಿಸಲಿದೆ. ಇದೇ ವೇಳೆ ಕಳೆದ ಕೆಲವು ವರ್ಷಗಳಿಂದ ಭಾರೀ ಚರ್ಚೆಗೆ ಗ್ರಾಸವಾಗಿರುವ ವಿಶ್ವವಿದ್ಯಾನಿಲಯಗಳ ಘಟಿಕೋತ್ಸವದ ಶಿಷ್ಟಾಚಾರ ಮತ್ತು ವಸ್ತ್ರಸಂಹಿತೆಯಲ್ಲಿ ಏಕರೂಪತೆ ತರಲು ಅಧ್ಯಯನ ನಡೆಸಲು ಮತ್ತೊಂದು ಉಪಸಮಿತಿಯನ್ನು ರಚಿಸಿದೆ.**

ರಾಜ್ಯದ ಸರಕಾರಿ ವಿಶ್ವವಿದ್ಯಾನಿಲಯಗಳು ಬೇಕಾಬಿಟ್ಟಿಯಾಗಿ ಪ್ರಭಾವಿಗಳಿಗೆ, ಬಲಾಢ್ಯರಿಗೆ, ರಾಜಕಾರಣಿಗಳಿಗೆ ಗೌರವ ಡಾಕ್ಟರೇಟ್‌ಗಳನ್ನು ಪ್ರದಾನ ಮಾಡುವ ಮೂಲಕ ಈ ಗೌರವಕ್ಕೆ ಕಳಂಕ ತರುತ್ತಿವೆ. ಅಲ್ಲದೆ, ಈ ಹಿಂದೆ ಅರ್ಹವಾಗಿಯೇ ಈ ಮನ್ನಣೆಗೆ ಪಾತ್ರರಾದ ಗಣ್ಯರ ಗೌರವಕ್ಕೂ ಈ ಮೂಲಕ ಚ್ಯುತಿ ತಂದೊಡ್ಡುತ್ತಿವೆ ಎಂಬ ಆರೋಪ ಇಂದು-ನಿನ್ನೆಯನೇದಲ್ಲ. ವರ್ಷಗಳುರುಳಿದಂತೆಯೇ ಯಾರ್ಯಾರನ್ನೋ ಓಲೈಸಲು, ತಮಗೆ ನೆರವಾದವರಿಗೆ ಕೃತಜ್ಞತಾಪೂರ್ವಕವಾಗಿ ಇಲ್ಲವೇ ಯಾವುದೋ ಲಾಬಿಗೆ ಮಣಿದು ವಿಶ್ವವಿದ್ಯಾನಿಲಯಗಳ ಆಡಳಿತ ಮಂಡಳಿ ಬೇಕಾಬಿಟ್ಟಿಯಾಗಿ ಐದಾರು ಮಂದಿಗೆ ಈ ಗೌರವ ಡಾಕ್ಟರೇಟ್ ನೀಡಲಾರಂಭಿಸಿವೆ. ವಿಶ್ವವಿದ್ಯಾನಿಲಯಗಳ ಈ ನಡೆ ಡಾಕ್ಟರೇಟ್‌ನ ಗೌರವವನ್ನೇ ಮೂಲೆಪಾಲು ಮಾಡಿದ್ದರೆ ಮತ್ತೊಂದೆಡೆಯಿಂದ ತಮ್ಮ ನಿರ್ಧಾರವನ್ನು ಸಮರ್ಥಿಸಿಕೊಳ್ಳಲೋ ಎಂಬಂತೆ ಸಮಾಜದಲ್ಲಿನ ನೈಜ ಸಾಧಕರನ್ನು ಗುರುತಿಸಿ ಅವರನ್ನು ಈ ಪಟ್ಟಿಯಲ್ಲಿ ಸೇರಿಸಿ, ಅಪಸ್ವರ ಎತ್ತಿದವರ ಬಾಯ್ಮುಚ್ಚಿಸುವ ಕೆಲಸವನ್ನು ಸರಕಾರಿ ವಿಶ್ವವಿದ್ಯಾನಿಲಯಗಳು ಮಾಡಿಕೊಂಡು ಬಂದಿವೆ. ಈ ಸಂಬಂಧ ಕಳೆದ ಹಲವು ವರ್ಷಗಳಿಂದ ಸಾರ್ವಜನಿಕ ವಲಯದಿಂದ ಆಕ್ಷೇಪ ವ್ಯಕ್ತವಾಗುತ್ತಲೇ ಬಂದಿದ್ದರೂ ವಿಶ್ವವಿದ್ಯಾನಿಲಯಗಳಾಗಲಿ ಉನ್ನತ ಶಿಕ್ಷಣ ಇಲಾಖೆಯಾಗಲಿ ತಲೆಕೆಡಿಸಿಕೊಂಡಿರಲಿಲ್ಲ. ಕೊನೆಗೂ ಜನಾಗ್ರಹಕ್ಕೆ ಕಿವಿಗೊಟ್ಟಿರುವ ಉನ್ನತ ಶಿಕ್ಷಣ ಇಲಾಖೆ ಗೌರವ ಡಾಕ್ಟರೇಟ್‌ನ ಗೌರವ ಉಳಿಸಲು ಹೆಜ್ಜೆ ಇರಿಸಿರುವುದು ಸ್ವಾಗತಾರ್ಹ ಬೆಳವಣಿಗೆ. ವಿದೇಶಿ ಶಿಷ್ಟಾಚಾರವನ್ನು ಪಕ್ಕಕ್ಕಿರಿಸಿ, ರಾಜ್ಯದ ಸಂಸ್ಕೃತಿ, ಇತಿಹಾಸ, ವೃತ್ತಿಪರತೆಯನ್ನು ಗಮನದಲ್ಲಿರಿಸಿಕೊಂಡು ಶಿಷ್ಟಾಚಾರ ಮತ್ತು ವಸ್ತ್ರಸಂಹಿತೆಯನ್ನು ರೂಪಿಸುವ ಹೊಣೆಗಾರಿಕೆಯನ್ನು ಈ ಸಮಿತಿಗೆ ನೀಡಲಾಗಿದೆ. ಈ ಮೂರೂ ಉಪಸಮಿತಿಗಳು ಸರಕಾರ ತನಗೆ ವಹಿಸಿದ ಹೊಣೆಗಾರಿಕೆಯ ಮಹತ್ವವನ್ನು ಅರಿತುಕೊಂಡು ಸಮರ್ಪಕ ಅಧ್ಯಯನ, ವಿಸ್ತ್ರತ ಸಮಾಲೋಚನೆ ನಡೆಸಿ ವರದಿ ಸಲ್ಲಿಸಬೇಕು. ಇನ್ನು ಸರಕಾರ ಕೂಡ ಉಪಸಮಿತಿ ರಚನೆಗೆ ತೋರಿದ ಆಸ್ಥೆಯನ್ನು ಈ ಸಮಿತಿಗಳು ನೀಡುವ ವರದಿಯ ಅನುಷ್ಠಾನದಲ್ಲೂ ತೋರಬೇಕು. ಹೀಗಾದಲ್ಲಿ ರಾಜ್ಯದ ಸರಕಾರಿ ವಿಶ್ವವಿದ್ಯಾನಿಲಯಗಳು ತಮಗೆ ಅಂಟಿಕೊಂಡಿದ್ದ ಕಳಂಕದಿಂದ ಹೊರಬಂದು ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ತಮ್ಮ ಪ್ರತಿಷ್ಠೆ, ಪಾರಮ್ಯವನ್ನು ವೃದ್ಧಿಸಿಕೊಳ್ಳಲಿವೆ.

ರಾಷ್ಟ್ರ ರಾಜಧಾನಿ ಹೊಸದಿಲ್ಲಿಯಲ್ಲಿ ಚಳಿಗಾಲ ಕಾಲಿಡುತ್ತಿದ್ದಂತೆಯೇ ವಾತಾವರಣ ಸಂಪೂರ್ಣ ಕಲುಷಿತವಾಗಿ ವಾಯು ಗುಣಮಟ್ಟ ಅತೀ ಕಳಪೆ ಗುಣಮಟ್ಟಕ್ಕೆ ತಲುಪುವುದು ಹೊಸ ವಿಷಯವೇನಲ್ಲ. ಕಳೆದೆರಡು ದಶಕಗಳಿಂದ ರಾಜಧಾನಿಯ ಕಳಪೆ ವಾಯು ಗುಣಮಟ್ಟ, ಹೆಚ್ಚುತ್ತಿರುವ ಮಾಲಿನ್ಯವನ್ನು ನಿಯಂತ್ರಿಸಲು ಕೇಂದ್ರ ಮತ್ತು ದಿಲ್ಲಿ ಸರ್ಕಾರ ಹರಸಾಹಸ ಪಡುತ್ತಿದ್ದರೂ ಈವರೆಗೆ ಯಶ ಕಂಡಿಲ್ಲ. ನಗರವನ್ನು ಮಾಲಿನ್ಯಮುಕ್ತವಾಗಿಸಲು ದಿಲ್ಲಿ ಸರ್ಕಾರ ಈಗ ವಿನೂತನ ಉಪಕ್ರಮಕ್ಕೆ ಚಾಲನೆ ನೀಡಿದೆ.



**ಕಲಾ ಸಾಹಿತ್ಯ**

ವಿಶ್ವಾಸ್ ಡಿ. ಗೌಡ
ಲೇಖಕರು
ಸಾಮಾಜಿಕ ಚಿಂತಕ

# ಗಿರೀಶ್ ಕಾರ್ನಾಡ್: ಕನ್ನಡ ರಂಗಭೂಮಿಯ ವಿಶ್ವಮುಖ

## ದೊಡ್ಡ ಗೌರವ ಎಂದರೆ ಕನ್ನಡಿಗರ ಹೃದಯದಲ್ಲಿ ಪಡೆದಿರುವ ಶಾಶ್ವತ ಸ್ಥಾನ

ಕನ್ನಡ ಸಾಹಿತ್ಯ ಮತ್ತು ರಂಗಭೂಮಿಯ ಇತಿಹಾಸದಲ್ಲಿ ಕೆಲವು ವ್ಯಕ್ತಿತ್ವಗಳು ಕೇವಲ ಹೆಸರುಗಳಾಗಿ ಉಳಿಯುವುದಿಲ್ಲ ಅವು ಒಂದು ಯುಗದ ಸಂಕೇತವಾಗಿಬಿಡುತ್ತವೆ. ಅಂತಹ ಅಪರೂಪದ ಮಹನೀಯರಲ್ಲಿ ಪ್ರಮುಖರು ಗಿರೀಶ್ ಕಾರ್ನಾಡ್. ಕನ್ನಡ ಮಣ್ಣಿನಲ್ಲಿ ಹುಟ್ಟಿ ಭಾರತೀಯ ರಂಗಭೂಮಿಯನ್ನು ವಿಶ್ವಮಟ್ಟಕ್ಕೆ ಕೊಂಡೊಯ್ದ ಈ ಮಹಾನ್ ಚಿಂತಕ ಕೇವಲ ನಾಟಕಕಾರರಲ್ಲ ಅವರು ಸಾಹಿತ್ಯ, ಸಿನಿಮಾ, ಸಮಾಜಚಿಂತನೆ ಮತ್ತು ಮಾನವೀಯ ಮೌಲ್ಯಗಳ ಪ್ರತಿನಿಧಿಯಾಗಿದ್ದರು.

1938ರ ಮೇ 19ರಂದು ಮಹಾರಾಷ್ಟ್ರದ ಮಾಥೇರಾನಿನಲ್ಲಿ ಜನಿಸಿದ ಗಿರೀಶ್ ಕಾರ್ನಾಡ್ ಅವರ ಬಾಲ್ಯ ಕರ್ನಾಟಕದ ಸಿರಸಿ ಮತ್ತು ಧಾರವಾಡ ಭಾಗಗಳಲ್ಲಿ ಕಳೆದಿತು. ಬಾಲ್ಯದಿಂದಲೇ ಸಾಹಿತ್ಯ ಮತ್ತು ನಾಟಕಗಳತ್ತ ಅಪಾರ ಆಸಕ್ತಿ ಹೊಂದಿದ್ದ ಅವರು ನಂತರ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ವಿದ್ಯಾಭ್ಯಾಸ ಮಾಡಿ ತಮ್ಮ ಚಿಂತನೆಗೆ ಜಾಗತಿಕ ವಿಸ್ತಾರ ನೀಡಿದರು. ಆದರೆ ವಿಶ್ವದ ಅನೇಕ ವೇದಿಕೆಗಳನ್ನು ಕಂಡರೂ ಅವರ ಹೃದಯ ಕನ್ನಡದ ನೆಲದೊಂದಿಗೆ ಸದಾ ನಂಟು ಹೊಂದಿತ್ತು.

ಗಿರೀಶ್ ಕಾರ್ನಾಡ್ ಅವರ ಸಾಹಿತ್ಯದ ಮಹತ್ವವೇನೆಂದರೆ ಪುರಾಣ, ಇತಿಹಾಸ ಮತ್ತು ಜನಪದ ಕಥೆಗಳನ್ನು ಆಧುನಿಕ ಸಮಾಜದ ಸಮಸ್ಯೆಗಳೊಂದಿಗೆ ಜೋಡಿಸಿ ಹೊಸ ಅರ್ಥ ನೀಡಿದ ರೀತಿ. ಅವರ ಮೊದಲ ನಾಟಕ ''ಯಯಾತಿ'' ಕನ್ನಡ ರಂಗಭೂಮಿಯಲ್ಲಿ ಹೊಸ ಸಂಚಲನ ಮೂಡಿಸಿತು. ನಂತರ ಬಂದ ''ತುಘಲಕ್'', ''ಹಯವದನ'', ''ನಾಗಮಂಡಲ'', ''ತಲೆದಂಡ'' ಮುಂತಾದ ಕೃತಿಗಳು ಭಾರತೀಯ ರಂಗಭೂಮಿಗೆ ಹೊಸ ದಿಕ್ಕು ನೀಡಿದವು. ಗಿರೀಶ್ ಕಾರ್ನಾಡ್ ಅವರು ಕೇವಲ ಕಲಾವಿದರಲ್ಲ; ಅವರು ಸಾಮಾಜಿಕ ಜವಾಬ್ದಾರಿಯುತ ಚಿಂತಕರೂ ಆಗಿದ್ದರು. ಸಮಾಜದಲ್ಲಿ ನಡೆಯುವ ಅನ್ಯಾಯ, ಅಸಹಿಷ್ಣುತೆ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ದಾಳಿಗಳ ವಿರುದ್ಧ ಅವರು ಧೈರ್ಯವಾಗಿ ಧ್ವನಿ ಎತ್ತುತ್ತಿದ್ದರು. ತಮ್ಮ ಅಭಿಪ್ರಾಯವನ್ನು ನಿರ್ಭೀತಿಯಾಗಿ ವ್ಯಕ್ತಪಡಿಸುವ ಗುಣವೇ ಅವರನ್ನು ಇನ್ನಷ್ಟು ಗೌರವಾನ್ವಿತರನ್ನಾಗಿಸಿತು. ಅವರ ಸಾಧನೆಗೆ ಜ್ಞಾನಪೀಠ ಪ್ರಶಸ್ತಿ, ಪದ್ಮಶ್ರೀ, ಪದ್ಮಭೂಷಣ ಸೇರಿದಂತೆ ಅನೇಕ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರಶಸ್ತಿಗಳು ಸಂದಿವೆ. ಆದರೆ ಅವರ ಅತ್ಯಂತ ದೊಡ್ಡ ಗೌರವ ಎಂದರೆ ಕನ್ನಡಿಗರ ಹೃದಯದಲ್ಲಿ ಪಡೆದಿರುವ ಶಾಶ್ವತ ಸ್ಥಾನ.

2019ರಲ್ಲಿ ಅವರು ದೈಹಿಕವಾಗಿ ನಮ್ಮನ್ನು ಅಗಲಿದರೂ, ಅವರ ಸಾಹಿತ್ಯ ಮತ್ತು ಚಿಂತನೆಗಳು ಎಂದಿಗೂ ಜೀವಂತವಾಗಿವೆ. ಅವರು ಬರೆದ ಪ್ರತಿಯೊಂದು ನಾಟಕವೂ ಇಂದಿಗೂ ಸಮಾಜವನ್ನು ಪ್ರಶ್ನಿಸುತ್ತದೆ ಮತ್ತು ಯೋಚಿಸಲು ಪ್ರೇರೇಪಿಸುತ್ತದೆ. ಕನ್ನಡದ ಮಣ್ಣಿನಲ್ಲಿ ಹುಟ್ಟಿದ ಈ ಮಹಾನ್ ಚೇತನ ವಿಶ್ವದಾದ್ಯಂತ ಕನ್ನಡದ ಕೀರ್ತಿಯನ್ನು ಹರಡಿದವರು. ಇಂದು ಕನ್ನಡ ರಂಗಭೂಮಿಯ ಬಗ್ಗೆ ಮಾತನಾಡುವಾಗ ತುಘಲಕ್' ನಾಟಕದಲ್ಲಿ ಅಧಿಕಾರ ಮತ್ತು ರಾಜಕೀಯದ ಒಳಸಂಘರ್ಷವನ್ನು ಅವರು ಅತ್ಯಂತ ಆಳವಾಗಿ ಚಿತ್ರಿಸಿದ್ದಾರೆ. ಈ ನಾಟಕ ಇಂದಿಗೂ ಸಮಕಾಲೀನ ರಾಜಕೀಯದ ಪ್ರತಿಬಿಂಬವೆಂದು ಪರಿಗಣಿಸಲಾಗುತ್ತದೆ. ಹಯವದನನಲ್ಲಿ ವ್ಯಕ್ತಿತ್ವದ ಹುಡುಕಾಟ ಮತ್ತು ಮಾನವ ಜೀವನದ ಅಪೂರ್ಣತೆಯನ್ನು ಜನಪದ ಶೈಲಿಯಲ್ಲಿ ಮನಮುಟ್ಟುವಂತೆ ಕಟ್ಟಿಕೊಟ್ಟಿದ್ದಾರೆ. ನಾಗಮಂಡಲನಲ್ಲಿ ಮಹಿಳೆಯ ಅಂತರಂಗದ ನೋವು ಮತ್ತು ಸಮಾಜದ ಕಟ್ಟಳೆಗಳ ವಿರುದ್ಧದ ಮೌನ ಹೋರಾಟವನ್ನು ಪರಿಣಾಮಕಾರಿಯಾಗಿ ಮೂಡಿಸಿದ್ದಾರೆ.

ಅವರ ನಾಟಕಗಳು ಕೇವಲ ಮನರಂಜನೆಗಾಗಿ ಬರೆಯಲ್ಪಟ್ಟವಲ್ಲ ಅವು ಸಮಾಜವನ್ನು ಪ್ರಶ್ನಿಸುವ ಕನ್ನಡಿಯಂತಿವೆ. ಅನೇಕ ಸಿನಿಮಾಗಳಲ್ಲಿ ಅಭಿನಯಿಸಿ ಪ್ರತಿಯೊಂದು ಪಾತ್ರದಲ್ಲೂ ಜೀವನದ ಕಹಿ ಸತ್ಯಗಳು ಅಡಗಿದ್ದವು. ಅದಕ್ಕಾಗಿಯೇ ಅವರ ಕೃತಿಗಳು ಕನ್ನಡದ ಗಡಿಯನ್ನು ದಾಟಿ ಇಂಗ್ಲಿಷ್ ಸೇರಿದಂತೆ ಅನೇಕ ಭಾಷೆಗಳಿಗೆ ಅನುವಾದಗೊಂಡು ಜಗತ್ತಿನ ಹಲವು ವೇದಿಕೆಗಳಲ್ಲಿ ಪ್ರದರ್ಶನ ಕಂಡವು.

ಸಾಹಿತ್ಯದ ಜೊತೆಗೆ ಅವರು ಭಾರತೀಯ ಚಿತ್ರರಂಗದಲ್ಲಿಯೂ ತಮ್ಮದೇ ಆದ ಛಾಪು ಮೂಡಿಸಿದರು. ನಟ, ನಿರ್ದೇಶಕ ಮತ್ತು ಕಥೆಗಾರರಾಗಿ ಅನೇಕ ಸಿನಿಮಾಗಳಲ್ಲಿ ಅಭಿನಯಿಸಿ ಜನಮನ ಗೆದ್ದರು. ಆದರೆ ಯಾವ ಕ್ಷೇತ್ರದಲ್ಲಿದ್ದರೂ ಅವರ ಸರಳತೆ ಮತ್ತು ಬೌದ್ಧಿಕತೆ ಎಲ್ಲರ ಗಮನ ಸೆಳೆಯುತ್ತಿತ್ತು.



ಗಿರೀಶ್ ಕಾರ್ನಾಡ್ ಅವರ ಹೆಸರನ್ನು ಬಿಟ್ಟು ಮುಂದೆ ಸಾಗಲು ಸಾಧ್ಯವಿಲ್ಲ. ಅವರು ಕೇವಲ ಸಾಹಿತಿ ಅಲ್ಲ, ಒಂದು ಚಳುವಳಿ; ಕೇವಲ ನಾಟಕಕಾರ ಅಲ್ಲ, ಒಂದು ಚಿಂತನೆಯ ದೀಪ. ಕನ್ನಡ ಸಾಹಿತ್ಯದ ಆಕಾಶದಲ್ಲಿ ಅವರು ಎಂದೆಂದಿಗೂ ಪ್ರಕಾಶಿಸುವ ಧ್ರುವತಾರೆ.

# ನಂಬಿಕೆ ನಾ ನಂಬಬೇಕೊ ಬೇಡ್ವೊ?

ಪ್ರತಿಯೊಂದು ಕ್ಷಣವು ಪ್ರತಿಯೊಂದು ವಿಚಾರದಲ್ಲಿ ನಂಬಿಕೆ ಎಂಬುದು ಮುಖ್ಯ. ಯಾವುದೇ ಸಂಬಂಧವಾದರೂ ನಂಬಿಕೆಯ ಮೇಲೆ ನಿಂತಿರುತ್ತದೆ. ಅದು ರಕ್ತಸಂಬಂಧವ ಸ್ನೇಹ ಸಂಬಂಧವೇ ಎಲ್ಲವೂ ನಂಬಿಕೆ ಮೇಲೆ ನಿಂತಿರುತ್ತದೆ.

ತಾಯಿ ಮಗುವನ್ನು ನಂಬಿಯೇ ಬೆಳೆಯಬೇಕು. ಗಂಡ ಹೆಂಡತಿಯನ್ನು ನಂಬಬೇಕು. ಅಜ್ಜ ಅಜ್ಜಿ ಅಕ್ಕ ಅಣ್ಣ ತಮ್ಮ ಈ ಎಲ್ಲಾ ಸಂಬಂಧದಲ್ಲೂ ನಂಬಿಕೆಯ ಪಾತ್ರ ಬಹಳಷ್ಟು ಮುಖ್ಯವಾಗಿದೆ. ಸಂಬಂಧಕ್ಕೆ ಮಾತ್ರವಲ್ಲದೆ ವ್ಯವಹಾರದಲ್ಲೂ ಸಹ ನಂಬಿಕೆಯಿಂದಲೇ ನಡೆಯುವುದರಿಂದ ನಂಬಿಕೆ ಎಂಬುದು ಬಹಳ ಮುಖ್ಯ. ನಂಬಿಕೆಗೆ ಮೂಲ ನಾಲಿಗೆ. ಆ ನಾಲಿಗೆಯು ಹಿಡಿತದಲ್ಲಿದ್ದರೆ ಜೀವನಪೂರ್ತಿ ಸುಖವಾಗಿ ಬಾಳಬಹುದು. ಯಾವುದೇ ಆದರೂ ನಾಲಿಗೆಯ ಮಹತ್ವವು ಪ್ರಮುಖವಾಗಿರುತ್ತದೆ. ಒಂದಾನೊಂದು ಕಾಲದಲ್ಲಿ ಸತ್ಯಕ್ಕೆ ಪ್ರಮುಖ ಪಾತ್ರ ಹಾಗೂ ಪವಿತ್ರತೆ ಇತ್ತು. ಹಣೆ, ಪ್ರಮಾಣಕ್ಕೆ ಬಹಳ ಮಹತ್ವವಿತ್ತು.

ಒಬ್ಬ ಗುರು ಶಿಷ್ಯನು ಸಹ ಗುರುಗಳು ಹೇಳಿದಂತಹ ಪಾಠಗಳನ್ನು ಶಿಷ್ಯ ನಂಬಿಕೆಯಿಂದಲೇ ಕಲಿಯುತ್ತಾನೆ. ಪ್ರತಿಯೊಂದು ಅಂಶದಲ್ಲೂ ಸಹ ನಂಬಿಕೆಯ ಪಾತ್ರ ಬಹಳಷ್ಟಿದೆ. ನಂಬಿಸಿ ಮೋಸ ಮಾಡಬೇಡ ಅಂದರೆ ಯಾವುದೇ ವ್ಯಕ್ತಿಯ ಆತ್ಮೀಯತೆಯನ್ನು ಸ್ನೇಹ ಪ್ರೀತಿ-ವಿಶ್ವಾಸಗಳನ್ನು ಸದರದಲ್ಲಿ ತೆಗೆದುಕೊಂಡು ವಾಹನನ್ನ ಮೋಸಗೊಳಿಸಬೇಡ ಎಂದು ಹೇಳುತ್ತದೆ. ಬೇಕು ಬೇಡಗಳನ್ನು ಹೇಳಿ ಪಡೆಯುತ್ತಾರೆ, ಕಳೆದುಕೊಳ್ಳುತ್ತಾರೆ. ಯಾವುದೋ ವ್ಯಕ್ತಿಯ ಜೀವನದಲ್ಲಿ ಅಪರಿಚಿತರು ಬಂದು ನಂಬಿಸಿ ಮೋಸ ಮಾಡಿರುವ ಉದಾಹರಣೆಗಳನ್ನು ಬಹಳಷ್ಟು ಇದೆ. ವಸ್ತು ಕರೆದಿಯಲ್ಲೂ ಸಹ ನಂಬಿಕೆಯ ಪಾತ್ರ ಎಷ್ಟಿದೆ ಎಂದರೆ ಇವತ್ತು ಆ ನಂಬಿ ಮೋಸ ಹೋಗುತ್ತಿರುವುದರ ಬಗ್ಗೆ ಹೇಳಲು ಬೇಸರವಾಗುತ್ತದೆ. ಜನರಲ್ಲಿ ಹೊಂದಾಣಿಕೆಯ ಭಾವ ಹೇಗೆ ಕಡಿಮೆಯಾಗುತ್ತಿದೆಯೋ, ಮೂಢನಂಬಿಕೆಗಳ ಬಗ್ಗೆ ನಂಬಿಕೆ ಹೇಗೆ ಹೆಚ್ಚಾಗುತ್ತಿದೆಯೋ, ಮಾಟ ಮಂತ್ರಗಳ ಸೆಳೆತ ಎಷ್ಟರಮಟ್ಟಿಗೆ ಹೆಚ್ಚುತ್ತಿದೆಯೋ, ಅದೇ ರೀತಿ ನಂಬಿಕೆಗೆ ಮೋಸದ ಜನ ಪ್ರತಿಯೊಂದು ವಿಚಾರದಲ್ಲೂ ಸಿಗುತ್ತಿದ್ದಾರೆ.

ಪ್ರಸ್ತುತ ದಿನಮಾನಗಳಲ್ಲಿ ಸಿಗುತ್ತಿರುವ ವಸ್ತುಗಳು ಸಹ ಎಲ್ಲಾ ಕಳಪೆಯಾಗುತ್ತಿದೆ. ವಸ್ತುಗಳಿಗೆ ಮನುಜನ ಸಂಬಂಧಗಳಲ್ಲೂ ಸಹ ಬಿರುಕುಗಳು ನಂಬಿಕೆಯ ಸಾವಿನಿಂದ ಸಂಬಂಧಗಳಲ್ಲಿ ಬಿರುಕುಗಳನ್ನು ಕಾಣುತ್ತಿದ್ದೇವೆ. ಪುಸ್ತಕಗಳಾಗಲಿ ಯಾವುದೇ ವಸ್ತುವಾಗಲಿ ಕೊಂಡು ಜೀವನ ಮಾಡುವುದೇ ಕಷ್ಟವಾಗುತ್ತಿದೆ. ಯಾವುದೇ ವಿಚಾರವಾಗಲಿ ಪ್ರತಿ ವಿಚಾರದಲ್ಲೂ ಅದರಲ್ಲೂ ನಮ್ಮನ್ನು ನಾವು ನಂಬಿ ಬದುಕುವುದೇ ಕಷ್ಟವಾಗುತ್ತಿದೆ. ಯಾವುದೇ ಆದರೂ ನಾಲಿಗೆಯ ಮಹತ್ವವು ಪ್ರಮುಖವಾಗಿರುತ್ತದೆ.

ಪ್ರಸ್ತುತ ದಿನ ಮಾನವ ಮಾನಸಿಕ ಯಾತನೆಗಳು ಯಾರನ್ನು ನಂಬಬೇಕು ಎಂಬುದನ್ನು ಜೊತೆಗೆ ನಂಬಿಕೆಯನ್ನು ನಂಬಬೇಕು ಬೇಡವೋ ಎಂಬ ಪರಿಸ್ಥಿತಿಯನ್ನು ತಂದುಡುತ್ತಿರುವುದು ಮನುಜ ಕುಲದಲ್ಲಿ ಖಿನ್ನತೆಗಳನ್ನ ಕಾಣುವಂತೆ ಮಾಡುತ್ತಿದೆ. ಕಲಿಯುಗವಾಗಿರುವ ಈ ಜಗದಲ್ಲಿ ದಿನನಿತ್ಯವೂ ನಂಬಿಕೆ ಇಲ್ಲದೆ ಬದುಕಲು ಸಾಧ್ಯವಿಲ್ಲ.

ವಿಪರ್ಯಾಸವು ವಿಧಿಯಾಟವು ಯಾವುದನ್ನು ಹೇಳಲು ಸಾಧ್ಯವಿಲ್ಲ ನಂಬಿಕೆಯನ್ನು ಮೋಸ ಮಾಡುತ್ತಾರೆಂದು ತಿಳಿದರು ನಂಬಿಕೆ ನಡೆಯಬೇಕಾದ ಪರಿಸ್ಥಿತಿಗಳು ಕಣ್ಣ ಮುಂದೆ ಬರುತ್ತಿವೆ.



**ಸಾಮಾಜಿಕ ಕಳಕಳಿ**

ಹೆಚ್.ಎಸ್. ಪ್ರತಿಮಾ ಹಾಸನ
ಲೇಖಕರು
ಸಾಮಾಜಿಕ ಚಿಂತಕಿ ಹಾಗೂ ಶಿಕ್ಷಕಿ, ಹಾಸನ

## ಸಂಬಂಧಗಳು ನಂಬಿಕೆಯ ಮೇಲೆ ನಿಂತಿರುತ್ತದೆ

**ನಾಲಿಗೆ ಎಂಬುದು ಮನುಷ್ಯ ದೇಹದ ಒಂದು ಭಾಗವಾಗಿ ಕಾರ್ಯನಿರ್ವಹಿಸುತ್ತಿದ್ದರೆ ಆ ನಾಲಿಗೆಯಿಂದ ಎಷ್ಟು ಒಳ್ಳೆಯದನ್ನು ನಾವು ನೋಡಬಹುದು, ಅದೇ ರೀತಿ ಎಷ್ಟೋ ಅನಾಹುತಗಳಾಗಿರುವುದನ್ನು ಕಾಣುತ್ತಿದ್ದೇವೆ. ಈ ನಂಬಿಕೆ ಎಂಬ ಪದವು ನಾಲಿಗೆಗೆ ಹತ್ತಿರವಾಗಿದೆ. ನಂಬಿಕೆ ಇಟ್ಟು ಮಗು ತಾಯಿಯೊಂದಿಗೆ ಬೆರೆಯುತ್ತದೆ. ಅದೇ ಆ ನಂಬಿಕೆ ಇಲ್ಲದಿದ್ದರೆ ಹೇಗೆ ಮಗು ತಾಯಿಯೊಂದಿಗೆ ಹೊಂದಿಕೊಂಡು ಹೋಗುತ್ತದೆ. ಯಾವುದೇ ಸಂಬಂಧಗಳು ಸಹ ನಂಬಿಕೆಯ ಮೇಲೆ ನಿಂತಿರುತ್ತದೆ. ಯುವಕರಲ್ಲಿ ಪ್ರೀತಿ ಆಗುವುದು ಒಂದು ನಂಬಿಕೆಯಿಂದಲೇ.ಕದ್ದು ಮುಚ್ಚಿ ಹೋಗಿ ಮದುವೆಯಾಗಿ ಮುಂದಿನ ಭವಿಷ್ಯವನ್ನು ನಾವು ಚೆನ್ನಾಗಿ ಕಾಣುತ್ತೇವೆ ಎಂಬ ನಂಬಿಕೆಯಲ್ಲಿ ಮದುವೆಯಾಗುತ್ತಾರೆ.**



# ರಾಮಾಯಣ

**ತನ್ನ ಉದ್ದೇಶದಲ್ಲಿ ವಿಫಲನಾದ ರಾವಣನು ರಕ್ಕಸಿಯರಿಗೆ ಸೂಚನೆಯಿತ್ತು**

• ಹಿಂದಿನ ಸಂಚಿಕೆಯಿಂದ 121ನೆಯ ಅಧ್ಯಾಯ

ಪಕ್ಕದಲ್ಲಿ ಬಾಲಶಶಿಯಂತೆ ಸೀತೆ ಶೋಭಿಸುತ್ತಿದ್ದಳು, ಲಕ್ಷ್ಮಣನು ಬೆಳ್ಗೊಡೆಯನ್ನು ಹಿಡಿದಿರಲು, ಬಿಡುಗಣ್ಣವರು ಹೂವುಳೆಗಳನ್ನು ಸುರಿಸುತ್ತಿದ್ದರು, ಶುಭವಾದ್ಯಗಳು ಮೊರೆಯುತ್ತಿದ್ದುವು. ಶಶಿರವಿಗಳೂ ಋಷಿನಿವಹವೂ ಸ್ವಸ್ತಿವಾಚನ ಮಾಡುತ್ತ ಆಕಾಶದಲ್ಲಿ ಸಾಗುವುದನ್ನು ಈ ರಾತ್ರಿ ಕನಸಿನಲ್ಲಿ ಕಂಡೆ.'' ಅದನ್ನು ಕೇಳಿದ ದುಷ್ಟರಕ್ಕಸಿಯರು ಬೆದರಿದರು. ಮುಂದೆ ತ್ರಿಜಟೆಯು, ''ಬಿಳಿಕುದುರೆಯನ್ನು ಕಟ್ಟಿದ್ದ ರಥದಲ್ಲಿ ಎರಡೂ ಕಡೆಗಳಲ್ಲಿ ಬೀಸುವ ಗಂಗೆಯಂತೆ ಬೆಳ್ಳಗಿನ ಚಾಮರಗಳ ನಡುವೆ ಶೋಭಿಸುತ್ತ ಸೀತೆಲಕ್ಷ್ಮಣರೊಡನೆ ಬೆಳ್ಗೊಡೆಯ ನೆಳಲಿನಲ್ಲಿ ಬರುವ ಶ್ರೀರಾಮನ ತೇಜಸ್ಸು ಮೂಲೋಕಗಳನ್ನೂ ಬೆಳಗುವುದನ್ನು ಕಂಡೆ. ಕ್ಷೀರಸಾರದ ಮಧ್ಯದಲ್ಲಿ ಶ್ವೇತಪರ್ವತದ ತುದಿಯಲ್ಲಿ ನಾಲ್ಕು ದಂತಗಳ ಆನೆಯು ಐರಾವತದಂತೆ ಕಂಗೊಳಿಸಲು ಶ್ರೀರಾಮನು ಸೀತಾಸಮೇತನಾಗಿ ವೀರಾಸನದಲ್ಲಿ ಕುಳಿತಿರಲು, ನೆರೆದಿರುವ ದೇವತೆಗಳೂ ಸಿದ್ಧರೂ ಬಂದು ಸ್ತುತಿಸುತ್ತ ಬಿಳಿಮಲ್ಲಿಗೆಗಳ ಮಾಲೆಯಿಂದ ಅಲಂಕರಿಸುವುದನ್ನು ಕಂಡೆ. ಆನಂತರ ಅವರೆಲ್ಲ ಸೇರಿ ಬ್ರಹ್ಮನ ನೇತೃತ್ವದಲ್ಲಿ ರಾಘವನಿಗೆ ಪಟ್ಟಾಭಿಷೇಕ ಮಾಡಿ, ಕೈಗಳನ್ನು ಮುಗಿದುಕೊಂಡು, ಎಷ್ಟು, ತ್ರಿಲೋಕನಾಥ, ಪರಬೊಮ್ಮ ಪರತತ್ವ, ಪರಕ್ಕೆ ಪರ, ಶಂಖಧರ, ಶ್ರೀವತ್ಸಾಂಕ, ಕರುಣೆಯಿಂದ ಧರೆಯನ್ನು ಕಾಪಾಡು' ಎಂದು ಸ್ತುತಿಸಲು, ಬ್ರಹ್ಮನಿಗೆ ಅಭಯವನ್ನೀಯುವ ರಾಮಚಂದ್ರನನ್ನು ಕಂಡೆ. ಅಷ್ಟರಲ್ಲಿ ಸುರಸಿದ್ದರು ದಿಕ್ಪಾಲಕರು ಬಂದು ರಾಮಚರಣಗಳ ಸೇವೆ ಮಾಡಿ ನೃತ್ಯಗೀತಾದಿಗಳಿಂದ ಪ್ರಾರ್ಥಿಸಲು, ಅವರ ನುಡಿಗಳನ್ನು ಕೇಳಿ ಸಂತೋಷದಿಂದ ಅವರ ಅಭೀಷ್ಟಗಳನ್ನು ನೆರವೇರಿಸುವುದನ್ನೂ, ಸನಕಾದಿ ಮುನಿಗಳು ಸೀತೆಯನ್ನು ಸಂಸ್ತುತಿಸುವುದನ್ನೂ ಕಂಡು ಶ್ರೀರಾಮನು ಪರಬ್ರಹ್ಮನೆಂದು ತಿಳಿದೆ. ಆನಂತರ ರಘುವೀರನು ಹೊಳೆಯುವ ಪುಷ್ಪಕವನ್ನೇರಿ ಸೀತೆಯೊಡನೆ ಸಲ್ಲಾಪಿಸುತ್ತ ತನ್ನ ಕಳೆಯಿಂದ ಲೋಕವನ್ನು ಬೆಳಗುತ್ತ ಉತ್ತರಮುಖವಾಗಿ ಹೋಗುವುದನ್ನು ನೋಡಿದೆ.

ಅಂತಹ ರಾಮನ ಎದುರಿಗೆ ಯುದ್ಧರಂಗದಲ್ಲಿ ನಿಲ್ಲುವವರಾರುಂಟು ಕೋಟಿ ಸೂರ್ಯ ತೇಜಸ್ಸಿನಿಂದ ಪ್ರಜ್ವಲಿಸುವ ಆತನು ಬ್ರಹ್ಮದೇವನ ತಂದೆಯೆಂಬುದನ್ನು ಅರಿತೆ. ಎಣ್ಣೆಯ ಸಮುದ್ರದಲ್ಲಿ ಮುಳುಗಿ ಅದನ್ನೇ ಕುಡಿಯುತ್ತ. ಕೆಂಪು ಬಟ್ಟೆಗಳನ್ನುಟ್ಟು, ಕಣಿಗಿಲೆ ಹೂಗಳನ್ನು ಮುಡಿದು, ಪುಷ್ಪಕಚ್ಯುತನಾಗಿ ಭೂಮಿಯಲ್ಲಿ ಹೊರಳಾಡುತ್ತ ಶೋಕಸಂತಪ್ತನಾದ ದಶಕಂಠನನ್ನೂ, ಕಬ್ಬಿಣದ ಆಭರಣಗಳನ್ನು ತೊಟ್ಟು ಕಪ್ಪು ಬಟ್ಟೆಯನ್ನು ಧರಿಸಿ, ಹೆಂಗೆಳೆಯರು ಎಳೆದಾಡಲು ಅವನು ಬನ್ನಪಡುವುದನ್ನೂ ಕನಸಿನಲ್ಲಿ ಕಂಡೆ. ಹೇಸರಗತ್ತೆಗಳನ್ನು ಹೂಡಿದ ರಥದಲ್ಲಿ, ರಕ್ತಚಂದನದಂತಹ ತೈಲವನ್ನು ಕುಡಿಯುತ್ತ ಕುಣಿದು ಕೂಗುತ್ತ ಕತ್ತೆಯ ಮೇಲೆ ಕುಳಿತು ದಕ್ಷಿಣದಿಕ್ಕಿಗೆ ಹೋಗುವಾಗ ಪದೇ ಪದೇ ಕೆಳಗೆ ಬಿದ್ದು ಭಯವಿಹ್ವಲನಾದ ರಾವಣನು ನರಕದಂತಹ ಕೆಸರಿನಲ್ಲಿ ಬಿದ್ದು ಮುಳುಗಿದುದನ್ನು ಕಂಡೆ.

ಕೆಂಪು ಬಟ್ಟೆಯನ್ನುಟ್ಟು, ರಕ್ತಚಂದನದ ಲೇಪನ ಮಾಡಿಕೊಂಡು, ಕ್ರೂರವಾದ ಮಾತುಗಳಿಂದ ಹೀಯಾಳಿಸುತ್ತ ಹಗ್ಗದಿಂದ ಕಟ್ಟಿ ಎಳೆದೊಯ್ಯುತ್ತ ಹಿಂಸಿಸುವ ಕೆಸರು ಬಳಿದುಕೊಂಡ ಕಾಳಿ ಕಂಕಾಳಿಯರಂತಹ ಹೆಂಗಸರನ್ನು ಕಂಡು ಹೆದರಿಕೆಯಿಂದ ಶೋಕಿಸುವ ದೈತ್ಯರಾಜನನ್ನು ಕನಸಿನಲ್ಲಿ ಕಂಡೆ. ದಶಶಿರನ ಮಕ್ಕಳು ತಮ್ಮಂದಿರು ಮಿತ್ರರು ಬಂಧುಗಳು ಮುಂತಾದ ಕಲಿಗಳು ಬಂದು ಎಣ್ಣೆಯ ಬಾವಿಯಲ್ಲಿನ ನೀರಿನಿಂದ ಸ್ನಾನಾಹ್ನಿಕಗಳನ್ನು ಮುಗಿಸಿ ದಕ್ಷಿಣದಿಕ್ಕನ್ನು ನೋಡಿ ರಾಕ್ಷಸೇಶನು ಒಂಟೆಯನ್ನೂ, ಕುಂಭಕರ್ಣನು ಕತ್ತೆಯನ್ನೂ, ಇಂದ್ರಜಿತುವು ಮೊಸಳೆಯನ್ನೂ ಹತ್ತಿ ಭೂಮಿಯನ್ನು ಬಿಟ್ಟು ಹೋಗುತ್ತಿರುವುದನ್ನು ಕನಸಿನಲ್ಲಿ ಕಂಡು ನಾನು ಬೆರಗಾದೆ.

ಮುಂದುವರೆಯುವುದು

# ಮಲ್ಲರ ಮೈಕಟ್ಟು ಮತ್ತು ಮನೋಬಲಕ್ಕೆ ಸೋಂಪಿನ ಸಾರ



**ಅಂತರಂಗದ ಮಾತು**

ಡಾ.ಸುಧಾಕರ.ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

ಭಾರತೀಯ ಕುಸ್ತಿ ಪರಂಪರೆಯಲ್ಲಿ ಪೈಲ್ವಾನರ ದೃಢಕಾಯದ ಹಿಂದೆ ಕೇವಲ ಕಠಿಣ ಪರಿಶ್ರಮವಷ್ಟೇ ಇಲ್ಲ ಪ್ರಕೃತಿ ನೀಡಿದ ಔಷಧೀಯ ಸಸ್ಯಗಳ ಕೌಶಲವೂ ಅಡಗಿದೆ. ಅಂತಹವುಗಳಲ್ಲಿ ಪ್ರಮುಖವಾದುದು ಬಡೆ ಸೋಂಪು. ಆಧುನಿಕ ಕ್ರೀಡಾ ವಿಜ್ಞಾನವು ಕೃತಕ ಪ್ರೊಟೀನ್‌ಗಳ ಹಿಂದೆ ಬಿದ್ದಿದ್ದರೆ, ಗರಡಿ ಮನೆಯ ಸಂಸ್ಕೃತಿ ಇಂದಿಗೂ ನೈಸರ್ಗಿಕ ಸಮತೋಲನವನ್ನೇ ನಂಬಿದೆ.

ಕಠಿಣ ತಾಲೀಮಿನಿಂದ ದೇಹದಲ್ಲಿ ಸಂಗ್ರಹವಾಗುವ ಲ್ಯಾಕ್ಟಿಕ್ ಆಸಿಡ್‌ನಂತಹ ವಿಷಕಾರಿ ಅಂಶಗಳನ್ನು ಹೊರಹಾಕಲು ಸೋಂಪು ಶಕ್ತಿಶಾಲಿ 'ಮೂತ್ರವರ್ಧಕ'ವಾಗಿ ಕಾರ್ಯನಿರ್ವಹಿಸುತ್ತದೆ. ಕಿಡ್ನಿಗಳ ಕಾರ್ಯಕ್ಷಮತೆ ಹೆಚ್ಚಿಸಿ ರಕ್ತ ಶುದ್ಧಗೊಂಡಾಗ, ಸ್ನಾಯುಗಳಿಗೆ ಪೋಷಕಾಂಶಗಳ ಪೂರೈಕೆ ಸುಲಭವಾಗಿ ದೇಹಕ್ಕೆ ನವಚೈತನ್ಯ ಮತ್ತು ಪುಟಿತ ಲಭಿಸುತ್ತದೆ.


ಪೈಲ್ವಾನರು ಸೇವಿಸುವ ಬಾದಾಮಿ ಹಾಲು, ತುಪ್ಪದಂತಹ ಪೌಷ್ಟಿಕ ಹಾಗೂ ಭಾರೀ ಆಹಾರವನ್ನು ಜೀರ್ಣಿಸಿಕೊಳ್ಳಲು ಸೋಂಪು ಅತ್ಯಗತ್ಯ. ಜೀರ್ಣಕ್ರಿಯೆ ಸಮರ್ಪಕವಾದಾಗ ಮಾತ್ರ ಆಹಾರದ ಸಾರವು ರಸ, ರಕ್ತ, ಮಾಂಸ, ಮೇದಸ್ಸು, ಅಸ್ಥಿ, ಮಜ್ಜೆ ಮತ್ತು ಶುಕ್ರ ಎಂಬ ಸಪ್ತಧಾತುಗಳಾಗಿ ಪರಿವರ್ತನೆಯಾಗಿ ದೇಹಕ್ಕೆ ವಜ್ರಸಮಾನ ಸ್ನಾಯುಗಳನ್ನು ನೀಡುತ್ತದೆ.

ಆಯುರ್ವೇದವು ಸೋಪನ್ನು ಚಕ್ಷುಷ್ಯ (ದೃಷ್ಟಿಗೆ ಹಿತಕಾರಿ) ಎಂದು ಕರೆದಿದೆ. ಇದರಲ್ಲಿನ ವಿಟಮಿನ್-ಎ ಹದ್ದಿನಂತಹ ತೀಕ್ಷ್ಣ ದೃಷ್ಟಿಗೆ ಪೂರಕ. ತಾಲೀಮಿನಿಂದ ಉಂಟಾಗುವ ದೇಹದ ಅತಿಯಾದ ಉಷ್ಣತೆಯನ್ನು ತಗ್ಗಿಸಿ, ಒಳಗಿನಿಂದ ತಂಪಾಗಿಸುವ ಗುಣ ಇದಕ್ಕಿದೆ. ಇದು ಸುಖಕರ ನಿದ್ರೆ ಮತ್ತು ಸ್ನಾಯುಗಳ ವೇಗದ ಪುನಶ್ಚೇತನಕ್ಕೆ ಪೂರಕವಾಗಿದೆ.ನಮ್ಮ ನೆಲದ ಕ್ರೀಡೆಗಳಿಗೆ ಮಣ್ಣಿನ ಔಷಧಿಯೇ ಪರಮೌಷಧ. ತಾಲೀಮಿನ ನಂತರ ಸೋಂಪು ಮತ್ತು ಕಲ್ಲುಸಕ್ಕರೆ ಬೆರೆಸಿದ ನೀರು ಮಲ್ಲರ ಪಾಲಿಗೆ ನೈಸರ್ಗಿಕ ಎನರ್ಜಿ ಡ್ರಿಂಕ್. ರಾಸಾಯನಿಕಗಳ ಮೊರೆ ಹೋಗುತ್ತಿರುವ ಈ ಕಾಲದಲ್ಲಿ, ಗರಡಿ ಮನೆಯ ಈ ಹಸಿರು ರಹಸ್ಯವು ದೈಹಿಕ ಬಲವನ್ನಷ್ಟೇ ಅಲ್ಲದೆ, ಅಖಾಡಕ್ಕೆ ಬೇಕಾದ ಧೈರ್ಯ ಮತ್ತು ಸ್ಥಿತಪ್ರಜ್ಞೆಯನ್ನೂ ನೀಡುವ ದಿವ್ಯೌಷಧವಾಗಿದೆ.

## ತೀವ್ರ ಒತ್ತಡದ ನಡುವೆಯೂ ತರ್ಕಬದ್ಧ ನಿರ್ಧಾರ

**ಕುಸ್ತಿ ಎನ್ನುವುದು ಉಸಿರಾಟದ ಮೇಲಿನ ಅಪ್ರತಿಮ ಹಿಡಿತ. ಸೋಂಪಿನಲ್ಲಿರುವ ಅನೆಥೋಲ್ ಎಂಬ ಘಟಕವು ಶ್ವಾಸನಾಳದ ಸ್ನಾಯುಗಳನ್ನು ಸಡಿಲಗೊಳಿಸಿ, ರಕ್ತಕ್ಕೆ ಗರಿಷ್ಠ ಆಮ್ಲಜನಕ ಪೂರೈಕೆಯಾಗುವಂತೆ ನೋಡಿಕೊಳ್ಳುತ್ತದೆ. ಇದರಿಂದ ಮಲ್ಲರು ದೀರ್ಘಾವಧಿಯ ಪಂದ್ಯಗಳಲ್ಲಿಯೂ ಹೈರಾಣಾಗದೆ ಸ್ಥಿರವಾದ ಉಸಿರಾಟದ ಲಯ ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆ.**

**ಅಲ್ಲದೆ, ಇದರಲ್ಲಿರುವ ಮ್ಯಾಂಗನೀಸ್ ಮತ್ತು ಪೊಟ್ಯಾಸಿಯಮ್ ಅಂಶಗಳು ನರಮಂಡಲವನ್ನು ಶಾಂತಗೊಳಿಸಿ, ತೀವ್ರ ಒತ್ತಡದ ನಡುವೆಯೂ ತರ್ಕಬದ್ಧ**



# ಘಮಘಮಿಸುವ ಜೀರಾ ರಸಂ ಫಟಾಫಟ್ ರೆಡಿ

ಸಾಮಾನ್ಯವಾಗಿ ಊಟದಲ್ಲಿ ಸಾಂಬಾರ್ ಇಲ್ಲವೆ ರಸಮ್‌ನಂತಹ ಭಕ್ಷ್ಯಗಳು ಸೇರಿದಾಗ ಕೆಲವು ಜನರಿಗೆ ಹೊಟ್ಟೆ ತುಂಬಾ ಊಟ ಮಾಡಿದ ಅನುಭವವಾಗುತ್ತದೆ. ಇದಕ್ಕಾಗಿಯೇ ಮನೆಯಲ್ಲಿ ಸಿದ್ಧಪಡಿಸಬಹುದು ವಿವಿಧ ಅಪರೂಪದ ರೆಸಿಪಿಗಳನ್ನು ಪರಿಚಯಿಸುತ್ತಿದ್ದೇವೆ. ಈ ಬಾರಿ ಸಾಮಾನ್ಯವಾಗಿ ಎಲ್ಲರಿಗಳು ಇಷ್ಟವಾಗುವಂತಹ ರೆಸಿಪಿಯನ್ನು ನಿಮಗಾಗಿ ತಂದಿದ್ದೇವೆ. ಅದುವೇ, ಸಖತ್ ಟೇಸ್ಟಿಯಾದ ಜೀರಾ ರಸಂ.

ನಿಮಗೆ ಈ ಜೀರಾ ರಸಂ ರೆಸಿಪಿ ನಂಬಲು ಅಸ್ಯಾಧ್ಯವಾದಂತಹ ಹೊಸ ರುಚಿಯನ್ನು ನೀಡುತ್ತದೆ. ಈ ಸರಳ ವಿಧಾನದ ಮೂಲಕ ಯಾರಾದರೂ ಈ ಸಖತ್ ರುಚಿಕರವಾದ ರಸಂ ಅನ್ನು ಕೆಲವೇ ನಿಮಿಷಗಳಲ್ಲಿ ತಯಾರಿಸಬಹುದು. ಬಾಯಲ್ಲಿ ನೀರೂರಿಸುವ ಜೀರಾ ರಸಂ ತಯಾರಿಸುವುದು ಹೇಗೆ ಎಂಬುದನ್ನು ಅರಿತುಕೊಳ್ಳೋಣ. ಜೀರಿಗೆ (ಜೀರಾ)- 1 ಟೀಸ್ಪೂನ್ , ಮಸೂರ್ ಬೇಳೆ- 1 ಟೀಸ್ಪೂನ್ , ಟೊಮೆಟೊ- 1 ಹುಣಸೆಹಣ್ಣು- 30 ಗ್ರಾಂ ಒಣ ಕೆಂಪು ಮೆಣಸಿನಕಾಯಿ- 3 ಉಪ್ಪು- ರುಚಿಗೆ ತಕ್ಕಷ್ಟು, ಎಣ್ಣೆ- 3 ಟೀಸ್ಪೂನ್ ಸಾಸಿವೆ, ಜೀರಿಗೆ, ಇತ್ಯಾದಿ ಒಗ್ಗರಣೆಗಾಗಿ ಬೇಕಾಗುವ ಪದಾರ್ಥಗಳು- 1 ಟೀಸ್ಪೂನ್ ಬೆಳ್ಳುಳ್ಳಿ ಲವಂಗ- 4 ಕಾಳು ಮೆಣಸು- 1 ಟೀಸ್ಪೂನ್ , ಕರಿಬೇವು- ಒಂದು ಸಣ್ಣ ಚಿಗುರು ಇಂಗು - ಒಂದು ಚಿಟಿಕೆ ಕೊತ್ತಂಬರಿ ಸೊಪ್ಪು- ಸ್ವಲ್ಪ ಪ್ರಮಾಣ ತುಂಬಾ ರುಚಿಕರವಾದ ಜೀರಾ ರಸಂ ತಯಾರಿಸಲು ಮೊದಲಿಗೆ, ಒಂದು ಬಟ್ಟಲನ್ನು ತೆಗೆದುಕೊಂಡು ಸಾಕಷ್ಟು ನೀರು ಹಾಕಿ, 30 ಗ್ರಾಂ ಹುಣಸೆ ಹಣ್ಣು ಸೇರಿಸಿ ಹದಿನೈದು ನಿಮಿಷಗಳ ಕಾಲ ನೆನೆಯಲು ಬಿಡಿ. ಹೆಚ್ಚುವರಿಯಾಗಿ ಒಂದು ಟೊಮೆಟೊವನ್ನು ಕತ್ತರಿಸಿ ಪಕ್ಕಕ್ಕೆ ಇಟ್ಟುಕೊಳ್ಳಿ.

ಮಸಾಲೆ ಪುಡಿಯನ್ನು ತಯಾರಿಸಲು ಒಲೆಯನ್ನು ಆನ್ ಮಾಡಿ ಮತ್ತು ಒಂದು ಚಮಚ ಮಸೂರ್ ದಾಲ್ ಮತ್ತು ಒಂದು ಚಮಚ ಕಾಳುಮೆಣಸನ್ನು ಬಾಣಲೆಗೆ ಸೇರಿಸಿ. ಒಂದು ಟೀಸ್ಪೂನ್ ಜೀರಿಗೆ ಹಾಗೂ ಕೆಲವು ಒಣಗಿದ ಕೆಂಪು ಮೆಣಸಿನಕಾಯಿ ತುಂಡುಗಳನ್ನು ಸೇರಿಸಿ. ಇವುಗಳನ್ನು ಪರಿಮಳ ಬರುವವರೆಗೆ ಲಘುವಾಗಿ ಹುರಿಯಬೇಕಾಗುತ್ತದೆ. ಬಳಿಕ ಒಲೆ ಆಫ್ ಮಾಡಬೇಕಾಗುತ್ತದೆ, ತಣ್ಣಗಾದ ನಂತರ ಪದಾರ್ಥಗಳನ್ನು ಬ್ಲೆಂಡರ್ ಜಾರ್‌ಗೆ ವರ್ಗಾಯಿಸಿ, ನುಣ್ಣಗೆ ರುಬ್ಬಿಕೊಳ್ಳಬೇಕಾತ್ತದೆ.

ಅದೇ ಪ್ಯಾನ್‌ನಲ್ಲಿ ಮೂರು ಟೀಸ್ಪೂನ್ ಎಣ್ಣೆಯನ್ನು ಸೇರಿಸಿ. ಎಣ್ಣೆ ಬಿಸಿಯಾದ ನಂತರ ಒಂದು ಟೀಸ್ಪೂನ್ ಸಾಸಿವೆ, ಉದ್ದಿನ ಬೇಳೆ ಸೇರಿದಂತೆ ಒಗ್ಗರಣೆ ಪದಾರ್ಥಗಳು ಹಾಗೂ ನಾಲ್ಕು ಎಸಳು ಬೆಳ್ಳುಳ್ಳಿಯನ್ನು ಸೇರಿಸಿ. ಬಳಿಕ, ಕೆಲವು ಕರಿಬೇವು ಎಲೆಗಳು ಹಾಗೂ ಒಂದು ಚಿಟಿಕೆ ಇಂಗು ಸೇರಿಸಿ ಮತ್ತು ಸ್ವಲ್ಪ ಹೊತ್ತು ಬೇಯಿಸಿ.

ಈ ಮಿಶ್ರಣವು ಹುರಿದ ಬಳಿಕ ನೆನೆಸಿದ ಹುಣಸೆಹಣ್ಣಿನ ತಿರುಳು, ಕತ್ತರಿಸಿದ ಟೊಮೆಟೊ, ರುಚಿಗೆ ತಕ್ಕಷ್ಟು ಉಪ್ಪು, ಸ್ವಲ್ಪ ನೀರು ಸೇರಿಸಿ. ಈ ಮಿಶ್ರಣವನ್ನು ಬೇಯಿಸಿದ ನಂತರ, ರುಬ್ಬಿದ ಮಸಾಲೆ ಪುಡಿಯನ್ನು ಸೇರಿಸಿ ಹಾಗೂ ಮತ್ತೆ ಸ್ವಲ್ಪ ಹೊತ್ತು ಕುದಿಯಲು ಬಿಡಬೇಕಾಗುತ್ತದೆ. ಈ ಸಂಪೂರ್ಣ ಮಿಶ್ರಣವು ಚೆನ್ನಾಗಿ ಕುದಿಯಲು ಆರಂಭವಾದ ನಂತರ ಕೊನೆಯಲ್ಲಿ ತಾಜಾ ಕೊತ್ತಂಬರಿ ಸೊಪ್ಪಿನಿಂದ ಅಲಂಕರಿಸಿ. ಬಳಿಕ ಒಲೆ ಆಫ್ ಮಾಡಿ. ಘಮಘಮಿಸುವ ಸಖತ್ ರುಚಿಕರವಾದ ಜೀರಾ ರಸಂ ಸವಿಯಲು ಸಿದ್ಧವಾಗಿದೆ.



# ಬಿಸಿಗಾಳಿ ಅಬ್ಬರ ಸಾವಿನ ಪ್ರಕರಣಗಳು ಏರಿಕೆ

ದೇಶದ ವಿವಿಧ ರಾಜ್ಯಗಳು ತೀವ್ರವಾದ ಬಿಸಿಲು ಮತ್ತು ಬಿಸಿಗಾಳಿಯಿಂದ ತತ್ತರಿಸಿವೆ ಹೋಗಿವೆ. ನಿರಂತರವಾಗಿ ಏರುತ್ತಿರುವ ತಾಪಮಾನವು ಆರೋಗ್ಯದ ಅಪಾಯಗಳನ್ನು ಒಡ್ಡುತ್ತಿದೆ. ಭಾರತೀಯ ಹವಾಮಾನ ಇಲಾಖೆ (ಐಎಂಡಿ) ತೆಲಂಗಾಣ ರಾಜ್ಯದ ಹಲವು ಜಿಲ್ಲೆಗಳಿಗೆ ರೆಡ್ ಅಲರ್ಟ್ ಘೋಷಣೆ ಮಾಡಿದೆ. ತೆಲಂಗಾಣದಲ್ಲಿ ಮೇ 21ರಂದು ಒಂದೇ ದಿನ ಅಧಿಕ ಬಿಸಿಲಿನಿಂದ 22 ಜನ ಸಾವನ್ನಪ್ಪಿದ್ದರು.

20 ಜಿಲ್ಲೆಗಳಲ್ಲಿ 46 ಡಿಗ್ರಿಗಿಂತ ಅಧಿಕ ಉಷ್ಣಾಂಶ ದಾಖಲಾಗಿತ್ತು. ಮೂರು ಜಿಲ್ಲೆಗಳಲ್ಲಿ 45 ಡಿಗ್ರಿಗಿಂತ ಅಧಿಕ ತಾಪಮಾನ ವರದಿಯಾಗಿತ್ತು. ಪೆದ್ದಪಲ್ಲಿ ಜಿಲ್ಲೆಯ ಮುತ್ತರಂ ಮತ್ತು ಸೂರ್ಯಪೇಟೆ ಜಿಲ್ಲೆಯ ಮುನಗಲದಲ್ಲಿ ಅತಿ ಹೆಚ್ಚು 46.5 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿತ್ತು. ಯಾದಾದ್ರಿ ಭುವನಗಿರಿ, ಮಂಚೇರಿಯಲ್, ಜೋಗುಲಾಂಬ ಗದ್ವಾಲ್, ಮೇದಕ್, ರಾಮಗುಂಡಂ, ಕರೀಂನಗರ, ಜಗ್ತಿಯಾಲ್ ಹಾಗೂ ಖಮ್ಮಂ ಜಿಲ್ಲೆಗಳಲ್ಲಿ ಹೆಚ್ಚಿನ ಬಿಸಿಲಿನಿಂದ ಸಾವಿನ ಪ್ರಕರಣಗಳು ವರದಿಯಾಗಿವೆ. ಅವಿಭಜಿತ ಖಮ್ಮಂ, ಕರೀಂನಗರ, ಆದಿಲಾಬಾದ್, ವಾರಂಗಲ್ ಹಾಗೂ ನಿಜಾಮಾಬಾದ್ ಜಿಲ್ಲೆಗಳು ಕಳೆದ ಕೆಲವು ದಿನಗಳಿಂದಲೂ ಸೂರ್ಯನ ಶಾಖದ ಪ್ರಖರತೆಗೆ ನಲುಗಿ ಹೋಗಿವೆ.

ಪೆದ್ದಪಲ್ಲಿ, ಖಮ್ಮಂ, ಜಯಶಂಕರ್ ಭೂಪಾಲಪಲ್ಲಿ, ನಲ್ಗೊಂಡ, ಮಹಬೂಬಾಬಾದ್, ಸೂರ್ಯಪೇಟ್, ವಾರಂಗಲ್ ಹಾಗೂ ಹನುಮಕೊಂಡ ಜಿಲ್ಲೆಗಳಲ್ಲಿ ಬಿಸಿಗಾಳಿಯ ತೀವ್ರತೆ ಮುಂದುವರಿದಿದೆ. ಇನ್ನೂ ಕೆಲವು ದಿನಗಳವರೆಗೆ ರಾಜ್ಯದ ಹಲವು ಪ್ರದೇಶಗಳಲ್ಲಿ ಹೀಟ್‌ವೇವ್ ಪ್ರಭಾವ ಹೆಚ್ಚಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ. ದೆಹಲಿಯಲ್ಲಿ ಮುಂದುವರಿದ ಬಿಸಿಲಿನ ತಾಪಮಾನ: ದೆಹಲಿಯಲ್ಲಿ ಇದುವರೆಗೆ ಎರಡು ಶಾಖದ ಹೊಡೆತದ ಪ್ರಕರಣಗಳು ವರದಿಯಾಗಿವೆ. ಇಬ್ಬರು ವ್ಯಕ್ತಿಗಳು ಪ್ರತ್ಯೇಕ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ದೆಹಲಿ, ಗಾಜಿಯಾಬಾದ್, ನೋಯ್ಡಾ ಮತ್ತು ಗುರುಗ್ರಾಮ್‌ಗಳಿಗೆ ಆರೆಂಜ್ ಅಲರ್ಟ್ ನೀಡಿದೆ. ದೆಹಲಿಯಲ್ಲಿ ತಾಪಮಾನವು 45 ಡಿಗ್ರಿ ಸೆಲ್ಸಿಯಸ್ ಗಡಿ ದಾಟಿದೆ. ಮೇ 26ರವರೆಗೆ ರಾಷ್ಟ್ರ ರಾಜಧಾನಿಯಲ್ಲಿ ಬಿಸಿಗಾಳಿಯ ಪರಿಸ್ಥಿತಿ ಮುಂದುವರಿಯುತ್ತದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

## ಜಿಲ್ಲೆಯಲ್ಲಿ ರಸಗೊಬ್ಬರ ಕೊರತೆ

• ಉದಯವಾಹಿನಿ, ಹುಬ್ಬಳ್ಳಿ:

ಬೇಸಿಗೆ ಮಳೆ ಆರ್ಭಟಿಸಿದ ಬೆನ್ನಲ್ಲೇ ರಾಜ್ಯದಲ್ಲಿ ಮುಂಗಾರು ಕೃಷಿ ಚಟುವಟಿಕೆ ಚುರುಕುಗೊಂಡಿದ್ದು ಅನ್ನದಾತರು ಹೊಲ-ಗದ್ದೆ ಅಣಿಸಗೊಳಿಸುವುದರಲ್ಲಿ ನಿರತರಾಗಿದ್ದಾರೆ. ಆದರೆ, ಮಧ್ಯ ಪ್ರಾಚ್ಯದ ಯುದ್ಧದ ಕಾರ್ಮೋಡದಿಂದ ರಸಗೊಬ್ಬರದ ಕೊರತೆ ಎದುರಾಗಿದ್ದು ಅಂಗಡಿಗಳ ಮುಂದೆ ಹಗಲಿರುಳು ಸರತಿ ನಿಲ್ಲುವ ದುಸ್ಥಿತಿ ಎದುರಾಗಿದೆ. ಈಗಲೇ ತಳ್ಳಾಟ-ನೂಕಾಟ ಶುರುವಾಗಿದ್ದು ಪರಿಸ್ಥಿತಿ ಬಿಗಡಾಯಿಸುವ ಮುನ್ಸೂಚನೆ ನೀಡಿದೆ.

ಉತ್ತರ ಕರ್ನಾಟಕದ ಬೀದರ್, ಬೆಳಗಾವಿ, ಹಾವೇರಿ, ಗದಗ, ಯಾದಗಿರಿ, ಕೊಪ್ಪಳ, ರಾಯಚೂರು, ಮಧ್ಯಕರ್ನಾಟಕದ ದಾವಣಗೆರೆ, ಮಲೆನಾಡಿನ ಶಿವಮೊಗ್ಗ ಜಿಲ್ಲೆಗಳಲ್ಲಿ ರಸಗೊಬ್ಬರ ದಾಸ್ತಾನು ಭಾರೀ ಪ್ರಮಾಣದಲ್ಲಿ ಕಡಿಮೆ ಇದ್ದು ರೈತರು ಕಂಗಾಲಾಗಿದ್ದಾರೆ. ಇನ್ನುಳಿದ ಜಿಲ್ಲೆಗಳಲ್ಲೂ ತಕ್ಕಮಟ್ಟಿಗೆ ದಾಸ್ತಾನಿದ್ದರೂ ಪರಿಸ್ಥಿತಿ ಅನುಕೂಲಕರವಾಗಿಲ್ಲ. ಹೀಗಾಗಿ ಕೃಷಿ ಇಲಾಖೆ ಅಧಿಕಾರಿಗಳು ಸಹಿತ ರೈತರಿಗೆ 'ಪರ್ಯಾಯ ಬಳಕೆ' ಬಗ್ಗೆ ಸಲಹೆ ನೀಡುತ್ತಿದ್ದು ರೈತರು ಮತ್ತಷ್ಟು ಆತಂಕಕ್ಕೊಳಗ್ಗಿದ್ದಾರೆ.

## ಮುಂಗಾರು ಕೊರತೆ : ಕಡಿಮೆ ಮಳೆಯಾಗುವ ಮುನ್ಸೂಚನೆ

### ಉತ್ತರ ಕನ್ನಡ ಸೇರಿದಂತೆ ರಾಜ್ಯದ ಜಿಲ್ಲೆಗಳಲ್ಲಿ ಈ ಬಾರಿ ಮಳೆ ಕೊರತೆ ಆಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ಕೊಟ್ಟಿದೆ.

• ಉದಯವಾಹಿನಿ, ಕಾರವಾರ:

ಬಿರು ಬೇಸಿಗೆಯ ಬಿಸಿ ಗಾಳಿ, ನೀರಿನ ಬರ ಎದುರಿಸುತ್ತಿರುವ ಉತ್ತರ ಕನ್ನಡ ಜಿಲ್ಲೆಯಲ್ಲಿ ಈ ಬಾರಿ ಮುಂಗಾರು ಕೂಡ ವಾಡಿಕೆಗಿಂತ ಕಡಿಮೆ ಇರಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ರಾಜ್ಯದಾದ್ಯಂತ ಈ ಬಾರಿ ಮುಂಗಾರು ಸಾಮಾನ್ಯಕ್ಕಿಂತ ಕಡಿಮೆ ಇರಲಿದೆ ಎಂಬ ವರದಿ ಇದೆ. ಅದರಲ್ಲಿ 22 ಜಿಲ್ಲೆಗಳು ಸಾಮಾನ್ಯಕ್ಕಿಂತ ಬಹಳ ಕಡಿಮೆ ಮಳೆ ಆಗಲಿದೆ ಎಂದು ಅಂದಾಜಿಸಲಾಗಿದೆ.

ಅವುಗಳಲ್ಲಿ ಶೇ.80 ರಷ್ಟು ಅರಣ್ಯ ಪ್ರದೇಶ ಹೊಂದಿರುವ ಉತ್ತರ ಕನ್ನಡ ಜಿಲ್ಲೆ ಕೂಡ ಸೇರಿದೆ. ಬೇಸಿಗೆಯ ನೀರಿನ ಬರದ ಜತೆಗೆ ಉತ್ತರ ಕನ್ನಡ ಜಿಲ್ಲೆಗೆ ಮುಂಗಾರು ಕೂಡ ಕೊರತೆ ಆಗಲಿದೆ ಎನ್ನುವುದು ಆತಂಕಕಾರಿ ಆಗಿದೆ. ಕಳೆದ ಎರಡು ವರ್ಷಗಳು ಉತ್ತರ ಕನ್ನಡ ಜಿಲ್ಲೆಯಲ್ಲಿ ಬರೋಬ್ಬರಿ 7-9 ತಿಂಗಳು ಮಳೆಯಾಗಿವೆ. ಈ ವರ್ಷ ಮುಂಗಾರು ಪೂರ್ವ




ಮಳೆ ಕೂಡ ವಾಡಿಕೆಗಿಂತ ಹೆಚ್ಚಿದೆ ಎಂದು ಹವಾಮಾನ ಇಲಾಖೆ ಲೆಕ್ಕ ಮಾಡಿದೆ. ಆದರೆ ವಾಸ್ತವದಲ್ಲಿ ಮಳೆಯ ಪ್ರಭಾವ ಜಿಲ್ಲೆಯಲ್ಲಿ ಕಾಣುತ್ತಿಲ್ಲ. ಬೇಸಿಗೆ ಬಿರು ಬಿಸಿಲು, ಸೆಕೆ, ಬಿಸಿ ಗಾಳಿಗೆ ಜನ ಹೈರಾಣಾಗುತ್ತಿದ್ದಾರೆ.

ದಿನ ಬಳಕೆ ನೀರಿಗೆ ಅನೇಕ ಗ್ರಾಮಗಳಲ್ಲಿ ಕೊರತೆ ಉಂಟಾಗಿದೆ. ಜಿಲ್ಲಾಡಳಿತದ ಮಾಹಿತಿ ಪ್ರಕಾರ ಉತ್ತರ ಕನ್ನಡ ಜಿಲ್ಲೆಯಲ್ಲಿ 141 ಗ್ರಾಮ ಪಂಚಾಯಿತಿಗಳು ಬೇಸಿಗೆಯಲ್ಲಿ ನೀರಿನ ಸಮಸ್ಯೆ ಎದುರಿಸಬಹುದು ಎಂದು ಅಂದಾಜಿಸಿತ್ತು. ಸದ್ಯ 29 ಗ್ರಾಮ ಪಂಚಾಯಿತಿ ಮತ್ತು ಮಂಕಿ ಪಟ್ಟಣ ಪಂಚಾಯಿತಿಯಲ್ಲಿ ನೀರಿನ ಸಮಸ್ಯೆ ಎದುರಾಗಿದೆ.

ಅದರಲ್ಲಿ ಒಂಬತ್ತು ಗ್ರಾಮಗಳಿಗೆ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡಲಾಗುತ್ತಿದೆ. ರಸ್ತೆಯಿಂದ ದೂರ ಮನೆ ಇರುವವರು ಕೊಡಗಳಲ್ಲಿ ನೀರು ಹೊತ್ತೊಯ್ಯುತ್ತಿದ್ದಾರೆ. ಬೇಸಿಗೆ ಮುಗಿಯಲು ಇನ್ನೂ ಒಂದೂವರೆ ತಿಂಗಳು ಇದೆ. ಜೂನ್ ಶುರುವಾದರೂ ಮುಂಗಾರು ವಾಡಿಕೆಗಿಂತ ಕಡಿಮೆ ಇರಲಿದೆ ಎನ್ನುವುದು ನೀರಿನ ಅಭಾವದ ಎಚ್ಚರಿಕೆ ನೀಡುತ್ತಿದೆ. ದಾಖಲೆಯ ಮಳೆ ಸುರಿಯುತ್ತಿದ್ದ ಉತ್ತರ ಕನ್ನಡ ಜಿಲ್ಲೆಯಲ್ಲಿ ಈಗ ಮಳೆಗೂ ಲೆಕ್ಕಾಚಾರ ಮಾಡುವ ಪರಿಸ್ಥಿತಿ ಬಂದಿರುವುದು ಆಶ್ಚರ್ಯ ಎನ್ನುತ್ತಾರೆ ಗ್ರಾಮೀಣ ಭಾಗದ ಜನ.

## ಪೋಷಕರೇ ವಂತಿಗೆ ಸಂಗ್ರಹಿಸಿ ಆರಂಭಿಸಿದ್ದ ಶಾಲೆ




• ಉದಯವಾಹಿನಿ, ಹಾಸನ

ಪೋಷಕರೇ ಕೋಟ್ಯಂತರ ರೂಪಾಯಿ ವಂತಿಗೆ ಸಂಗ್ರಹಿಸಿ ಶಾಲೆ ಆರಂಭಿಸಿದ್ದು, ಆಮೇಲೆ ವಂಚನೆ ಮಾಡಲಾಗಿದೆ ಅಂತ ಶಾಲಾ ಆಡಳಿತ ಮಂಡಳಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿರುವ ಘಟನೆ ಹಾಸನ ಜಿಲ್ಲೆಯಲ್ಲಿ ನಡೆದಿದೆ.

ಹೊಳೆನರಸೀಪುರ ತಾಲ್ಲೂಕಿನ ಐಚನಹಳ್ಳಿ ಗ್ರಾಮದಲ್ಲಿರುವ ಋಷಿಶ್ರೀ ವಿದ್ಯಾನಿಕೇತನ ಶಾಲೆ ಆಡಳಿತ ಮಂಡಳಿ ವಿರುದ್ಧ ಪೋಷಕರು ಗಂಭೀರ ಆರೋಪ ಮಾಡಿದ್ದು ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರ ಕಚೇರಿಗೆ ಮುತ್ತಿಗೆ ಹಾಕಿ, ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದ್ದಾರೆ. ಮಾಲೀಕರ ಹಗ್ಗಜಗ್ಗಾಟದಿಂದ ಮಕ್ಕಳ ಭವಿಷ್ಯಕ್ಕೆ ಕೊಡಲಿ ಪೆಟ್ಟು ಬೀಳಲಿದ್ದು ಹೊಸ ಮ್ಯಾನೇಜ್ಮೆಂಟ್ ಶಾಲೆ ನಡೆಸಲು ಅವಕಾಶ ನೀಡುವಂತೆ ಒತ್ತಾಯಿಸಿದ್ದಾರೆ.

ಇದೀಗ ಶಾಲೆಯ ಹಳೆಯ ಮಾಲೀಕ ಸುರೇಶ್.ಸಿ ಹಾಗೂ ಹೊಸ ಮಾಲೀಕ ಪ್ರಕಾಶ್ ನಡುವೆ ಹಗ್ಗಜಗ್ಗಾಟ ನಡೆಯುತ್ತಿದೆ. 12 ಕೋಟಿಗೆ ಶಾಲೆ ಮಾರಾಟಕ್ಕೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಆದರೆ ಸುರೇಶ್ ಅವರು ಏಕಾಏಕಿ ಶಾಲೆ ಮಾರಾಟ ಮಾಡಲ್ಲ ಎಂದು ಈಗ ಉಲ್ಟಾ ಹೊಡೆದಿದ್ದಾರೆ. ಶಾಲಾ ಮಾಲೀಕರ ಜಟಾಪಟಿಯಲ್ಲಿ ನಮ್ಮ ಮಕ್ಕಳ ಭವಿಷ್ಯ ಹಾಳಾಗುತ್ತಿದೆ. ಶಾಲೆಗೆ ಅಡ್ಮಿಷನ್ ಜಾಸ್ತಿ ಆದರೆ ಶಾಲೆ ಮಾರಾಟ ಮಾಡಲ್ಲ ಎಂದು ಹಳೆಯ ಆಡಳಿತ ಮಂಡಳಿ ಹೇಳುತ್ತಿದೆ. ಇದರಿಂದ ಆತಂಕಗೊಂಡಿರುವ ಪೋಷಕರು ಹಾಸನದ ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕರ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿ ನಂತರ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದ್ದಾರೆ. ಹೊಸ ಆಡಳಿತ ಮಂಡಳಿ ಶಾಲೆ ನಡೆಸಲು ಅವಕಾಶ ನೀಡಬೇಕು, ಇಲ್ಲಾ ನಮ್ಮ ಮೂರುವರೆ ಕೋಟಿ ಹಣ ವಾಪಸ್ ಕೊಡಿ ಎಂದು ಪೋಷಕರ ಪಟ್ಟು ಹಿಡಿದಿದ್ದಾರೆ.

ವಿದ್ಯಾರ್ಥಿಗಳು ಪೋಷಕರು ತಿರುಗಿ ಬೀಳುತ್ತಿದ್ದಂತೆ ಶಾಲೆಗೆ ದಾಖಲಾತಿ ಜಾಸ್ತಿಯಾದರೆ ಶಾಲೆಯನ್ನು ಮಾರಾಟ ಮಾಡಲ್ಲ ಅಂತ ಹಳೇ ಆಡಳಿಯ ಮಂಡಳಿ ಹೇಳುತ್ತಿದೆ. ಆದರೆ ಹಳೇ ಹಾಗೂ ಹೊಸ ಆಡಳಿತ ಮಂಡಳಿಯ ಕಿತ್ತಾಟದಿಂದ ವಿದ್ಯಾರ್ಥಿಗಳ ಭವಿಷ್ಯ ಅತಂತ್ರವಾಗುವ ಆತಂಕ ಎದುರಾಗಿದೆ. ಜಿಲ್ಲಾಡಳಿತ ಹಾಗೂ ಶಾಲಾ ಶಿಕ್ಷಣ ಇಲಾಖೆ ಯಾವ ಕ್ರಮ ಕೈಗೊಳ್ಳಲಿದೆ ಎಂಬುದನ್ನು ಕಾದುನೋಡಬೇಕಿದೆ.

# ಕುತೂಹಲ ಕೆರಳಿಸಿದ ಸರ್ಕಾರದ ನಡೆ

## ಬೆಳಗಾವಿಯಲ್ಲಿ ಜುಲೈನಲ್ಲೇ ಅಧಿವೇಶನ ನಡೆಸಲು ಸಿದ್ಧತೆ




### ದೊಡ್ಡ ಜವಾಬ್ದಾರಿ

**ಸರ್ಕಾರದ ಈ ದಿಢೀರ್ ಚಿಂತನೆಗೆ ವಿರೋಧ ಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ ಹೇಗೆ ಪ್ರತಿಕ್ರಿಯಿಸುತ್ತವೆ ಎಂಬುದು ಕುತೂಹಲ ಮೂಡಿಸಿದೆ. ಉತ್ತರ ಕರ್ನಾಟಕದ ವಿಷಯಗಳ ಬಗ್ಗೆ ಚರ್ಚಿಸಲು ಅವರೂ ಕೂಡ ಇದಕ್ಕೆ ಸಮ್ಮತಿ ನೀಡುವ ಸಾಧ್ಯತೆ ಹೆಚ್ಚಿದೆ. ಶಾಸಕರು ಮತ್ತು ಅಧಿಕಾರಿಗಳ ವಸತಿ ವ್ಯವಸ್ಥೆ ಮಳೆಗಾಲದಲ್ಲಿ ಶಾಸಕರು ಮತ್ತು ಅಧಿಕಾರಿಗಳಿಗೆ ಸೂಕ್ತ ವಸತಿ ಹಾಗೂ ಸಾರಿಗೆ ವ್ಯವಸ್ಥೆ ಕಲ್ಪಿಸುವುದು ಜಿಲ್ಲಾಡಳಿತಕ್ಕೆ ದೊಡ್ಡ ಜವಾಬ್ದಾರಿಯಾಗಲಿದ್ದು, ಸ್ಪೀಕರ್ ಯು.ಟಿ. ಖಾದರ್ ಈಗಾಗಲೇ ಪ್ರಾಥಮಿಕ ಪರಿಶೀಲನೆಗೆ ಸೂಚನೆ ನೀಡಿದ್ದಾರೆ**

• ಉದಯವಾಹಿನಿ, ಬೆಳಗಾವಿ

ಇದೇ ಮೊದಲ ಬಾರಿಗೆ ಬೆಳಗಾವಿಯ ಸುವರ್ಣವಿಧಾನಸೌಧದಲ್ಲಿ ಈ ಬಾರಿಯ ಮಳೆಗಾಲದ ಅಧಿವೇಶನವನ್ನು ನಡೆಸುವ ಕುರಿತು ರಾಜ್ಯ ಸರ್ಕಾರ ಗಂಭೀರ ಚಿಂತನೆ ನಡೆಸುತ್ತಿರುವುದು ಉತ್ತರ ಕರ್ನಾಟಕ ಭಾಗದ ದೃಷ್ಟಿಯಿಂದ ಅತ್ಯಂತ ಮಹತ್ವದ ನಿರ್ಧಾರವಾಗಿದೆ.

ಸಾಮಾನ್ಯವಾಗಿ ಬೆಳಗಾವಿಯ ಸುವರ್ಣ ಸೌಧದಲ್ಲಿ ಪ್ರತಿ ವರ್ಷ ಚಳಿಗಾಲದ ಅಧಿವೇಶನವನ್ನು (ನವೆಂಬರ್/ಡಿಸೆಂಬರ್) ಮಾತ್ರ ನಡೆಸಲಾಗುತ್ತಿತ್ತು. ಆದರೆ, ಇತಿಹಾಸದಲ್ಲೇ ಮೊದಲ ಬಾರಿಗೆ ಇಲ್ಲಿ ಮಳೆಗಾಲದ ಅಧಿವೇಶನ ನಡೆಸಲು ಸರ್ಕಾರ ಸಜ್ಜಾಗುತ್ತಿದೆ. ವಿಧಾನಸಭೆಯ ಸಭಾಧ್ಯಕ್ಷರಾದ ಯು.ಟಿ. ಖಾದರ್ ಹಾಗೂ ವಿಧಾನಪರಿಷತ್ ಸಭಾಪತಿ ಬಸವರಾಜ್ ಹೊರಟ್ಟಿ ಅವರು ಜಂಟಿಯಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜೊತೆಗೆ ಈ ಕುರಿತು ವಿಸ್ತೃತ ಸಮಾಲೋಚನೆ ನಡೆಸಿದ್ದಾರೆ.

ಅಧಿವೇಶನವನ್ನು ಬೆಂಗಳೂರಿನ ಬದಲು ಬೆಳಗಾವಿಗೆ ಸ್ಥಳಾಂತರಿಸುವುದರಿಂದ ಆಗುವ ಸಾಧಕ-ಬಾಧಕಗಳ ಬಗ್ಗೆ ಚರ್ಚಿಸಲಾಗಿದೆ. ಮಳೆಗಾಲದ ಸದನವನ್ನು ಯಾವಾಗ ಆರಂಭಿಸಬೇಕು ಮತ್ತು ಎಷ್ಟು ದಿನಗಳ ಕಾಲ ನಡೆಸಬೇಕು ಎಂಬ ನಿಖರವಾದ ದಿನಾಂಕಗಳನ್ನು ಮುಂಬರುವ ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ಅಂತಿಮಗೊಳಿಸುವ ಸಾಧ್ಯತೆಯಿದೆ.

ಸಾಮಾನ್ಯವಾಗಿ ಕರ್ನಾಟಕದ ಮಳೆಗಾಲದ ಅಧಿವೇಶನವು ಜುಲೈ ತಿಂಗಳ ಅವಧಿಯಲ್ಲಿ ನಡೆಯಲಿದ್ದು, ಈ ಬಾರಿಯೂ ಜುಲೈ ಮಧ್ಯಭಾಗದಲ್ಲಿ ಕಲಾಪ ಆರಂಭವಾಗುವ ನಿರೀಕ್ಷೆಯಿದೆ. ಬೆಳಗಾವಿಯಲ್ಲಿ ಅಧಿವೇಶನ ನಡೆಸುವುದರಿಂದ ಉತ್ತರ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳು, ನೀರಾವರಿ ಯೋಜನೆಗಳು ಹಾಗೂ ಪ್ರಾದೇಶಿಕ ಅಸಮತೋಲನ ನಿವಾರಣೆಯ ಕುರಿತು ಹೆಚ್ಚು ಸಮಯ ವಿನಿಯೋಗಿಸಿ ಚರ್ಚಿಸಲು ಅನುಕೂಲವಾಗುತ್ತದೆ ಎಂಬುದು ಸರ್ಕಾರದ ಆಶಯ. ಅಧಿವೇಶನದ ಹಿನ್ನೆಲೆಯಲ್ಲಿ ಇಡೀ ರಾಜ್ಯ ಸರ್ಕಾರದ ಆಡಳಿತ ಯಂತ್ರ, ಸಚಿವರು, ಮುಖ್ಯ ಕಾರ್ಯದರ್ಶಿಗಳು ಹಾಗೂ ಹಿರಿಯ ಅಧಿಕಾರಿಗಳ ದಂಡು ಕೆಲವು ವಾರಗಳ ಕಾಲ ಬೆಳಗಾವಿಯಲ್ಲೇ ಬೀಡುಬಿಡಬೇಕಾಗುತ್ತದೆ. ಸುಮಾರು 15 ರಿಂದ 20 ದಿನಗಳ ಕಾಲ ಸಾವಿರಾರು ಜನ ರಾಜಕಾರಣಿಗಳು, ಭದ್ರತಾ ಸಿಬ್ಬಂದಿ ಹಾಗೂ ಅಧಿಕಾರಿಗಳು ಬೆಳಗಾವಿಯಲ್ಲಿ ತಂಗುವುದರಿಂದ ಸ್ಥಳೀಯ ಹೋಟೆಲ್ ಉದ್ಯಮ, ಸಾರಿಗೆ ಮತ್ತು ವ್ಯಾಪಾರ ವಹಿವಾಟಿಗೆ ದೊಡ್ಡ ಮಟ್ಟದ ಆರ್ಥಿಕ ಉತ್ತೇಜನ ಸಿಗಲಿದೆ.

1 ಇತಿಹಾಸದಲ್ಲೇ ಮೊದಲ ಬಾರಿ

2 ಆಡಳಿತ ವ್ಯವಸ್ಥೆ ಸ್ಥಳಾಂತರ

3 ವಿರೋಧ ಪಕ್ಷಗಳ ನಿಲುವು ಮಳೆಯ ಸವಾಲು ಹಾಗೂ ಸಿದ್ಧತೆ

**ದೊಡ್ಡ ಮಟ್ಟದ ಆರ್ಥಿಕ ಉತ್ತೇಜನ**

### ವಿಶೇಷ ಮೂಲಸೌಕರ್ಯ ಸಿದ್ಧತೆ

**ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ**

**ಬೆಳಗಾವಿ ಭಾಗದಲ್ಲಿ ಜುಲೈನಲ್ಲಿ ಭಾರಿ ಮಳೆಯಾಗುವ ಸಾಧ್ಯತೆ ಇರುವುದರಿಂದ, ಅಧಿವೇಶನಕ್ಕೆ ಬರುವ ಜನಪ್ರತಿನಿಧಿಗಳು, ಅಧಿಕಾರಿಗಳು ಮತ್ತು ಮಾಧ್ಯಮದವರಿಗೆ ಯಾವುದೇ ತೊಂದರೆಯಾಗದಂತೆ ಸುವರ್ಣಸೌಧದ ಆವರಣ ಹಾಗೂ ನಗರದಲ್ಲಿ ವಿಶೇಷ ಮೂಲಸೌಕರ್ಯ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಮಹಾರಾಷ್ಟ್ರದ ಜೊತೆಗಿನ ಗಡಿ ವಿವಾದದ ಹಿನ್ನೆಲೆಯಲ್ಲಿ ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಎಂಬುದನ್ನು ಸಾಬೀತುಪಡಿಸಲು ಮತ್ತು ಗಡಿನಾಡ ಕನ್ನಡಿಗರಲ್ಲಿ ಆತ್ಮವಿಶ್ವಾಸ ತುಂಬಲು ಈ ನಿರ್ಧಾರ ರಾಜಕೀಯವಾಗಿಯೂ ತಂತ್ರಗಾರಿಕೆಯಾಗಿದೆ.**

## ಬ್ರಹ್ಮಾವರದಲ್ಲಿ ಹಲಸು, ಹಣ್ಣು ಮೇಳಕ್ಕೆ ಚಾಲನೆ

• ಉದಯವಾಹಿನಿ, ಬ್ರಹ್ಮಾವರ:




ಕಣ್ಣುಹಾಯಿಸಿದಷ್ಟು ಮಳಿಗೆಗಳ ಸಾಲು. ಒಂದೆಡೆ ಘಮ ಘಮಿಸುವ ಖಾದ್ಯ ತಿಂಡಿಗಳು, ಇನ್ನೊಂದೆಡೆ ಹಲಸು, ಮಾವಿನ ರಾಶಿ. ಇದು ಬ್ರಹ್ಮಾವರದ ಎಸ್ ಎಂಎಸ್ ಸಮುದಾಯ ಭವನದಲ್ಲಿ ಪ್ರಾರಂಭಗೊಂಡ ಮೂರು ದಿನಗಳ ಹಲಸು ಮತ್ತು ಹಣ್ಣು ಮೇಳದ ಚಿತ್ರಣ. ಉತ್ಪಾದಕರಿಂದ ನೇರವಾಗಿ ಗ್ರಾಹಕರಿಗೆ, ರೈತರಿಂದ ನೇರವಾಗಿ ಮಾರುಕಟ್ಟೆಗೆ ಎನ್ನುವ ಚಿಂತನೆಯಲ್ಲಿ ಬ್ರಹ್ಮಾವರ ರೋಟರಿ, ಬಾರಕೂರು ರೋಟರಿ, ಕೃಷಿ ವಿಜ್ಞಾನ ಕೇಂದ್ರ, ವಲಯ ಕೃಷಿ ಮತ್ತು ತೋಟಗಾರಿಕೆ ಸಂಶೋಧನ ಕೇಂದ್ರ, ಹಾಗೂ ಡಿಪ್ಲೊಮಾ ಕೃಷಿ ಮಹಾವಿದ್ಯಾಲಯದ ಆಶ್ರಯದಲ್ಲಿ ಈ ಮೇಳ ನಡೆಯುತ್ತಿದೆ.

ನೂರಾರು ಸಣ್ಣ ಸಣ್ಣ ಉದ್ಯಮಿಗಳು, ಗೃಹ ಉತ್ಪನ್ನಗಳು ಮೇಳಕ್ಕೆ ಆಗಮಿಸಿದ್ದು ವಿವಿಧ ರೀತಿಯ ಹಣ್ಣು, ಬಯಲು ಸೀಮೆಯ ಅತ್ಯಂತ ಸಿಹಿಯಾದ ಮಾವು ಹಾಗೂ ಪ್ರಸಿದ್ಧ ಕೆಂಪು ಹಲಸು ಹಣ್ಣಿನ ಉತ್ಪನ್ನಗಳು, ಹಲವಾರು ಹಣ್ಣಿನ ಖಾದ್ಯಗಳು, ಬಗೆ ಬಗೆ ಹಣ್ಣಿನ ಐಸ್ ಕ್ರೀಂ, ಹಲಸಿನ ಹೋಳಿಗೆ ಅಲ್ಲದೇ ವಿವಿಧ ಹಣ್ಣಿನ ಗಿಡ, ತರಕಾರಿ ಬೀಜ, ಆಯುರ್ವೇದಿಕ್ ಹಾಗೂ ಗೃಹ ತಯಾರಿಕೆಯ ವಸ್ತುಗಳು ಗಮನ ಸೆಳೆಯುತ್ತಿದೆ.

ಇಳಕಲ್, ಮೈಸೂರ್ ಸಿಲ್ಕ್ ಹಾಗೂ ಖಾದಿ ಸೀರೆ, ತುಮಕೂರು, ಪುದುಚೇರಿಯಿಂದ ಚಂದ್ರ ಹಲಸು ಸೇರಿದಂತೆ ವಿಭಿನ್ನ ತಳಿಗಳು, ಆಯುರ್ವೇದ ಉತ್ಪನ್ನ ಹಾಗೂ ಔಷಧ, ದೀಪಾಲಂಕೃತ ಮಣ್ಣಿನ ಮಡಕೆ, ಬೇಲೂರಿನ ಶಿಲಾಮೂರ್ತಿ, ಸದಭಿರುಚಿಯ ಪುಸ್ತಕ, ನ್ಯಾಚುರಲ್ ಹಣ್ಣಿನ ಬಗೆ ಬಗೆಯ ಐಸ್ ಕ್ರೀಂ, ಮಾವಿನ ಹೋಳಿಗೆ, ಹಲಸಿನ ಹೋಳಿಗೆ, ಹಲಸಿನ ಜಿಲೇಬಿ, ಮಂಚೂರಿ, ಮುಳ್ಕ, ಕಬಾಬ್, ಬಿರಿಯಾನಿ, ಉಪ್ಪಿನಕಾಯಿ, ಜಾಮ್, ಚಿಪ್ಸ್, ಹಪ್ಪಳ, ಮಾವಿನ ಹಣ್ಣಿನ ಜಾಮ್, ಪೇರಳೆ ಜಾಮ್, ರೋಸ್ ಪೆಟಲ್ ಗುಲ್ಕನ್, ಬಿಲ್ವಪತ್ರೆ ಹಣ್ಣಿನ ಜಾಮ್, ಹುಣಸೆಕಾಯಿ ಚಟ್ನಿ, ಅಪ್ಪೆಮಿಡಿ ಚಟ್ನಿ, ಲಿಂಬು ಸಿಹಿ ಉಪ್ಪಿನಕಾಯಿ, ಹುಣಸೆ ಸಿಹಿ ಉಪ್ಪಿನಕಾಯಿ ಇರಲಿದೆ.

## ಮಳೆಗಾಲ ಬರ್ತಿದೆ, ಚರ್ಮ ಗಂಟು ರೋಗದ ಬಗ್ಗೆ ಎಚ್ಚರವಿರಲಿ

• ಉದಯವಾಹಿನಿ, ಸುಳ್ಯ:

ನಾಲ್ಕು ವರ್ಷಗಳ ಹಿಂದೆ ರಾಜ್ಯದಾದ್ಯಂತ ಹೈನುಗಾರರನ್ನು ಕಂಗೆಡಿಸಿದ್ದ ದನ ಕರುಗಳ ಚರ್ಮ ಗಂಟು ರೋಗ ಮತ್ತೆ ಕಾಡದಂತೆ ಮುನ್ನೆಚ್ಚರಿಕಾ ಕ್ರಮಗಳತ್ತ ಪಶು ಸಂಗೋಪನೆ ಇಲಾಖೆ ಹೆಚ್ಚಿನ ಗಮನ ಹರಿಸಿದೆ. ವಿಶೇಷವಾಗಿ ಮಳೆಗಾಲ ಆರಂಭವಾಗುತ್ತಿರುವ ಕಾರಣ ಸೊಳ್ಳೆ, ನೊಣಗಳ ಹೆಚ್ಚಳದಿಂದ ಸೋಂಕು ಹರಡುವ ಸಾಧ್ಯತೆ ಇರುವುದರಿಂದ ರೈತರು ಈಗಲೇ ಜಾಗ್ರತೆ ವಹಿಸುವಂತೆ ಪಶು ಸಂಗೋಪನಾ ಇಲಾಖೆ ಸೂಚಿಸಿದೆ. ಹಿಂದೆ ರಾಜ್ಯದ ಸಾವಿರಾರು ಜಾನುವಾರುಗಳು ಸೋಂಕಿಗೆ ತುತ್ತಾಗಿ ಹೈನುಗಾರರು ಭಾರೀ ನಷ್ಟ ಅನುಭವಿಸಿದ್ದರು. ದನಗಳಲ್ಲಿ ಜ್ವರ, ಚರ್ಮದ ಮೇಲೆ ಗಂಟುಗಳು, ಗಾಯಗಳು, ಹಾಲಿನ ಉತ್ಪಾದನೆ ಕುಸಿತ ಮೊದಲಾದ ಲಕ್ಷಣಗಳು ಕಂಡುಬಂದಿದ್ದವು.

ಕೆಲವೆಡೆ ಸಾವಿನ ಪ್ರಕರಣಗಳೂ ದಾಖಲಾಗಿದ್ದವು. ಈ ಬಾರಿ ಅಂತಹ ಪರಿಸ್ಥಿತಿ ಮರುಕಳಿಸದಂತೆ ಇಲಾಖೆ ವತಿಯಿಂದ ಗ್ರಾಮ ಮಟ್ಟದಲ್ಲೇ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.




**ಹೇಗೆ ಬರುತ್ತದೆ?** ಪಶು ವೈದ್ಯರ ಪ್ರಕಾರ, ಚರ್ಮ ಗಂಟು ರೋಗವು ಮುಖ್ಯವಾಗಿ ಸೊಳ್ಳೆ, ನೊಣ, ಉಣ್ಣೆ ಮುಂತಾದ ರಕ್ತ ಹೀರುವ ಕೀಟಗಳ ಮೂಲಕ ಹರಡುತ್ತದೆ. ಆದ್ದರಿಂದ ಗೋಶಾಲೆ ಹಾಗೂ ಜಾನುವಾರು ಇರುವ ಪ್ರದೇಶಗಳನ್ನು ಸ್ವಚ್ಛವಾಗಿಡುವುದು ಅತ್ಯಗತ್ಯ. ನೀರು ನಿಲ್ಲದಂತೆ ನೋಡಿ ಕೊಳ್ಳುವುದು, ಗೋಶಾಲೆಗಳಲ್ಲಿ ನಿಯ ಮಿತವಾಗಿ ಕೀಟನಾಶಕ ಸಿಂಪಡಣೆ ಮಾಡುವುದು, ಜಾನುವಾರುಗಳಿಗೆ ಲಸಿಕೆ ನೀಡಿಸುವುದು ಅತ್ಯಂತ ಪರಿಣಾಮಕಾರಿ ಮುನ್ನೆಚ್ಚರಿಕಾ ಕ್ರಮಗಳಾಗಿವೆ.

**ಆರಂಭಿಕ ಲಕ್ಷಣಗಳೇನು?**

ರೋಗದ ಆರಂಭಿಕ ಲಕ್ಷಣಗಳಾದ ಜ್ವರ, ಕಣ್ಣೀರು, ಮೂಗಿನ ನೀರು, ದೇಹದ ಮೇಲೆ ಸಣ್ಣ ಗಂಟುಗಳು ಕಂಡುಬಂದ ತಕ್ಷಣ ಪಶು ವೈದ್ಯರನ್ನು ಸಂಪರ್ಕಿಸಬೇಕು. ಸೋಂಕಿತ ಜಾನುವಾರನ್ನು ಬೇರೆ ಜಾನುವಾರುಗಳಿಂದ ಪ್ರತ್ಯೇಕವಾಗಿಡುವುದರಿಂದ ಸೋಂಕು ವ್ಯಾಪಿಸುವುದನ್ನು ತಡೆಯಬಹುದು ಎಂದು ಇಲಾಖೆ ತಿಳಿಸಿದೆ. ಗ್ರಾಮೀಣ ಭಾಗಗಳಲ್ಲಿ ಕೆಲ ರೈತರು ಆಯುರ್ವೇದ ಹಾಗೂ ಮನೆ ಮದ್ದುಗಳನ್ನೂ ಬಳಸುತ್ತಿದ್ದು, ಗಾಯಗಳ ಆರೈಕೆ ಹಾಗೂ ರೋಗನಿರೋಧಕ ಶಕ್ತಿ ಹೆಚ್ಚಿಸಲು ಪಾರಂಪರಿಕ ಔಷಧ ಕ್ರಮಗಳನ್ನು ಅನುಸರಿಸುತ್ತಿದ್ದಾರೆ. ಆದರೆ ಯಾವುದೇ ಮನೆಮದ್ದುಗಳನ್ನು ಪಶುವೈದ್ಯರ ಸಲಹೆಯೊಂದಿಗೆ ಮಾತ್ರ ಬಳಸಬೇಕು ಎಂದು ತಜ್ಞರು ಸೂಚಿಸಿದ್ದಾರೆ.

## ನೀಟ್ ಪರೀಕ್ಷೆಯ ಒತ್ತಡಕ್ಕೆ ಬಲಿಯಾಯ್ತು ಮತ್ತೊಂದು ಜೀವ

• ಉದಯವಾಹಿನಿ, ಕಲಬುರಗಿ

ವೈದ್ಯಕೀಯ ಶಿಕ್ಷಣದ ದೊಡ್ಡ ಕನಸು ಹೊತ್ತಿದ್ದ 18 ವರ್ಷದ ಯುವತಿಯೊಬ್ಬಳು ನೇಣಿಗೆ ಶರಣಾಗಿರುವ ಅತ್ಯಂತ ದಾರುಣ ಘಟನೆ ಕಲಬುರಗಿ ನಗರದಲ್ಲಿ ನಡೆದಿದೆ. ಮೇ 2ರಂದು ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆ ಬರೆದಿದ್ದ ಭಾಗ್ಯಶ್ರೀ (18) ಮೃತಪಟ್ಟ ದುರ್ದೈವಿ. ಕಲಬುರಗಿ ನಗರದ ಕೋರ್ಟ್ ವೃತ್ತದ ಬಳಿ ಇರುವ ಅಪಾರ್ಟ್ಮೆಂಟ್‌ನಲ್ಲಿ ಈ ಘಟನೆ ಸಂಭವಿಸಿದೆ. ಮೃತ ಭಾಗ್ಯಶ್ರೀ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇಕಡಾ 92 ರಷ್ಟು ಅತ್ಯುತ್ತಮ ಅಂಕಗಳನ್ನು ಗಳಿಸಿ ತೇರ್ಗಡೆಯಾಗಿದ್ದಳು. ವೈದ್ಯಕೀಯ ಶಿಕ್ಷಣದ ಬಗ್ಗೆ ಅಪಾರ ಆಸಕ್ತಿ ಮತ್ತು ನಿರೀಕ್ಷೆ ಹೊಂದಿದ್ದ ಆಕೆ, ಇತ್ತೀಚೆಗಷ್ಟೇ ನೀಟ್ ಪರೀಕ್ಷೆಯನ್ನು ಬರೆದು ಫಲಿತಾಂಶಕ್ಕಾಗಿ ಕಾಯುತ್ತಿದ್ದಳು. ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ಫ್ಯಾನಿಗೆ ನೇಣು ಬಿಗಿದುಕೊಂಡು ಆಕೆ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ.

## ನಿಷ್ಠೆಯ ರಾಜಕಾರಣ ಮಾಡಿದ್ದೇನೆಯೇ ಹೊರತು ದ್ವೇಷದ ರಾಜಕಾರಣವಲ್ಲ: ಡಾ. ರವಿ ಸಿ.ಟಿ

• ಉದಯವಾಹಿನಿ, ಸುಳ್ಯ

ಒಂದಷ್ಟು ಜನರು ಪತ್ರಿಕಾಗೋಷ್ಠಿ ನಡೆಸಿ, ನನ್ನ ವಿರುದ್ಧ ಮಾತನಾಡಿದ್ದಾರೆ. ನನ್ನ ಬದುಕು ತೆರೆದ ಪುಸ್ತಕ. ಕಷ್ಟಪಟ್ಟು, ಹೋರಾಡಿ, ಸಾರ್ವಜನಿಕ ಜೀವನಕ್ಕೆ ಬಂದು, ಪಕ್ಷನಿಷ್ಠೆಯಿಂದ ಕೆಲಸ ಮಾಡಿದ್ದೇನೆ. ಜನ ವಿಶ್ವಾಸವಿಟ್ಟು ಗೆಲ್ಲಿಸಿದಾಗ ಜನಪರ ಕಾರ್ಯ ಮಾಡಿದ್ದೇನೆ. 2018-23ರ ಒಳಗೆ 5,857 ಕೋಟಿ ರೂಪಾಯಿಯ ಕಾಮಗಾರಿಗಳನ್ನು ಮಂಜೂರು ಮಾಡಿಸಿದ್ದೇನೆ. ನನ್ನ ವಿರುದ್ಧ ಆರೋಪ ಮಾಡುವವರ ಬದುಕು ಎಷ್ಟು ಸ್ವಚ್ಛವಾಗಿದೆ ಎಂದು ನೋಡಿಕೊಳ್ಳಬೇಕು. ಆರೋಪ ಮಾಡುವವರು ಅವರನ್ನೊಮ್ಮೆ ಪ್ರಶ್ನಿಸಿಕೊಳ್ಳಲಿ ಎಂದು ಬಿಜೆಪಿ ಹಿರಿಯ ನಾಯಕ, ವಿಧಾನ ಪರಿಷತ್ ಸದಸ್ಯ ಡಾ. ರವಿ ಸಿ.ಟಿ ಹೇಳಿದರು. ಅವರು ಚಿಕ್ಕಮಗಳೂರಿನಲ್ಲಿ ತಮ್ಮ ವಿರುದ್ಧ ಕಾಂಗ್ರೆಸ್ ಪಕ್ಷದವರ ಆರೋಪಗಳಿಗೆ ಉತ್ತರಿಸುತ್ತಿದ್ದರು.

2023ರ ವಿಧಾನಸಭಾ ಚುನಾವಣೆಯಲ್ಲಿ ಅಕ್ರಮ ಮದ್ಯ ಪತ್ತೆಯಾದಾಗ ಯಾರ ವಿರುದ್ಧ ಪ್ರಕರಣ ದಾಖಲಾಗಿತ್ತು? ಯಾರ ಪರವಾಗಿ ಮದ್ಯ ಸರಬರಾಜಾಗಿತ್ತು? ಇದನ್ನೂ ಪ್ರಶ್ನೆ ಮಾಡಲಿ. ನನ್ನ ಬಗ್ಗೆ ಮಾತನಾಡುವವರು, ಅವರ ಪಕ್ಷದ ಶಾಸಕರು "ಬೆಂಕಿ ಹಾಕಿ ಸುಡುತ್ತೇನೆ ಎಂಬ ಹೇಳಿಕೆಗಳ ಜೊತೆಗೆ ಇನ್ನಷ್ಟು ಕೆಟ್ಟ ಅವಾಚ್ಯ ಪದಗಳನ್ನು ಬಳಸಿದ್ದು ಯಾರಿಗೆ? ಅದು ಸಾರ್ವಜನಿಕವಾಗಿ ಮಾತನಾಡುವ ಭಾಷೆಯೇ? ಮುತ್ಸದ್ದಿತನವೇ? ಒಂದೆರಡಲ್ಲ ಎಂದು ಮೂರು ಪಕ್ಷಗಳಿಗೆ ಹೋಗಿ ಕಲಿತದ್ದು ಇದನ್ನೇ? ಈ ಪ್ರಚೋದನೆ ಇಲ್ಲದಿದ್ದರೆ ಚಿಕ್ಕಮಗಳೂರಿನಲ್ಲಿ ಯಾರೂ ಗಲಾಟೆ ಮಾಡುವ ಯೋಚನೆಯೂ ಮಾಡುತ್ತಿರಲಿಲ್ಲ ಎಂದರು.

ನಾನು 20 ವರ್ಷ ಶಾಸಕನಾಗಿದ್ದು, ಎರಡು ಬಾರಿ ಸಚಿವನಾಗಿದ್ದೆ. ಯಾವ




ಊರಿನಲ್ಲೂ ರಾಜಕೀಯ ಕಾರಣಕ್ಕೆ ನನ್ನಿಂದಾಗಿ ಗಲಾಟೆಯಾಗಲು ಬಿಟ್ಟಿಲ್ಲ. ರಾಜಕೀಯ ವಿರೋಧಿಗಳನ್ನೂ ಗೌರವದಿಂದಲೇ ಕಂಡಿದ್ದೇನೆ. 2022-23ರಲ್ಲಿ ನಾನೇ ಮಂಜೂರು ಮಾಡಿಸಿದ ಕಾಮಗಾರಿಗಳನ್ನು ಇಂದು ತಮ್ಮದು ಎನ್ನುತ್ತಿದ್ದಾರೆ. ಟೆಂಡರ್‌ಗಳು ಆನ್‌ಲೈನ್ ಟೆಂಡರ್ ಆಗಿರುತ್ತವೆ. ಯಾರು ಅತ್ಯಂತ ಕಡಿಮೆ ಬಿಡ್ ಮಾಡುತ್ತಾರೋ, ಅವರಿಗೆ ಟೆಂಡರ್ ಸಿಗುತ್ತದೆ. ಇದರಲ್ಲಿ ಯಾರು ಬೇಕಾದರೂ ಸ್ಪರ್ಧಿಸಬಹುದು. ಬೇನಾಮಿ ಹೆಸರಲ್ಲಿ ಗುತ್ತಿಗೆ ಮಾಡುತ್ತಿರುವವರು ಯಾರು ಎನ್ನುವುದು ನನಗೂ ತಿಳಿದಿದೆ. ನಗರಸಭೆಯಲ್ಲಿ ಬೇನಾಮಿ ಹೆಸರಲ್ಲಿ ಯಾರೆಲ್ಲ

**ನಾನು ಗೌರವಯುತವಾಗಿ ಬದುಕಿದ್ದು, ಹೋರಾಟ ನಡೆಸಿ, ಜನರ ಪ್ರೀತಿ ಗಳಿಸಿ ರಾಜಕಾರಣ ಮಾಡಿದ್ದೇನೆ. ಚಿಕ್ಕಮಗಳೂರಿನಲ್ಲಿ 20 ವರ್ಷ ಪ್ರೀತಿಯ ರಾಜಕಾರಣ ಮಾಡಿದ್ದೇನೆಯೇ ಹೊರತು ಭೀತಿಯ, ರಾಜಕೀಯ ದೌರ್ಜನ್ಯದ ರಾಜಕಾರಣ ಮಾಡಿಲ್ಲ. ನಾನು ಕಾಮಗಾರಿ ವೀಕ್ಷಣೆಗೆ ಹೋದಾಗ ಕಾಂಗ್ರೆಸ್ ಗೂಂಡಾಗಳು ಅಡ್ಡ ಹಾಕಿದ್ದನ್ನೂ ಸಮರ್ಥಿಸುತ್ತೀರೋ? ಅವರು ಮಾಡಿರುವುದು ಕಾನೂನು ಪ್ರಕಾರ ಅಪರಾಧವಲ್ಲವೇ? ಇಂತಹ ಗೂಂಡಾ ವರ್ತನೆಗೆ ಪ್ರಚೋದನೆ ಯಾರು? ಬೆಂಕಿ ಹಾಕಿ ಸುಡುತ್ತೇನೆ ಎಂದವರೇ ತಾನೆ ಪ್ರಚೋದನೆ ಕೊಟ್ಟದ್ದು ಎಂದರು.**

ಸಿ.ಟಿ.ರವಿ

ಗುತ್ತಿಗೆ ಮಾಡಿದ್ದರು, ಮಾಡುತ್ತಿದ್ದಾರೆ ಎನ್ನುವುದೂ ತಿಳಿದಿದೆ. ಯಾವ ಯಾವ ಹೋಬಳಿಯಲ್ಲಿ ಯಾರೆಲ್ಲ ಬೇನಾಮಿ ಕೆಲಸ ಮಾಡಿದ್ದಾರೆ ಗೊತ್ತಿದೆ. ಕೆಆರ್‌ಐಡಿಎಲ್ ನಲ್ಲಿದ್ದ, ನಾನೇ ಮಂಜೂರು ಮಾಡಿಸಿದ ಹಣವನ್ನು ಬಿಜೆಪಿ ಸರ್ಕಾರ ಹೋದ ನಂತರ ಯಾರೆಲ್ಲ ಹಂಚಿಕೊಂಡಿದ್ದಾರೆ ಎನ್ನುವುದು ತಿಳಿದಿದೆ. ಇನ್ನೊಬ್ಬರ ಕಡೆ ಬೆರಳು ತೋರಿಸುವವರು ತಾವೇನು ಮಾಡುತ್ತಿದ್ದೇವೆ ಎನ್ನುವುದನ್ನೂ ಸ್ಪಷ್ಟಪಡಿಸಲಿ ಎಂದು ರವಿ ಸವಾಲು ಹಾಕಿದರು. ಅಧಿಕಾರದ ಮದದಲ್ಲಿ ಮೆರೆದವರು ಪ್ರಜಾಪ್ರಭುತ್ವದಲ್ಲಿ ತೀರ್ಮಾನ ಮಾಡುವವರು ಜನರು. ನಾವು ಸಿದ್ಧಾಂತಕ್ಕಾಗಿ ರಾಜಕಾರಣಕ್ಕೆ ಬಂದವರು. ರಾಜ್ಯದ ಜನರೂ ಕರೆಯುವುದಿಲ್ಲ. 'ಹರೀಶ್ ಗೆದ್ದಲು ಹುತ್ತ ಕಟ್ಟುವಂತೆ ಪಕ್ಷ ಕಟ್ಟಿದ್ದರು. ಆದರೆ, ಹಾವು ಬಂದು ಸೇರಿಕೊಂಡು, ಗೆದ್ದಲು ಹುಳಗಳನ್ನು ತಿನ್ನುವಂತಹ ಪರಿಸ್ಥಿತಿ ಇಲ್ಲೂ ಆಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

## ಮಿನಿ ನ್ಯೂಸ್

### ಜಿಲ್ಲಾ ವರಿಷ್ಠಾಧಿಕಾರಿ ಜಗದೀಶ್ ಎಂ. ಭೇಟಿ




• ಉದಯವಾಹಿನಿ, ಜಮಖಂಡಿ:

ನಗರದ ಗ್ರಾಮೀಣ ಪೊಲೀಸ್ ಠಾಣೆಗೆ ಹೆಚ್ಚುವರಿ ಜಿಲ್ಲಾ ವರಿಷ್ಠಾಧಿಕಾರಿ ಜಗದೀಶ್ ಎಂ. ಅವರು ಭೇಟಿ ನೀಡಿ ಠಾಣೆಯ ವಿವಿಧ ವಿಭಾಗಗಳ ಕಾರ್ಯವೈಖರಿ, ದಾಖಲೆ ನಿರ್ವಹಣೆ ಹಾಗೂ ಕಾನೂನು ಸುವ್ಯವಸ್ಥೆಯ ಸ್ಥಿತಿಗತಿಗಳ ಕುರಿತು ಸಮಗ್ರ ಪರಿಶೀಲನೆ ನಡೆಸಿದರು. ಠಾಣೆಯ ಆಡಳಿತಾತ್ಮಕ ವ್ಯವಸ್ಥೆ, ಅಪರಾಧ ಪ್ರಕರಣಗಳ ತನಿಖೆ ಪ್ರಗತಿ, ಸಾರ್ವಜನಿಕರಿಂದ ಬರುವ ದೂರುಗಳ ನಿರ್ವಹಣೆ ಹಾಗೂ ಸಿಬ್ಬಂದಿಗಳ ಕಾರ್ಯಪದ್ಧತಿ ಕುರಿತು ಮಾಹಿತಿ ಪಡೆದು ಅಧಿಕಾರಿಗಳಿಗೆ ಅಗತ್ಯ ಮಾರ್ಗದರ್ಶನ ನೀಡಿದರು. ಪೊಲೀಸ್ ಠಾಣೆಗೆ ಬರುವ ಸಾರ್ವಜನಿಕರಿಗೆ ಸ್ನೇಹಪರ ಸೇವೆ ಒದಗಿಸುವುದು, ಅಪರಾಧ ತಡೆಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದು ಹಾಗೂ ರಾತ್ರಿ ಗಸ್ತು ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವಂತೆ ಸೂಚನೆ ನೀಡಿದರು ಎನ್ನಲಾಗಿದೆ. ಇದೇ ವೇಳೆ ಠಾಣೆಯ ದಾಖಲೆ ಪುಸ್ತಕಗಳು, ಶಸ್ತ್ರಾಸ್ತ್ರ ಕೊಠಡಿ, ವಶಪಡಿಸಿಕೊಂಡ ವಸ್ತುಗಳ ಸಂಗ್ರಹಣೆ ಹಾಗೂ ಸಿಸಿಟಿವಿ ಮೇಲ್ವಿಚಾರಣಾ ವ್ಯವಸ್ಥೆಯನ್ನೂ ಪರಿಶೀಲಿಸಿದರು. ಈ ಸಂದರ್ಭದಲ್ಲಿ ಡಿ.ವೈ.ಎಸ್.ಪಿ ಸಯ್ಯದ್ ರೋಷನ್ ಜಮೀರ್, ಸಿ.ಪಿ.ಐ ಮಲ್ಲಪ್ಪ ಮಡ್ಡಿ, ಪಿ.ಎಸ್.ಐ ಗಂಗಾಧರ ಪೂಜೇರಿ ಸೇರಿದಂತೆ ಪೊಲೀಸ್ ಸಿಬ್ಬಂದಿ ಉಪಸ್ಥಿತರಿದ್ದರು. ಭೇಟಿಯ ವೇಳೆ ಪೊಲೀಸ್ ಇಲಾಖೆಯ ಕಾರ್ಯಕ್ಷಮತೆ ಹೆಚ್ಚಿಸುವುದು ಹಾಗೂ ಸಾರ್ವಜನಿಕರಲ್ಲಿ ವಿಶ್ವಾಸ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಹಲವು ಮಹತ್ವದ ಸಲಹೆಗಳನ್ನು ನೀಡಲಾಗಿದೆ ಎಂದು ತಿಳಿದುಬಂದಿದೆ.

### ಗವಿಸಿದ್ದಪ್ಪ ಹೊಸಮನಿ ಪದೋನ್ನತಿ

• ಉದಯವಾಹಿನಿ, ಕೊಪ್ಪಳ:




ಕೊಪ್ಪಳ: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕೊಪ್ಪಳ ಕಚೇರಿಯಲ್ಲಿ ಸಹಾಯಕ ನಿರ್ದೇಶಕರ ಹುದ್ದೆಯಲ್ಲಿ ಹೆಚ್ಚುವರಿ ಪ್ರಭಾರದಲ್ಲಿದ್ದ ಗವಿಸಿದ್ದಪ್ಪ ಹೊಸಮನಿ ಅವರು ಸಹಾಯಕ ನಿರ್ದೇಶಕರಾಗಿ ಪದೋನ್ನತಿ ಹೊಂದಿದ್ದಾರೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ರಾಯಚೂರು ಹಿರಿಯ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ವಾರ್ತಾ ಸಹಾಯಕರಾಗಿ ಕಾರ್ಯ ನಿರ್ವಹಿಸುತ್ತಿದ್ದ ಗವಿಸಿದ್ದಪ್ಪ ಅವರಿಗೆ ಸಹಾಯಕ ನಿರ್ದೇಶಕರ ಹುದ್ದೆಗೆ ಸ್ಥಾನಪನ್ನ ಮುಂಬಡ್ತಿ ನೀಡಿ, ಕೊಪ್ಪಳ ಜಿಲ್ಲೆಯ ವಾರ್ತಾ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಗೆ ಸ್ಥಳ ನಿಯುಕ್ತಿಗೊಳಿಸಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಾದ ಹೇಮಂತ್ ನಿಂಬಾಳ್ಕರ ಅವರು ಮೇ 16ರಂದು ಅಧಿಸೂಚನೆ ಹೊರಡಿಸಿದ್ದಾರೆ.

ಮೂಲತಃ ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಗೊರೆಬಿಹಾಳ ಗ್ರಾಮದವರಾದ ಗವಿಸಿದ್ದಪ್ಪ ಹೊಸಮನಿ ಅವರು 2016ರಲ್ಲಿ ವಾರ್ತಾ ಇಲಾಖೆಗೆ ನೇಮಕಗೊಂಡು ವಾರ್ತಾ ಸಹಾಯಕರ ಹುದ್ದೆಯ ಜೊತೆಗೆ ಪ್ರಭಾರಿ ಜಿಲ್ಲಾ ವಾರ್ತಾಧಿಕಾರಿಯಾಗಿ ಬೀದರ, ವಿಜಯಪುರ, ರಾಯಚೂರು, ವಿಜಯನಗರ ಜಿಲ್ಲೆಗಳಲ್ಲಿ ಈ ಹಿಂದೆ ಕಾರ್ಯನಿರ್ವಹಿಸಿದ್ದಾರೆ.

### ಪಾಲಿಕೆ ಸದಸ್ಯೆ ಪತಿಯಿಂದ ಬಡವರಿಗೆ ಮಹಾವಂಚನೆ!

• ಉದಯವಾಹಿನಿ, ಬಳ್ಳಾರಿ

ಜಿಲ್ಲೆಯ ಕಾಂಗ್ರೆಸ್ ಮಹಾನಗರಪಾಲಿಕೆ ಸದಸ್ಯೆ ಉಮಾದೇವಿ ಅವರ ಪತಿ ಶಿವರಾಜ್ ವಿರುದ್ಧ ಬಡವರಿಗೆ ಭೂಮಿ ನೀಡುವ ನೆಪದಲ್ಲಿ ಮಹಾ ವಂಚನೆ ನಡೆಸಿದ ಆರೋಪ ಕೇಳಿಬಂದಿದೆ. ಬೂದಿಹಾಳ ಸರ್ವೇ ನಂಬರ್ 125ರಲ್ಲಿ ಸುಮಾರು 7.87 ಎಕರೆ ಸರ್ಕಾರಿ ಹಳ್ಳದ ಜಾಗವನ್ನು ಒತ್ತುವರಿ ಮಾಡಿ ಶಿವರಾಜ್ ಅವರು ಲೇಔಟ್ ನಿರ್ಮಿಸಿದ್ದರು. ಈ ಲೇಔಟ್‌ನಲ್ಲಿ ಬಡ ಕುಟುಂಬಗಳಿಗೆ ಒಂದೂವರೆಯಿಂದ ಎರಡು ಲಕ್ಷ ರೂಪಾಯಿಗಳಿಗೆ ಪ್ಲಾಟ್‌ಗಳನ್ನು ಮಾರಾಟ ಮಾಡಿದ್ದರು.

ಜನರು ಸಾಲ ಮಾಡಿ ಮನೆಗಳನ್ನು ನಿರ್ಮಿಸಿಕೊಂಡ ನಂತರ, ಜಿಲ್ಲಾಡಳಿತವು ತೆರವು ಕಾರ್ಯಾಚರಣೆಗೆ ಮುಂದಾಗಿದೆ. ಇದರಿಂದ ವಂಚನೆಗೆ ಒಳಗಾದ ಬಡ ಕುಟುಂಬಗಳು ಬೀದಿಪಾಲಾಗಿವೆ. ನಮ್ಮದೇ ಸರ್ಕಾರವಿದೆ, ಭಯಪಡಬೇಡಿ ಎಂದು ಭರವಸೆ ನೀಡಿ ಶಿವರಾಜ್ ಹಣ ಪಡೆದಿದ್ದರು ಎಂದು ಸಂತ್ರಸ್ತರು ಆರೋಪಿಸಿದ್ದಾರೆ. ಇದೀಗ ಸಂತ್ರಸ್ತರು ನ್ಯಾಯಕ್ಕಾಗಿ ಪೊಲೀಸ್ ಠಾಣೆಗೆ ದೂರು ನೀಡಲು ಮುಂದಾಗಿದ್ದಾರೆ.

### ಬೆಳಗಾವಿಯಲ್ಲಿ ಅಕ್ರಮ ಬಾಂಗ್ಲಾ ವಲಸಿಗರ ಭೀತಿ?!:

• ಉದಯವಾಹಿನಿ, ಬೆಳಗಾವಿ

ಕುಂದಾನಗರಿ ಬೆಳಗಾವಿಯಲ್ಲಿ ಅಕ್ರಮ ಬಾಂಗ್ಲಾದೇಶಿ ವಲಸಿಗರು ಬಂದಿದ್ದಾರೆ ಎಂಬ ತೀವ್ರ ಆರೋಪ ಮತ್ತು ಶಂಕೆಯ ಹಿನ್ನೆಲೆಯಲ್ಲಿ ಪೊಲೀಸರು ಭಾರಿ ಕಾರ್ಯಾಚರಣೆ ನಡೆಸಿದ್ದಾರೆ. ಬೆಳಗಾವಿ ಕೇಂದ್ರ ಬಸ್ ನಿಲ್ದಾಣದಿಂದ 20ಕ್ಕೂ ಹೆಚ್ಚು ಜನರನ್ನು ವಶಕ್ಕೆ ಪಡೆದು ಮಾಳಮಾರುತಿ ಪೊಲೀಸ್ ಠಾಣೆಗೆ ಕರೆತಂದ ಡಿಸಿಪಿ ನಾರಾಯಣ ಭರಮನಿ ನೇತೃತ್ವದ ತಂಡ, ಅವರ ದಾಖಲೆಗಳನ್ನು ತೀವ್ರ ಪರಿಶೀಲನೆಗೆ ಒಳಪಡಿಸಿದೆ.

ಶ್ರೀರಾಮಸೇನೆ ಜಿಲ್ಲಾಧ್ಯಕ್ಷ ರವಿ ಕೋಕಿತ್ಕರ್ ನೇತೃತ್ವದ ತಂಡವು, ಹುಬ್ಬಳ್ಳಿಯಲ್ಲೂ ಕೆಲವರ ತಪಾಸಣೆಯಾಗಿದ್ದು, ಮೂರು ಬಸ್‌ಗಳಲ್ಲಿ ಅಕ್ರಮ ಬಾಂಗ್ಲಾ ವಲಸಿಗರು ನಗರಕ್ಕೆ ಬಂದಿದ್ದಾರೆ ಎಂದು ಅನುಮಾನ ವ್ಯಕ್ತಪಡಿಸಿ ತಪಾಸಣೆಗೆ ಒತ್ತಾಯಿಸಿತ್ತು.

